RNI:KARKAN/2021/85750 KPL/L/RNP/02/24-26

# ಕರುನಾಡ ಕಂದ

Volume 4 ಸಂಪುಟ 4 | Issue 15 ಸಂಚಿಕೆ 15 | Date 01-06-2025 | Page 16 ಪುಟ 16 | ಬೆಲೆ: 20/-

FORTNIGHTLY ಪಾಕ್ಷಿಕ ಪತ್ರಿಕೆ

ಸಂಪಾದಕರು: ಬಸವರಾಜ ಬಳಿಗಾರ
ಪೋ.ನಂ: 9986366909

## ವರದಿಯ ಫಲಶೃತಿ : ಕರುನಾಡ ಕಂದ ಪತ್ರಿಕೆಗೆ ಧನ್ಯವಾದ ಸಲ್ಲಿಸಿದ ಗ್ರಾಮದ ರೈತರು






## ದೇವರೇ ವರ ಕೊಟ್ರು ಪೂಜಾರಿ ದಕ್ಷಿಣೆ ಕೇಳಿ ಪೀಡಿಸೋದು ಬಿಡುತ್ತಿಲ್ಲ...?

## ರೈತರ ಸಮಸ್ಯೆಗಳಿಗೆ ಬೆನ್ನೆಲುಬಾಗಿ ನಿಂತ ಸರಕಾರಿ ಅಧಿಕಾರಿಗಳು



## ಸಂಚಾರಿ ಪೋಲಿಸರ ಯಡವಟ್ಟು ಕಿರಿಕಿರಿ!





## ‘ಹೆಣ್ಣು’ ಆಟಕ್ಕುಂಟು ಲೆಕ್ಕಕ್ಕಿಲ್ಲವೆ..?



## ಯಾರದ್ದೋ ತಪ್ಪಿಗೆ ಇನ್ಯಾರಿಗೋ ಶಿಕ್ಷೆ...?




## ನೈತಿಕ ಶಿಕ್ಷಣದಲ್ಲಿ ನಿಮ್ಮ ಮಗುವಿಗೆಷ್ಟು ಗ್ರೇಡ್?

## ಏನಿದು ಸೆಕ್ಷನ್ 69 ಬಿ.ಎನ್.ಎಸ್..?



## ಮನಸ್ಸೆಂಬ ಮಾಂತ್ರಿಕ



ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ರೈತರ ಸಮಸ್ಯೆಗಳಿಗೆ ಬೆನ್ನೆಲುಬಾಗಿ ನಿಂತ ಸರಕಾರಿ ಅಧಿಕಾರಿಗಳು













**ಬೀದರ / ಬಸವಕಲ್ಯಾಣ :** ತಾಲೂಕಿನ ಬಗದುರಿ ಗ್ರಾಮದಲ್ಲಿ ಸುಮಾರು 4 ತಿಂಗಳಿನಿಂದ ಮಂಗಗಳ ಹಾವಳಿಯಿಂದ ಬೇಸತ್ತ ರೈತರು ಸುಮಾರು ಸಲ ಸಂಬಂಧಪಟ್ಟ ತಾಲೂಕು ಅರಣ್ಯ ಅಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಮನವಿ ಸಲ್ಲಿಸಿದ್ದರು ಕೂಡಾ ಏನೂ ಪ್ರಯೋಜನ ಆಗದೆ ಹೈರಾಣಾದ ರೈತರು ಒಂದು ದಿನ ಸಭೆ ಮಾಡಿ, ಈಗಂತೂ ಮಳೆಗಾಲ ಪ್ರಾರಂಭವಾಯಿತು ಭೂಮಿಗೆ ಬೀಜ ಬಿತ್ತನೆ ಪ್ರಾರಂಭ ಮಾಡಿದರೆ ಈ ಮಂಗಗಳ ಹಾವಳಿ ಇದೆ ಹೇಗೆ ಮಾಡುವುದು ಎಂದು ಬೇಸತ್ತು ಒಂದು ದಿನ ತಾಲೂಕಿನ ತಹಶೀಲ್ದಾರರ ಕಚೇರಿಗೆ ಮುತ್ತಿಗೆ ಹಾಕಿ ಕೆಲ ಕಾಲ ಧಿಕ್ಕಾರದ ಘೋಷಣೆ ಕೂಗತೊಡಗಿದರು, ಬಳಿಕ ತಾಲೂಕಿನ ತಹಶೀಲ್ ಕಚೇರಿಗೆ ದೌಡಾಯಿಸಿ ಸಂಬಂಧಪಟ್ಟ ಅಧಿಕಾರಿಗಳು ಎಲ್ಲರೂ ಸೇರಿ ತ್ವರಿತಗತಿಯಲ್ಲಿ ಸಭೆ ಮಾಡಿ ರೈತರ ಕಷ್ಟಗಳಿಗೆ ನಾವೆಲ್ಲಾ ತಾಲೂಕು ಆಡಳಿತ ಅಧಿಕಾ- ರಿಗಳು ಭಾಗಿಯಾಗಿ ನಿಮ್ಮ ಸಮಸ್ಯೆಗಳನ್ನು ಬಗೆ ಹರಿಸುತ್ತೇವೆ ನಾಳೆಯಿಂದಲೇ ಮಂಗಗಳು ಹಿಡಿಯುವ ಕಾರ್ಯಾಚರಣೆ ಪ್ರಾರಂಭ ಮಾಡುತ್ತೇವೆ, ಅದಕ್ಕೆ ಸಂಬಂಧಪಟ್ಟ ಖರ್ಚು ವೆಚ್ಚ ಎಲ್ಲಾ ನೋಡಿಕೊಳ್ಳುತ್ತೇವೆ ಎನ್ನುವುದರ ಮೂಲಕ ರೈತರಿಗೆ ಭರವಸೆ ನೀಡಿ, ರೈತರು ಮಾಡುತ್ತಿರುವ ಅರೆ ಬೆತ್ತಲೆ ಧರಣಿ ಸತ್ಯಾಗ್ರಹ ಅಂತ್ಯಗೊಳಿಸಿದರು. ತದ ನಂತರ ಮಾರನೇ ದಿನವೇ ಮಂಗಗಳು ಹಿಡಿಯುವವರು ಗ್ರಾಮಕ್ಕೆ ಬಂದು ತಮ್ಮ ಕಾರ್ಯಾಚರಣೆ ಪ್ರಾರಂಭ ಮಾಡಿದ ಕೆಲವೇ ಗಂಟೆಗಳಲ್ಲಿ ತಾಲೂಕು ದಂಡಾಧಿಕಾರಿಗಳಾದ ದತ್ತಾತ್ರಿ ಗಾಧಾ, ಹಾಗೂ ಅರಣ್ಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಬಂದು ಮಂಗಗಳ ಹಿಡಿಯುವ ಕಾರ್ಯಾಚರಣೆ ಪರಿಶೀಲನೆ ಮಾಡಿ ರೈತರ ಬೆನ್ನಿಗೆ ನಾವಿದ್ದೇವೆ ನಿಮ್ಮ ಸಮಸ್ಯೆ ಪರಿಹಾರ ಮಾಡುತ್ತೇವೆ. ಎಂದು ರೈತರಿಗೆ ಭರವಸೆ ನೀಡಿದರು. ಬಳಿಕ ಗ್ರಾಮದ ಎಲ್ಲಾ ರೈತರು ತಾಲೂಕಿನ ಎಲ್ಲಾ ಆಡಳಿತ ಅಧಿಕಾರಿಗಳಿಗೆ ಧನ್ಯವಾದ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ರೈತರು ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಕಾವೇರಿ ಯಶ್ವಂತ್ ಕಾಂಬಳೆ, ಗ್ರಾಮ ಪಂಚಾಯತ ಸದಸ್ಯರಾದ ವೆಂಕಟರಾವ್ ಬಿರಾದಾರ, ಭೀಮ್ಯಾಶಾ ಮಂದಿರಕರ ಸೇರಿದಂತೆ ಗ್ರಾಮದ ಮುಖಂಡರು ಹಾಗೂ ಹಿರಿಯರು ಇದ್ದರು.

**ವರದಿ : ಶ್ರೀನಿವಾಸ ಬಿರಾದಾರ**

# ಪೌರ ಕಾರ್ಮಿಕರ ಬೆನ್ನಿಗೆ ನಿಂತ ಬಹುಜನ ಸಮಾಜ ಪಕ್ಷ



**ಬೀದರ :** ಬಸವಕಲ್ಯಾಣ ನಗರಸಭೆ ಎದುರುಗಡೆ ಪೌರ ಕಾರ್ಮಿಕರಿಂದ ನಡೆಯುತ್ತಿರುವ ಮುಷ್ಕರಕ್ಕೆ ಬಹುಜನ ಸಮಾಜ ಪಕ್ಷ ಬಸವಕಲ್ಯಾಣ ಘಟಕದ ವತಿಯಿಂದ ಸಂಪೂರ್ಣ ಬೆಂಬಲ ನೀಡಲಾಯಿತು.

ಈ ಸಂದರ್ಭದಲ್ಲಿ ತಾಲೂಕಾಧ್ಯಕ್ಷರು ಶಂಕರ್ ಫುಲೆ, ರಾಜ್ಯ ಕಾರ್ಯದರ್ಶಿಗಳು ಜ್ಞಾನೇಶ್ವರ್ ಸಿಂಗಾರೆ, ತಾಲೂಕ ಸಂಯೋಜ- ಕರಾದ ದತ್ತು ಸುಂತಾಣೆ, ಮಕ್ಬುಲ್ ಸಾಬ್, ತಾಲೂಕ ಉಪಾಧ್ಯಕ್ಷರು ರಮೇಶ್ ರಾಥ- ೋಡ್, ಮಸ್ತಾನ್ ಸಾಬ್ ಲದ್ದಾಫ್ ನಗರ ಘಟಕ ಅಧ್ಯಕ್ಷರು ಚಂದ್ರಶೀಲ ಗಾಯಕ್ವಾಡ್ ನಗರ ಘಟಕ ಕಾರ್ಯದರ್ಶಿ ಆಕಾಶ್ ಮಳಿಗೆ ಶುಭಮ್ ಸದಾನಂದ ನಗರ ಘಟಕ ಪ್ರದಾನ್ ಕಾರ್ಯದರ್ಶಿಗಳು ಹರಕೂಡ ಗ್ರಾಮ ಘಟಕ ಉಪಾಧ್ಯಕ್ಷರು ಸಾಗರ ಯಮಹಾನ ಪ್ರಶಾಂತ ಹುಡ್ಡೆ ಹಾಗೂ ಕಾರ್ಮಿಕರು ಪದಾಧಿಕಾ- ರಿಗಳು ಉಪಸ್ಥಿತರಿದ್ದರು.

**ವರದಿ : ಶ್ರೀನಿವಾಸ ಬಿರಾದಾರ**

# ಅಭಿನಂದನೆಗಳು

ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕು ಅಲಬೂರು ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಶ್ರೀಮತಿ ಹೆಚ್.ಎಂ. ವಪ್ಪತ್ತೆಮ್ಮ ಸಿದ್ದೇಶ್ವರ, ಉಪಾಧ್ಯಕ್ಷರಾಗಿ ಸಿ. ಅಂಜಿನಪ್ಪ ಅವರು ಆಯ್ಕೆಯಾದರು. ಮುಂದಿನ ದಿನಗಳಲ್ಲಿ ಇವರುಗಳು ಗ್ರಾಮ ಅಭಿವೃದ್ಧಿಗೆ ಕೈ ಜೋಡಿಸಿ ಉತ್ತಮ ಗುಣಮಟ್ಟದ ಕೆಲಸಗಳನ್ನು ಮಾಡುವುದರ ಮೂಲಕ ತಮ್ಮ ಯಶಸ್ವಿ ಸಮಾಜ ಸೇವೆಯನ್ನು ಮಾಡುವುದರ ಮೂಲಕ ತಮ್ಮ ಅಧಿಕಾರವನ್ನು ನಿರ್ವಹಿಸುತ್ತಾರೆಂದು, ಊರಿನ ಗಣ್ಯರು, ಊರಿನ ಎಲ್ಲಾ ಜನಸ್ತೋಮ ಇವರನ್ನು ಈ ಗದ್ದುಗೆಗೆ ಏರಿಸಿದ್ದಾರೆ, ಈ ಚುನಾವಣೆಯನ್ನು ತಾಲೂಕು ತಹಶೀಲ್ದಾರರು ಹಾಗೂ ದಂಡಾಧಿಕಾರಿಗಳಾದ ಅಂಬರಿಷ್ ಹಾಗೂ ಇಟ್ಟಿಗಿ ಆರಕ್ಷಕ ಸಿಬ್ಬಂದಿ ಪಿ.ಎಸ್.ಐ



ಅಬ್ಬಾಸ್ ,ಆರಕ್ಷಕರು ಟಿ. ಪ್ರಕಾಶ್ ಮತ್ತು ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಎ.ಶಿವಾನಂದಪ್ಪ , ಜಿ ಶಿಲ್ಪಾ ವೀರನಗೌಡ, ಎ. ಬಿ.ಜಂಬಣ್ಣ, ತಳವಾರ ರೇಖಾ ಶಿವನಾಗ, ಉಜ್ಜಿನಿ ನಾಗರಾಜ ಬೆನ್ನೂರು ನಿರ್ಮಲವ್ವ ಮಲ್ಲೇಶಪ್ಪ, ಸಿ.ಚಂದ್ರಮ್ಮ ವಾಮದೇವ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಹನುಮಂತ ಕುಮಾರ ಮತ್ತು ಕಾರ್ಯದರ್ಶಿ ಮಾರುತಿ ಪೂಜಾರ್, ಬಿಲ್ ಕಲೆಕ್ಟರ್ ಎ. ಕೊಟ್ರೇಶ್ ಮತ್ತು ಪಂಚಾಯಿತಿ ಸಿಬ್ಬಂದಿ ವರ್ಗ,ಮಾಜಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು ಎಸ್ ಎಸ್ ಎಂ ಶಿವರುದ್ರಯ್ಯ, ಬಾತಿ ಕೊಟ್ರೇಶ್, ಅಂಕ್ಲಿ ರಾಮಣ್ಣ, ವಿ. ಎಸ್. ಎಸ್. ಎನ್.ಸಿಬ್ಬಂದಿ ಎನ್ ಹಾಲೇಶ್, ಸಿವಿಲ್ ಗುತ್ತಿಗೆದಾರರಾದ ಎನ್. ಹೇಮಣ್ಣ, ಜಿ. ಗಣೇಶ್ ವಿಜಯನಗರ ಜಿಲ್ಲಾ ನವಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷರು ಹಾಗೂ ಕೊಟ್ಟೂರು ತಾಲೂಕು ಅದ್ಯಕ್ಷರು ಯು. ಕರಿಬಸಪ್ಪ, ಕೆ.ಪ್ರಕಾಶ್, ಎನ್. ವೀರೇಶ್ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಎಸ್.ಡಿ. ಎಂ.ಸಿ. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಪ್ರೌಢಶಾಲೆಯ ಮುಖ್ಯಗುರುಗಳಾದ ಮಂಗಳಮ್ಮ , ಪ್ರಾಥಮಿಕ ಶಾಲೆಯ ಮುಖ್ಯಗುರುಗಳಾದ ಮಹಾಬಲೇಶ್ವರ ಹಾಗೂ ಊರಿನ ಎಲ್ಲಾ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

**ವರದಿಗಾರರು- ಎನ್. ಚಂದ್ರಗೌಡ**

# ಸ್ನೇಹ ಸಾಗರ ಬಳಗ ಹಾಗೂ ಗ್ರಾಮಸ್ಥರಿಂದ ನಿವೃತ್ತ ಯೋಧರಿಗೆ ಸನ್ಮಾನ ಕಾರ್ಯಕ್ರಮ

**ವಿಜಯನಗರ/ ಕೂಡ್ಲಿಗಿ :** ಸತತ 21 ವರ್ಷ ಭಾರತ ಗಡಿ ಭದ್ರತಾ ಪಡೆಯಲ್ಲಿ ( ಬಿ.ಎಸ್.ಎಫ್.)ನಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ತವರಿಗೆ ಮರಳಿದ ವೀರ ಯೋಧ ಜಿ. ಶರಣೇಶ್ ಯಾದವ್ ಕ್ಯಾಸನಕೆರೆ ಹಾಗೂ ಅವರ ಧರ್ಮಪತ್ನಿಯವರಿಗೆ ಶ್ರೀ ಸಿದ್ದಲಿಂಗೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ 1999-2000 ಸಾಲಿನಲ್ಲಿ ವಿದ್ಯಾಭ್ಯಾಸ ಮಾಡಿದ ಸ್ನೇಹ ಸಾಗರ ಬಳಗದಿಂದ ಶ್ರೀ ಶರಣಬಸವೇಶ್ವರ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಸನ್ಮಾನ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ದಾ.ಮ. ಶರಣಾಚಾರ್ಯರು ದಾಸೋಹ ಮಠ ಕಾನಾಮಡುಗು ಇವರು ವಹಿಸಿಕೊಂಡರು, ಕಾರ್ಯಕ್ರಮದ



ನಿರೂಪಣೆಯನ್ನು ತುಂಬಾ ಅಚ್ಚುಕಟ್ಟಾಗಿ ಬಸವರಾಜ್ ಕೆ ಇವರು ನಡೆಸಿಕೊಟ್ಟರು, ಸ್ವಾಗತ ಭಾಷಣ ಶರಣಬಸಪ್ಪ ಕೆ., ವಂದನಾರ್ಪಣೆ ಬಸೆಟ್ಟಪ್ಪ ಡಿ ಎಮ್ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಸಿ. ಆರ್. ಪಿ. ಎಫ್ ನಲ್ಲಿ ದೇಶ ಸೇವೆ ಮಾಡಿ ಸ್ವಯಂ ನಿವೃತ್ತಿ ಪಡೆದ ಆಲೂರು ಯೋಧ ಯಾಹಿಯಾ ಇವರಿಗೂ ಸಹ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ನಾಗಲಿಂಗಪ್ಪ ಪ್ರಾಂಶುಪಾಲರು ಶ್ರೀ ಸಿದ್ದಲಿಂಗೇಶ್ವರ ಪದವಿ ಪೂರ್ವ ಕಾಲೇಜಿನ ದಯಾನಂದ್ ಸಜ್ಜನ್ ಹುಲಿಕೆರೆ ಇವರು ಉಪಸ್ಥಿತರಿದ್ದರು.

ಎನ್. ಪಕೀರಪ್ಪ, ಬಸವ ಕುಮಾರ್ ಟಿ. ಸಿ, ತಿಪ್ಪೇರುದ್ರಪ್ಪ ಬಿಜಿ, ಶರಣಬಸಪ್ಪ .ಕೆ., ಪೋಲಿಸ್ ಇಲಾಖೆಯ ಪ್ರಕಾಶ್ , ವಿಜಯಕುಮಾರ್ ಸೇರಿದಂತೆ ಪ್ರತಾಪ್ ಸಿಂಹ, ಮಂಜಣ್ಣ ಹೊಸಳ್ಳಿ, ಹೇಮಗಿರಿ, ಕೆ. ಎನ್. ಮಂಜುನಾಥ, ಸತೀಶ್, ಬಿ. ಮಂಜುಳಾ, ಕೆ ಪಿ ಆಶಾ, ಪರಿಮಳ, ಗೀತಾ, ಬಸಮ್ಮ, ಗಿರಿಜಮ್ಮ, ನೂರ್ ಜಾನ್ ಬಿ ಹಾಗೂ ನೂರಾರು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಭಾಗವಹಿಸಿದ್ದರು.

**ವರದಿ : ಗುರುರಾಜ್ ಎಲ್, ಕಲ್ಲಹಳ್ಳಿ ಟಿ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ವರದಿಯ ಫಲಶ್ರುತಿ : ಕರುನಾಡ ಕಂದ ಪತ್ರಿಕೆಗೆ ಧನ್ಯವಾದ ಸಲ್ಲಿಸಿದ ಗ್ರಾಮದ ರೈತರು



ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಬಗದುರಿ ಗ್ರಾಮದಲ್ಲಿ ಮಂಗಗಳ ಹಾವಳಿ ಹೆಚ್ಚಾದುದರಿಂದ ಗ್ರಾಮದ ರೈತರು ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಸೇರಿದಂತೆ ವಲಯ ಅರಣ್ಯಾಧಿಕಾರಿಗಳಿಗೆ ಸುಮಾರು ಸಲ ಅರ್ಜಿ ಕೊಟ್ಟರೂ ಸಹ ಸಮಸ್ಯೆ ಬಗೆಹರಿಯದ ಕಾರಣ ಕರುನಾಡ ಕಂದ ಪತ್ರಿಕೆಯ ಮೇ 16, 2025 ರ ಸಂಚಿಕೆಯಲ್ಲಿ ವರದಿ ಪ್ರಕಟಿಸಲಾಗಿತ್ತು ತದ ನಂತರ ಸುದ್ದಿ ಪ್ರಕಟವಾದ ಮರು ದಿನವೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾ-ರಿಗಳು ಗ್ರಾಮಕ್ಕೆ ಬಂದು ರೈತರ ಸಮಸ್ಯೆ ಬಗೆಹರಿಸಿ ಪರಿಹಾರ ಒದಗಿಸುವ ಭರವಸೆ ಕೊಟ್ಟ ನಂತರ ಗ್ರಾಮದ ರೈತರು ಸಂತೋಷಗೊಂಡು ನಮ್ಮೆಲ್ಲರ ಹೋರಾಟಕ್ಕೆ “ಕರುನಾಡ ಕಂದ ಪತ್ರಿಕೆ” ತುಂಬಾ ಸಹಕಾರ ಮಾಡಿದೆ ಎಂದು ಧನ್ಯವಾದಗಳನ್ನು ಸಲ್ಲಿಸಿ ,ಪತ್ರಿಕೆಗೆ ಶುಭ ಹಾರೈಸಿದರು.


ವರದಿ : ಶ್ರೀನಿವಾಸ ಬಿರಾದಾರ

# ಅನಧಿಕೃತ ನಿವೇಶನಗಳ ಸೃಷ್ಟಿಗೆ ಕಾರಣವಾಗದಂತೆ ಬಿ-ಖಾತಾ ನೀಡದಿರಲು ಮನವಿ

**ಯಾದಗಿರಿ/ಗುರುಮಠಕಲ್:** ಪಟ್ಟಣದ ಸರ್ವೆ ನಂಬರ್ 90 ರಲ್ಲಿ ಬರುವ ಕೆಲವು ನಿವೇಶನಗಳು, ಕೆಲ ಖಾಲಿ ಸ್ಥಳಗಳು ಸಂಪೂರ್ಣ ಪುರಸಭೆಯ ಅಸ್ತಿಯಾಗಿದ್ದು ಮತ್ತು ಸರ್ವೇ ನಂಬರ್ 91 ಸಂಪೂರ್ಣ ಸರಕಾರಿ ಜಮೀನಾಗಿದ್ದು ಈ ಜಮೀನನ್ನು ಸರ್ಕಾರದ ಕೆಲ ಇಲಾಖೆಗಳಿಗೆ ಕಾಯ್ದಿರಿಸಲಾಗಿದೆ, ಸರಕಾರದ ಹೊಸ ಬಿ-ಖಾತಾ ಹಂಚಿಕೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಕೆಲ ವ್ಯಕ್ತಿಗಳು ತಮ್ಮ ಪ್ರಭಾವ ಬಳಸಿ ವಾಮ ಮಾರ್ಗ ಬಳಸಿ ತಮ್ಮ ಹೆಸರಿಗೆ ಸರಕಾರಿ ನಿವೇಶನಗಳನ್ನು ಮಾಡಿಕೊಳ್ಳುವ ದುರುದ್ದೇಶದಿಂದ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಬಿ- ಖಾತಾ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಈಗಾಗಲೇ ಅವರು ಆ ನಿವೇಶನಗಳನ್ನು ಬಳಕೆ ಮಾಡುತ್ತಿದ್ದು ಕೆಲವರು ಖಾಲಿ ಸ್ಥಳಗಳಲ್ಲಿ ಮನೆಗಳನ್ನು ಸಹ ನಿರ್ಮಾಣ ಮಾಡಿಕೊಂಡಿದ್ದಾರೆ ಇನ್ನೂ ಕೆಲವರು ಕಬ್ಜಾ ಮಾಡಿ ತಮ್ಮ ಉಪಯೋಗಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ, ಖೊಟ್ಟಿ ದಾಖಲೆ ಸೃಷ್ಟಿಸಿ ಬಿ □ ಖಾತಾ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಸರಕಾರಿ ಸ್ಥಳಗಳನ್ನು ಅತಿಕ್ರಮಿಸಿ ಈಗಾಗಲೇ ಸೃಷ್ಟಿಸಲಾದ ಖೊಟ್ಟಿ ದಾಖಲೆಗಳಿಗೆ ಬಿ- ಖಾತಾ



ನೀಡಬೇಕೆಂಬ ನಿರ್ದೇಶನ ಕೂಡಾ ಸರಕಾರ ಮಾಡಿರುವುದಿಲ್ಲ ಅದು ಅಪರಾಧವಾಗಿರುತ್ತದೆ ಹೀಗಿರುವಾಗ ಸರಕಾರ ವಿವಿಧ ಇಲಾಖೆಗಳ ಅನುಕೂಲಕ್ಕಾಗಿ ಕಾಯ್ದಿರಿಸಿದಂತಹ ಸ್ಥಳಗಳ ಸಂರಕ್ಷಣೆ ಸಾರ್ವಜನಿಕರಿಗಿಂತ ಸರಕಾರಿ ಅಧಿಕಾರಿಗಳೇ ಹೆಚ್ಚು ನಿಗಾ ವಹಿಸಬೇಕಾಗಿದೆ ಯಾವುದೇ ಕಾರಣಕ್ಕೂ ಬಿ- ಖಾತಾ ಹಂಚಿಕೆ ಮಾಡಬಾರದು ಎಂದು ಗುರುಮಠಕಲ್ ಪುರಸಭೆಯ ಮುಖ್ಯಾಧಿಕಾರಿಗಳಾದ ಶ್ರೀಮತಿ ಭಾರತಿ ದಂಡೋತಿ ಹಾಗೂ ಗುರುಮಠಕಲ್ ಉಪ ತಹಶೀಲ್ದಾರ್ ನರಸಿಂಹಸ್ವಾಮಿ ಅವರ ಮುಖಾಂತರ ಮಾನ್ಯ ಜಿಲ್ಲಾಧಿಕಾರಿಗಳು ಯಾದಗಿರಿ ಇವರಿಗೆ ಸಂಜೀವ್ ಕುಮಾರ್ ಅಳೆಗಾರ್ ಸಾಮಾಜಿಕ ಕಾರ್ಯಕರ್ತ ಮತ್ತು ರಾಮು ಕೊಡಗಂಟಿ ಸಾಮಾಜಿಕ ಕಾರ್ಯಕರ್ತ ಮನವಿಯನ್ನು ನೀಡಿದ್ದಾರೆ.

ಮುಖ್ಯಾಧಿಕಾರಿಗಳಾದ ಶ್ರೀಮತಿ ಭಾರತಿ ದಂಡೋತಿ ಈ ಮನವಿ ಕುರಿತಾಗಿ ಪ್ರತಿಕ್ರಿಯೆ ನೀಡಿ ಗುರುಮಠಕಲ್ ಪಟ್ಟಣದ ಸರ್ವೇ ಸಂಖ್ಯೆ 90ರಲ್ಲಿ ಸರಕಾರಕ್ಕೆ ಸಂಬಂಧಿಸಿದ ಸ್ಥಳಗಳನ್ನು ಅತಿಕ್ರಮಿಸಿದ ಸ್ಥಳಗಳಿಗೆ ಯಾವುದೇ ಕಾರಣ-ಕ್ಕೂ ಬಿ- ಖಾತಾ ನೀಡುವುದಿಲ್ಲ ಹಾಗೂ ಸರ್ವೇ ನಂಬರ್ 91 ಸಂಪೂರ್ಣ ಸರಕಾರಿ ಜಮೀನು ಆಗಿದ್ದು, ಅದಕ್ಕೂ ಸಹ ಬಿ-ಖಾತಾ ಆಗಲಿ ಇನ್ನಾವುದಾಗಲಿ ನೀಡುವುದಿಲ್ಲ, ಸರಕಾರಿ ಜಮೀನು ವಶಪಡಿಸಿಕೊಳ್ಳಲು ಯಾರಿಗೂ ಅವಕಾಶ ನೀಡುವುದಿಲ್ಲ ಎಂದು ಮನವಿದಾರರಿಗೆ ಭರವಸೆ ನೀಡಿದ್ದಾರೆ ಎಂದು ಪತ್ರಿಕೆಗೆ ತಿಳಿಸಿದ್ದಾರೆ.

ವರದಿ: ಜಗದೀಶ್ ಕುಮಾರ್ ಭೂಮಾ

# ಬೆಂಗಳೂರಿನಲ್ಲಿ “ಕರುನಾಡ ಕಂದ”

**ಬೆಂಗಳೂರು:** ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಘ ಇದರ ವತಿಯಿಂದ ಎರಡು ದಿನಗಳ ಕಾಲ ಜರುಗುತ್ತಿರುವ ಎಂ. ಎಸ್. ಎಂ. ಇ ಸಮಾವೇಶದಲ್ಲಿ ಕರುನಾಡ ಕಂದ ಪತ್ರಿಕೆಯ ವರದಿಗಾರರಾದ ಶ್ರೀ ಕೊಡಕ್ಕಲ್ ಶಿವಪ್ರಸಾದ್ ಶಿವಮೊಗ್ಗ ಅವರು ಎಫ್.ಕೆ.ಸಿ.ಸಿ.ಐ ನಿರ್ದೇಶಕಿ, ರೋಟರಿ ಬೆಂಗಳೂರು ಮಾಜಿ ಅಧ್ಯಕ್ಷೆ ಹಾಗೂ ಕ್ವೀನ್ಸ್ ಗ್ಲೋಬಲ್ ಎಜುಕೇಶನ್ ಸಂಸ್ಥೆಯ ಸಂಸ್ಥಾಪಕಿ ಡಾ. ಮಧುರಾಣಿ ಗೌಡ ಅವರನ್ನು ಭೇಟಿ ಮಾಡಿ ಕರುನಾಡ ಕಂದ ಪತ್ರಿಕೆಯನ್ನು ಪರಿಚಯಿಸಿದರು.

ಈ ಸಂದರ್ಭದಲ್ಲಿ ಶ್ರೀ ಎಸ್. ನಂಜುಂಡ ಪ್ರಸಾದ್, ಎಫ್ ಕೆ ಸಿ ಸಿ ಐ ಇದರ ಕೋ- ಚೇರ್ಮನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.




## ಕರುನಾಡ ಕಂದ ಪತ್ರಿಕೆಯ ವಾರ್ಷಿಕ ಚಂದಾ ವಿವರ

ವಾರ್ಷಿಕ ಚಂದಾ =500/- ರೂಪಾಯಿಗಳು ಮಾತ್ರ (ಅಂಚೆ ವೆಚ್ಚ ಸೇರಿ)

ಫೋನ್ ಪೇ,ಗೂಗಲ್ ಪೇ ಅಥವಾ ಕ್ಯೂ ಆರ್ ಕೋಡ್ ಮೂಲಕ ಹಣ ಪಾವತಿಸಿ ನಿಮ್ಮ ಸಂಪೂರ್ಣ ವಿಳಾಸವನ್ನು ವಾಟ್ಸ್ ಆಪ್ ಮಾಡಿ.

KARUNADA KANDA

-ಬಸವರಾಜ ಬಳಿಗಾರ, ಸಂಪಾದಕರು

9742776385



ಬಸವಕಲ್ಯಾಣ ಶಾಸಕರಾದ ಶ್ರೀ ಶರಣು ಸಲಗರ ಅವರೊಂದಿಗೆ ಕರುನಾಡ ಕಂದ ಪತ್ರಿಕೆ.

ಕರುನಾಡ ಕಂದ
ಸಂಪುಟ 04 | ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ಸರಣಿ ಕಳ್ಳತನ : ಕುಳಗೇರಿಯಲ್ಲಿ ಕಳ್ಳರ ಹಾವಳಿ, ಬಡಾವಣೆಗಳಲ್ಲಿ ಭಯದ ಆತಂಕ



**ಬಾಗಲಕೋಟೆ/ ಕುಳಗೇರಿ ಕ್ರಾಸ್ :** ಗ್ರಾಮದ ರಾಷ್ಟ್ರೀಯ ಹೆದ್ದಾರಿ ಪಕ್ಕ ಬಡಾವಣೆಯಲ್ಲಿನ ಸುಮಾರು ಮೂರ್‍ನಾಲ್ಕು ಮನೆಗಳಲ್ಲಿ ಸರಣಿ ಕಳ್ಳತನ ನಡೆದಿದ್ದು, ಕಳ್ಳರು ಹಣ ಮತ್ತು ಒಡವೆಗಳನ್ನು ದೋಚಿ ಪರಾರಿಯಾಗಿದ್ದಾರೆ. ಇತ್ತೀಚಿಗೆ ಮಧ್ಯರಾತ್ರಿ ನಾಲ್ಕು ಜನ ಮುಸುಕುಧಾರಿ ಕಳ್ಳರು ಕೈಯಲ್ಲಿ ರಾಡ್ ಹಿಡಿದುಕೊಂಡು ರಾಜಾರೋಷವಾಗಿ ಓಡಾಡಿದ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದ್ದು, ಸ್ಥಳಕ್ಕೆ ಶ್ವಾನದಳದೊಂದಿಗೆ ಬೆರಳಚ್ಚು ತಜ್ಞರು ಸೇರಿಕೊಂಡು ಸ್ಥಳಿಯ ಪೊಲೀಸ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕೀಲಿ ಹಾಕಿದ ಮನೆಗಳನ್ನೇ ಟಾರ್ಗೆಟ್ ಮಾಡಿದ ಕಳ್ಳರು ತಪ್ಪಸಕಟ್ಟಿ ರಸ್ತೆಗೆ ಹೊಂದಿಕೊಂಡ ಬಡಿಗೇರ ಮನೆಯಲ್ಲಿ ಹಾಗೂ ಹೆದ್ದಾರಿಗೆ ಹೊಂದಿಕೊಂಡ ಶಿಕ್ಷಕ ಜಕಾತಿಯವರ ಮನೆಯಲ್ಲಿ ನಗದು ಬಂಗಾರ ದೋಚಿ ಪರಾರಿಯಾಗಿದ್ದಾರೆ. ಇನ್ನುಳಿದ ಎರಡು ಮನೆಗಳಲ್ಲಿ ಕನ್ನ ಹಾಕಿದ ಕಳ್ಳರು ಬರಿಗೈಯಲ್ಲಿ ವಾಪಾಸ್ಸಾಗಿದ್ದಾರೆ.

ಗ್ರಾಮದ ಎರಡು ಬಡಾವಣೆಗಳಲ್ಲಿ ಕಳ್ಳರು ಎಲ್ಲಾ ಮನೆಗಳ ಬಾಗಿಲಿಗೆ ಟಾರ್ಚ್(ಬ್ಯಾಟರಿ) ಹಾಕಿ ನೋಡುತ್ತಾ ರಾಜಾರೋಷವಾಗಿ ಓಡಾಡಿದ್ದು ಸಿ. ಸಿ ಟಿವಿಯಲ್ಲಿ ಸೆರೆಯಾಗಿದೆ. ಮನೆಯ ಹೊರಗಡೆ ಕೀ ಹಾಕಿದ್ದನ್ನು ಖಚಿತಪಡಿಸಿಕೊಂಡು ಕಳ್ಳತನ ಮಾಡಿದ್ದಾರೆನ್ನಲಾಗಿದೆ, ಬಡಾವಣೆಯಲ್ಲಿ ಕಳ್ಳರ ರಾಜಾರೋಷ ಓಡಾಟ, ಸರಣಿ ಕಳ್ಳತನ ಜನರಲ್ಲಿ ಭಯದ ಆತಂಕ ಮನೆ ಮಾಡಿದೆ.

**ಇಲ್ಲಿ ಪೊಲೀಸರ ಭಯ ಇಲ್ಲವೇ ಇಲ್ಲ :** ಗ್ರಾಮದಲ್ಲಿ ಪೊಲೀಸ್ ಠಾಣೆ ಇದೆ ಆದರೆ ಕಳ್ಳರಿಗೆ ಯಾವ ಭಯವೂ ಇಲ್ಲ. ಕಾರಣ ಈ ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿ ಕೊರತೆಯಂತೆ. 21 ಗ್ರಾಮಗಳಿರುವ ಈ ಪೊಲೀಸ್ ಉಪಠಾಣೆಗೆ ನಾಲ್ಕೈದು ಜನ ಸಿಬ್ಬಂದಿ ಕಾರ್ಯ ನಿರ್ವಹಿಸಬೇಕು ಅದೃಷ್ಟವೋ ದುರಾದೃಷ್ಟವೋ ಒಬ್ಬರು ಹೆಚ್ಚೆಂದರೆ ಇಬ್ಬರು ಮಾತ್ರ ಕಾರ್ಯ ನಿರ್ವಹಿಸುತ್ತಾರೆ. ಇದೇ ಚಾನ್ಸು ಎಂಬಂತೆ ಸಮಯ ನೋಡಿ ಹೊಂಚು ಹಾಕುವ ಕಳ್ಳರು ಈ ಗ್ರಾಮವನ್ನೇ ಬಂಡವಾಳ ಮಾಡಿಕೊಂಡಿದ್ದಾರೆ.

**ವರದಿ ನಿಂಬಯ್ಯ ಕುಲಕರ್ಣಿ**

# ಶಾಸಕರಿಂದ ರಸ್ತೆ ಕಾಮಗಾರಿ ಭೂಮಿ ಪೂಜೆ



ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕುಳಗೇರಿ ಕ್ರಾಸ್ ಸಮೀಪದ ಸವದತ್ತಿ ಪಟ್ಟದಕಲ್ಲು ರಾಜ್ಯ ಹೆದ್ದಾರಿ 14 ಕ್ಕೆ ಹೊಂದಿಕೊಂಡಿರುವ ಬೆಳವಳಕೊಪ್ಪ ಕ್ರಾಸ್ ನಿಂದ ಬಂಕನೇರಿ ವಡವಟ್ಟಿ ಜಿಲ್ಲಾ ಮುಖ್ಯ ರಸ್ತೆವರೆಗಿನ ರಸ್ತೆ ಕಾಮಗಾ- ರಿಗೆ ಶಾಸಕರಾದ ಶ್ರೀ ಭೀಮಸೇನ ಚಿಮ್ಮನಕಟ್ಟಿ ಭೂಮಿ ಪೂಜೆಯನ್ನು ನೆರವೇರಿಸಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಎ.ಇ.ಇ ವೈ. ಎಫ್. ಆಡಿನ, ಯಲ್ಲಪ್ಪ ಹುಳ್ಳಿ, ವಾಸೂರಾಜ ಭಾವಿ, ಶಿವಾನಂದ ಜಾಲಿಹಾಳ, ಗ್ರಾ.ಪಂ. ಸದಸ್ಯರಾದ ದ್ಯಾಮಣ್ಣ ಅನಾವಲ್, ಅಡಿವೆಪ್ಪ ಬೆಳ್ಳೇರಿ, ನೀಲಪ್ಪ ಕಂಬಳಿ, ಶಿವಮೂರ್ತಿ ಹಿರೇಮಠ, ಭೀಮನಗೌಡ ಸುಂಕದ, ಫಕೀರಡ್ಡಿ ಸಂಕದಾಳ ಇನ್ನೂ ಮುಂತಾದವರು ಉಪಸ್ಥಿತರಿದ್ದರು.

**-ವರದಿ: ನಿಂಬಯ್ಯ ಕುಲಕರ್ಣಿ**

# ಮಾಜಿ ಪ್ರಧಾನಮಂತ್ರಿ ದಿ. ರಾಜೀವ್ ಗಾಂಧಿಯವರ ಪುಣ್ಯಸ್ಮರಣೆ



ಬಾಗಲಕೋಟೆ ಜಿಲ್ಲೆಯ ಕಾಂಗ್ರೆಸ್ ಪ್ರಧಾನ ಕಚೇರಿಯಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ದಿ. ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಎಸ್ ಜಿ ನಂಜಯ್ಯನಮಠ, ಶ್ರೀ ಮಹೇಶ ಎಸ್ ಹೊಸಗೌಡ್ರ , ಶ್ರೀನಿವಾಸ ಬಳ್ಳಾರಿ,ಶ್ರೀ ಎಚ್. ಬಿ. ಗೋರವರ ಹಾಗೂ ಕಾಂಗ್ರೆಸ್ ಪಕ್ಷದ ಯುವ ಮುಖಂಡರು ಗುರು ಹಿರಿಯರು ಹಾಗೂ ಯುವಕ ಮಿತ್ರರು, ಭಾಗವಹಿಸಿ ಯಶಸ್ವಿಗೊಳಿಸಿದರು.

**ವರದಿ : ಅಬ್ದುಲಸಾಬ ನಾಯ್ಕರ**

# ಶ್ರೀ ಸಂತ ತುಳಸಿದಾಸ ಮಹಾರಾಜರ ಬೆಳ್ಳಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಜಾತ್ರಾ ಮಹೋತ್ಸವ




ಬೀದರ್ ಜಿಲ್ಲೆಯ ಔರಾದ ತಾಲೂಕಿನ ಕೌಠಾ (ಬಿ.) ಗ್ರಾಮದಲ್ಲಿ ಶ್ರೀ ಸಂತ ತುಳಸಿದಾಸ ಮಹಾರಾಜರ ಬೆಳ್ಳಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಸಪ್ತಾಹ ಕಾರ್ಯಕ್ರಮ ಜರುಗಿತು.

ಶ್ರೀ ಕ್ಷೇತ್ರ ಕೌಠಾ ಬಿ. ಗ್ರಾಮದಲ್ಲಿ ದಿ. 15 /5/25 ರಂದು ಸಪ್ತಾಹ ಕಾರ್ಯಕ್ರಮ ಪ್ರಾರಂಭವಾಗಿ ಏಳು ದಿವಸಗಳ ಕಾಲ ನಡೆಯಿತು.

ಶ್ರೀ ಷ. ಬ್ರ.108 ಶಿವಲಿಂಗ ಶಿವಾಚಾರ್ಯ ಹಾಗೂ ಶ್ರೀ ಶಿವಲಿಂಗೇಶ್ವರ ಸಂಸ್ಥಾನ ಮಠ ಹೆಡಗಾಪೂರ್ ಅವರ ದಿವ್ಯ ಸನ್ನಿಧಾನದಲ್ಲಿ ದಿ. 21-5-2025 ರಂದು ಸಮಯ ಮುಂಜಾನೆ 9:00 ಗಂಟೆಗೆ ತುಳಸಿದಾಸ ಮಹಾರಾಜರ ಬೆಳ್ಳಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಿಯ ಪೂರ್ವಕವಾಗಿ ಈ ಏಳು ದಿವಸ ಕಾಲ ಎಲ್ಲರೂ ತನು ಮನ ಧನದಿಂದ ಭಾಗವಹಿಸಿ ಶ್ರೀ ಸಂತ ತುಳಸಿದಾಸ ಮಹಾರಾಜರ ಕೃಪಾಶೀರ್ವಾದಕ್ಕೆ ಪಾತ್ರರಾದರು.

**ವರದಿ :ಸಂಗಮೇಶ್ ಚಿದ್ರೆ**

# ಶ್ರೀ ಮೈಲಾರಲಿಂಗೇಶ್ವರ ಪತ್ತಿನ ಸಹಕಾರ ಸಂಘ ಉದ್ಘಾಟನಾ ಸಮಾರಂಭ




ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕುಳಗೇರಿ ಕ್ರಾಸ್ ನಲ್ಲಿ ಶ್ರೀ ಮೈಲಾರಲಿಂಗೇಶ್ವರ ಪತ್ತಿನ ಸಹಕಾರ ಸಂಘ ಉದ್ಘಾಟನೆ ಮಾಡಲಾಯಿತು.

ಈ ಸಮಾರಂಭಕ್ಕೆ ಆಗಮಿಸಿದ್ದ ಪರಮಪೂಜ್ಯ ಶ್ರೀ ಅಭಿನವ ಶ್ರೀ ಒಪ್ಪತೇಶ್ವರ ಮಹಾಸ್ವಾಮೀಜಿಗಳು, ಪರಮಪೂಜ್ಯ ಶ್ರೀ ನೀಲಲೋಹಿತ್ ಸ್ವಾಮಿಗಳು ಸೋಮನಕೊಪ್ಪ, ಶ್ರೀ ದೊಡ್ಡ ಲಾಲಸಾಬ ಅಜ್ಜನವರು ಚಿಮ್ಮನಕಟ್ಟಿ, ಶ್ರೀ ಅಶೋಕ ಪಟ್ಟಣ ರಾಮದುರ್ಗ ತಾಲೂಕ ಶಾಸಕರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶ್ರೀ ಮಹೇಶ್ ಎಸ್ ಹೊಸಗೌಡರ ಸಂಸ್ಥಾಪಕ ಅಧ್ಯಕ್ಷರು, ಟಿ ಎಸ್ ಮೋಕಾಶಿ ಉಪಾಧ್ಯಕ್ಷರು, ಆರ್ ಎಮ್ ದಾದಿ ನಿವೃತ್ತ ಗುರುಗಳು, ವೆಂಕಣ್ಣ ಹೊರಕೇರಿ ಸೇ- ರಿದಂತೆ ಇನ್ನೂ ಅನೇಕ ಗಣ್ಯಮಾನ್ಯರು, ಹಾಗೂ ಸಲಹಾ ಸಮಿತಿ ಸದಸ್ಯರು, ಸಿಬ್ಬಂದಿ ವರ್ಗದವರು, ಗುರು ಹಿರಿಯರು,ಯುವಕ ಮಿತ್ರರು, ಸೇರಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

**ವರದಿ: ಅಬ್ದುಲಸಾಬ ನಾಯ್ಕರ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ದೇವರೇ ವರ ಕೊಟ್ರು ಪೂಜಾರಿ ದಕ್ಷಿಣೆ ಕೇಳಿ ಪೀಡಿಸೋದು ಬಿಡುತ್ತಿಲ್ಲ...?

## ಪೌರಾಡಳಿತ ಸಚಿವರ ಭೇಟಿ ನಂತರ ಮಹತ್ವದ ಬೆಳವಣಿಗೆ!
## ಭ್ರಷ್ಟರ ವಿರುದ್ಧ ಹೊರಡಲು ಸಚಿವರ ಭರವಸೆ ನುಡಿಗಳು ಪುಷ್ಟಿ ನೀಡಿದವೇ?

# ಬಿ-ಖಾತಾ ಮಾಡುವಲ್ಲಿ ಕೋಟ್ಯಾಂತರ ಅವ್ಯವಹಾರವಾಗಿದೆಯೇ?

**ಯಾದಗಿರಿ/ ಗುರುಮಠಕಲ್ :** ಸರ್ಕಾರ ಬಡವರಿಗೋಸ್ಕರ ಅನುಕೂಲವಾಗುವ ಉದ್ದೇಶದಿಂದ ಅವರಿಗೆ ಖಾಲಿ ಜಾಗ ಇದ್ದು ಅವರ ಹೆಸರಿನ ಮೇಲೆ ಮಾಡಿಕೊಳ್ಳಲಿ ಅನ್ನುವ ಉದ್ದೇಶದಿಂದ ಕಾಂಗ್ರೆಸ್ ಸರ್ಕಾರ ಬಿ ಮತ್ತು ಇ ಖಾತಾ ಮಾಡಲಿ ಅಂತ ಮೂರು ತಿಂಗಳ ಕಾಲಾವಕಾಶ ಕೊಟ್ಟಿತ್ತು ಆದರೆ ಇಲ್ಲಿ ಪುರಸಭೆ ವತಿಯಿಂದ ಅಧಿಕಾರಿಗಳು ಸರ್ಕಾರ ಶುಲ್ಕ 100 ರುಪಾಯಿ ಇದ್ರೆ ಇಲ್ಲಿ ಒಂದು ಪಿ.ಐ.ಡಿ ನಂಬರ್ ಗೆ 35,000 ಇಂದ 80,000 ರೂಪಾಯಿಗಳು ತೆಗೆದುಕೊಳ್ಳುತ್ತಿದ್ದಾರೆ ಎಂದು ವಿಜಯಕುಮಾರ್ ನೀರೆಟಿ, ಮಾಜಿ ಕಾಡಾ ನಿರ್ದೇಶಕರು ಓಬಿಸಿ ಅಧ್ಯಕ್ಷರು ಗುರುಮಠಕಲ್ ಒತ್ತಾಯಿಸಿದ್ದಾರೆ.



ವಿಜಯ ಕುಮಾರ್ ನೀರೆಟಿ
ಮಾಜಿ ಕಾಡಾ ನಿರ್ದೇಶಕರು
OBC ಅಧ್ಯಕ್ಷರು

ಗುರುಮಠಕಲ್ ಹೇಳಿ ಕೇಳಿ ಎ. ಐ. ಸಿ. ಸಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರ ಕ್ಷೇತ್ರ, ರಾಜ್ಯ ಸರ್ಕಾರದ ಬಿ ಖಾತೆ ಹಂಚಿಕೆ ಯೋಜನೆಯನ್ನು , ಇಲ್ಲಿನ ಗುರುಮಠಕಲ್ ಪುರಸಭೆಯ ಅಧಿಕಾರಿಗಳು ಮತ್ತು ಸದಸ್ಯರು ಭಾಗಿಯಾಗಿ ನಾನಾ ಕಾರಣ ಕೊಟ್ಟು ಕೇವಲ ಪಿಐಡಿ ನಂಬರ್ ನೀಡಲು ಸಹ ಅಧಿಕ ಮೊತ್ತದಲ್ಲಿ ಹಣ ಪಡೆಯುತ್ತಿರುವುದು ಇಲ್ಲಿನ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ನೋವಾಗಿದೆ, ಈ ಕುರಿತಾದ ಸಮಗ್ರ ತನಿಖೆ ಆಗಬೇಕು, ಭ್ರಷ್ಟ ಅಧಿಕಾರಿಗಳ ಹೆಡೆಮುರಿ ಕಟ್ಟಿ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು, ಅಧಿಕಾರಿಗಳು ಬಡವರಿಗೆ ಬಿಟ್ಟು ಶ್ರೀಮಂತರ ಹೊಲಗಳಿಗೆ ಸರ್ವೇ ನಂಬರ್ ಗಳಿಗೆ ಪಿಐಡಿ ನಂಬರ್ ತೆಗೆದುಕೊಂಡಿದ್ದಾರೆ ಅಂತ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ ಎಂದು ಅವರು ಹೇಳಿದರು.

ಕರ್ನಾಟಕ ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾಗಿರುವ ಬಿ ಖಾತೆ ಹೆಸರಿನಲ್ಲಿ ಅಧಿಕಾರಿಗಳ ಅಕ್ರಮ ಮಾರ್ಗವಾಗಿ ಹಣ ವಸೂಲಿ ಮಾಡುವ ದಂಧೆಗಿಳಿದಿದ್ದಾರೆ.

ಎನ್.ಎ ಮಾಡಿಸಿದರೆ ರೋಡ್, ಗಾರ್ಡನ್, ಟೆಂಪಲ್ ಗೆ ಪ್ಲಾಟ್ ಕೊಡಬೇಕು ಇಲ್ಲಿ 60–80 ಸಾವಿರ ಕೊಟ್ಟು ಬೈ ನಂಬರ್ ಹಾಕಿಸಿ ಪಿ.ಐ.ಡಿ ತೆಗೆದುಕೊಂಡರೆ ಸಾಕು ಅಂತ ಕೆಲವೊಂದು ಸರ್ವೇ ನಂಬರ್ ಗಳಿಗೆ ಪಿ.ಐ.ಡಿ ತೆಗೆದುಕೊಂಡಿದ್ದಾರೆ, ಇಲ್ಲಿಯವರೆಗೆ 90 ದಿನಗಳಲ್ಲಿ ಎಷ್ಟು ಬಿ–ಇ ಖಾತಾ ಕೊಟ್ಟಿದ್ದಾರೆ ?ಎಷ್ಟು ಲೀಗಲ್ ಆಗಿ ಮಾಡಿದ್ದಾರೆ? ಅಷ್ಟು ಇಲ್ಲೀಗಲ್ ಆಗಿ ಮಾಡಿದ್ದಾರೆ ಇದರ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಸಂಬಂಧ ಪಟ್ಟ ಅಧಿಕಾರಿಗಳು ಬೇಜವಾಬ್ದಾರಿ ತೋರಿಸಿದ್ದಲ್ಲಿ ಸೋಶಿಯಲ್ ಮೀಡಿಯಾದಲ್ಲಿ ಒಂದು ಟೀಮ್ ಮಾಡಿ 90 ದಿನಗಳಲ್ಲಿ ಎಷ್ಟು ಬಿ– ಇ ಖಾತಾ ಮಾಡಿದ್ದಾರೆ, ಸರ್ಕಾರ ಶುಲ್ಕ ಬಿಟ್ಟು ಎಷ್ಟೆಷ್ಟು ಹಣ ವಸೂಲಿ ಮಾಡಿದ್ದಾರೆ ಒಂದು ಲೀಸ್ಟ್ ತೆಗೆದುಕೊಂಡು ಎಷ್ಟು ಪಿಐಡಿ ನಂಬರ್ ಕೊಟ್ಟಿದ್ದಾರೆ ಎಂದು ಪಟ್ಟಣದ 23 ವಾರ್ಡ್ ಗಳಲ್ಲಿ ಮನೆ  ಮನೆಗೂ ತಿರುಗುತ್ತೇವೆ ಎಂದು ಅವರು ಖಡಕ್ ವಾರ್ನಿಂಗ್ ನೀಡಿದ್ದಾರೆ.

**ವರದಿ: ಜಗದೀಶ್ ಕುಮಾರ್ ಭೂಮಾ**

# ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಗ್ರಾಮ ಪಂಚಾಯತ್ ಅಧ್ಯಕ್ಷರಿಂದ ಮಾಲಾರ್ಪಣೆ

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ಭಗೀರಥ ಜಯಂತಿಯನ್ನು ಗ್ರಾಮದ ಉಪ್ಪಾರ ಸಮಾಜದ ಮುಖಂಡರು ಅತ್ಯಂತ ಅರ್ಥಪೂರ್ಣವಾಗಿ ಆಚರಣೆ ಮಾಡಿದರು.



ಈ ಸಂದರ್ಭದಲ್ಲಿ ಗ್ರಾಮದ ಸರ್ವಧರ್ಮದ ಮುಖಂಡರು, ಪ್ರಗತಿಪರ ಸಂಘಟನೆಯ ಮುಖಂಡರು, ಆರಕ್ಷಕ ನಿರೀಕ್ಷಕರು ಅಯ್ಯಣ್ಣ ಭಾಗವಹಿಸಿದ್ದರು.

ಇದೆ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ರಂಗಣ್ಣ ಕೊಲ್ಕರ, ನರಸಣ್ಣ ನಾಯಕ ಮಾತನಾಡಿದರೆ ಹಿರಿಯ ವರದಿಗಾರರಾದ ಗಿರಿಯಪ್ಪ ಪೂಜಾರಿ ವಂದನಾರ್ಪಣೆ ಮಾಡಿದರು.

**ವರದಿ ಶರಣು ಹುಣಸಗಿ, ಜಾಲಹಳ್ಳಿ**

# ಶ್ರೀ ವೀರೇಶ್ವರ ಪ್ರಾಥಮಿಕ ಶಾಲೆಯ ಪ್ರಾರಂಭೋತ್ಸವ

**ಗದಗ :** ಶ್ರೀ ವೀರೇಶ್ವರ ಪ್ರಾಥಮಿಕ ಶಾಲೆ ಕುರಡಗಿಯಲ್ಲಿ 2025–26 ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮ ಜರುಗಿತು.



ಮಕ್ಕಳಿಗೆಪುಷ್ಪನೀಡುವುದರೊಂದಿಗೆ ಶಾಲೆಗೆ ಬರಮಾಡಿಕೊಂಡು ಸಿಹಿ ನೀಡಿ ಸ್ವಾಗತಿಸಲಾಯಿತು. ಶ್ರೀಮತಿ ಮಮತಾಜಬಿ ನದಾಫ್ ಹಾಗೂ ಪ್ರಧಾನ ಗುರು ಮಾತೆ ಶ್ರೀಮತಿ ಕರಿಜ್ಮಾ ನದಾಫ್ ಶಿಕ್ಷಕಿ ನೇತ್ರಾವತಿ ಕಮ್ಮಾರ ಉಪಸ್ಥಿತರಿದ್ದರು.

ಎಕ್ಸೆಲ್ ಅಕಾಡಮಿ ಜಿಲ್ಲಾ ಸಂಯೋಜಕ ಶೌಕತ್ ಅಲಿ ನದಾಫ್ ಕಾರ್ಯಕ್ರಮ ಕುರಿತು ಮಾತನಾಡಿ ಮಕ್ಕಳಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶಾಲೆಯ ಸಿಬ್ಬಂದಿ ಹಾಗೂ ಮಕ್ಕಳು ಹಾಜರಿದ್ದರು.

**– ಕರುನಾಡ ಕಂದ**



ಗುರುಮಠಕಲ ಪೋಲಿಸ್ ಠಾಣೆಯ ಆರಕ್ಷಕ ನಿರೀಕ್ಷಕರು ಶ್ರೀ ದೇವಿಂದ್ರಪ್ಪ ಧೂಳಖೇಡ ರವರು ಕರುನಾಡ ಕಂದ ಪತ್ರಿಕೆಗೆ ಶುಭ ಹಾರೈಸಿದರು.



ಬಸವಕಲ್ಯಾಣ ಅರಕ್ಷಕ ಉಪ ನಿರೀಕ್ಷಕರಾದ ಅಂಬರೀಷ್ ವಾಗ್ಮೋಡೆ ರವರ ಜೊತೆ ಕರುನಾಡ ಕಂದ ಪತ್ರಿಕೆ.




ದತ್ತಾತ್ರಿ ಕೆ. ಧುರೆ
ಬೀದರ ಕೋಟೆ ಪತ್ರಿಕೆ ವರದಿಗಾರರು
ಬಸವಕಲ್ಯಾಣ, ಕರುನಾಡ ಕಂದ ಪತ್ರಿಕೆ
ಓದುತ್ತಿರುವ ಸಂದರ್ಭ.

# ಮೂರನೇ ವಾರ್ಷಿಕೋತ್ಸವ ಮತ್ತು ಪತ್ರಕರ್ತರ ಹಬ್ಬ



ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಮೂರನೇ ವಾರ್ಷಿಕೋತ್ಸವ ಮತ್ತು ಪತ್ರಕರ್ತರ ಹಬ್ಬವು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರ ಉಪಸ್ಥಿತಿಯಲ್ಲಿ ಅದ್ದೂರಿಯಿಂದ ಜರುಗಿತು. ಚಿತ್ರದಲ್ಲಿ ಎಡದಿಂದ ಬಲಕ್ಕೆ ಕರುನಾಡ ಕಂದ ಪತ್ರಿಕೆಯ ಶ್ರೀ ಕೊಡಕ್ಕಲ್ ಶಿವಪ್ರಸಾದ್, ಕ.ಕಾ.ಪ.ದ್ವನಿ ಜಿಲ್ಲಾಧ್ಯಕ್ಷ ಶ್ರೀ ನಾಗರಾಜ, ಕ.ಕಾ.ಪ.ದ್ವನಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಶ್ರೀ ಬಂಗ್ಲೆ ಮಲ್ಲಿಕಾರ್ಜುನ ಮುಂತಾದವರನ್ನು ಕಾಣಬಹುದು.

**– ಕರುನಾಡ ಕಂದ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01–06–2025 ಪುಟಗಳು:16

# ಸಂಚಾರಿ ಪೋಲಿಸರ ಯಡವಟ್ಟು ಕಿರಿಕಿರಿ!

## ನಿಜಕ್ಕೂ ಸಂಚಾರಿ ಪೋಲಿಸರ ಕರ್ತವ್ಯಗಳೇನು.?

ಇತ್ತೀಚೆಗೆ ರಾಜ್ಯಾದ್ಯಂತ ಸುದ್ದಿಯಾದ ಮಂಡ್ಯದ ಪುಟ್ಟ ಬಾಲಕಿಯ ಸಾವಿನ ಪ್ರಕರಣ ಸಂಚಾರಿ ಪೋಲಿಸರ ಕಿರಿಕಿರಿಗೆ ಮತ್ತೊಂದು ಸಾಕ್ಷಿಯಾಗಿದೆ. ಆ ಪುಟ್ಟ ಬಾಲಕಿಯ ಸಾವು ದುರಂತವೇ ಸರಿ. ಮಂಡ್ಯ ಜಿಲ್ಲೆಯ ಮದ್ದೂರು ಮೂಲದ ಹೃತೀಕ್ಷಾ ಎಂಬ ಮಗುವನ್ನು ತಮ್ಮ ಪೋಷಕರು ನಾಯಿ ಕಚ್ಚಿದ್ದರಿಂದ ಬೈಕ್‌ನಲ್ಲಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಸಂಚಾರಿ ನಿಯಮಗಳ ಉಲ್ಲಂಘನೆ ಅಡಿ ಹೆಲ್ಮೆಟ್ ತಪಾಸಣೆಗಾಗಿ ಮಂಡ್ಯದ ಸ್ವರ್ಣಸಂದ್ರ ಬಳಿ ಸಂಚಾರಿ ಠಾಣೆ ಪೊಲೀಸರು ಬೈಕ್ ಅಡ್ಡಗಟ್ಟಿದ್ದಾರೆ ಹೀಗಾಗಿ, ಗಾಡಿ ನಿಲ್ಲಿಸಲು ಹೋಗಿ ಆಯ ತಪ್ಪಿ ತಾಯಿಯ ಮಡಿಲಲ್ಲಿದ್ದ ಮಗು ಸೇರಿದಂತೆ ಪೋಷಕರು ಕೆಳಗಡೆ ಬಿದ್ದಿದ್ದಾರೆ, ಇದರಿಂದ ತಲೆಗೆ ಭಾರೀ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲಿಯೇ ಮಗು ಮೃತಪಟ್ಟಿದೆ ಎನ್ನಲಾಗಿದೆ. ಏನೇ ಆಗಲಿ ಸಂಚಾರಿ ನಿಯಮಗಳ ಉಲ್ಲಂಘನೆ ತಡೆಯುವ ನಿಟ್ಟಿನಲ್ಲಿ ಈ ರೀತಿ ಸಂಚಾರಿ ಪೋಲಿಸರು ಅವರ ಕರ್ತವ್ಯಗಳನ್ನು ಮರೆತು ಸಾರ್ವಜನಿಕರಿಗೆ ಕಿರಿಕಿರಿ ಉಂಟುಮಾಡುವುದು ಆ ಮೂಲಕ ಇಂತಹ ಅನೇಕ ವಿವಿಧ ದುರಂತಗಳಿಗೆ ಕಾರಣವಾಗುವುದು ಎಷ್ಟು ಸರಿ ?

ಇನ್ನು ಈ ಪ್ರಕರಣ ತೀವ್ರಸ್ವರೂಪ ಪಡೆಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ್ದ ಮಂಡ್ಯ ಎಸ್ ಪಿ ಮೂವರು ಎ. ಎಸ್. ಐ ಗಳನ್ನು ಅಮಾನತು ಮಾಡಿದರು. ಮಗು ಸಾವಿಗೆ ಮಂಡ್ಯ ಟ್ರಾಫಿಕ್ ಪೊಲೀಸರು ಕಾರಣವೆಂದು ಕುಟುಂಬಸ್ಥರು ಹೆದ್ದಾರಿಯಲ್ಲಿ ಹಾಗೂ ಮಂಡ್ಯ ಜಿಲ್ಲಾಸ್ಪತ್ರೆ ಮಿಮ್ಸ್ ಬಳಿ ಪ್ರತಿಭಟನೆ ನಡೆಸಿ ಸಂಚಾರಿ ಪೋಲಿಸರ ವಿರುದ್ಧ ಅಕ್ರೋಶ ಹೊರಹಾಕಿದ್ದರು. ಮಂಡ್ಯ ನಗರದಲ್ಲಿ ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ಅಲ್ಲಿನ ಶಾಸಕರು ಕೂಡಾ ಅಕ್ರೋಶ ವ್ಯಕ್ತಪಡಿಸಿ ನಾನು ಹಲವು ಬಾರಿ ಸೂಚನೆ ನೀಡಿದ್ದರೂ ಮತ್ತದೇ ಚಾಳಿ ಮುಂದುವರೆಸಿದ್ದಾರೆ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದರು. ಮಂಡ್ಯ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಕೂಡಾ ಅವರ ಕುಟುಂಬಕ್ಕೆ ಭೇಟಿ ನೀಡಿ ಸಾಂತ್ವನ ಹೇಳುವ ಕೆಲಸ ಮಾಡಿದ್ದರು. ಮಂಡ್ಯದ ಸಂಸದರು, ಕೇಂದ್ರ ಸಚಿವರು ಆದ ಕುಮಾರಸ್ವಾಮಿ ಅವರು ಕೂಡಾ ಟ್ರಾಫಿಕ್ ಪೋಲಿಸರ ನಡೆಗೆ ಕಿಡಿಕಾರಿದ್ದರು. ಇಡೀ ಪ್ರಕರಣ ಗಮನಿಸಿದರೆ ಹೆಲ್ಮೆಟ್ ಧರಿಸುವುದೊಂದೇ ಸಮಗ್ರ ಸಂಚಾರಿ ವ್ಯವಸ್ಥೆಯ ಸುಧಾರಣೆ ಎಂದು ಸಂಚಾರಿ ಪೊಲೀಸ್ ಇಲಾಖೆ ಪರಿಭಾವಿಸಿದಂತಿದೆ. ಹೆಲ್ಮೆಟ್‌ನ್ನೇ ಗುರಿಯಾಗಿಸಿಕೊಂಡು ಸಂಚಾರಿ ಪೊಲೀಸರು ಪದೇ ಪದೇ ಎಡವಟ್ಟು ಮಾಡುತ್ತಿರುವುದರಿಂದ ಅಮಾಯಕ ಪ್ರಯಾಣಿಕರ ಕಿರಿಕಿರಿ ಗೊಂದಲಕ್ಕೆ ಕಾರಣವಾಗುತ್ತಿದೆ.

ಫುಟ್‌ಪಾತ್ ಒತ್ತುವರಿ ತೆರವು , ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಸುಧಾರಣೆ, ಅವೈಜ್ಞಾನಿಕ ಹಾಗೂ ಗುಂಡಿ ಬಿದ್ದ ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವುದು ಸೇರಿದಂತೆ ಅನೇಕ ಕರ್ತವ್ಯಗಳು ಸಂಚಾರಿ ಪೋಲಿಸರ ಮಾಡಬೇಕಿದೆ. ಅವುಗಳ ಕಡೆಗೆ ಕಿಂಚಿತ್ತೂ ಗಮನ ಹರಿಸದೆ, ಸುಧಾರಣೆ ತರುವ ಪ್ರಯತ್ನವನ್ನೂ ಮಾಡದೆ ಕೇವಲ ಹೆಲ್ಮೆಟ್ ಧರಿಸದೆ ಬರುವವರ ಮೇಲೆ ಸೇರಿದಂತೆ ವಾಹನ ದಾಖಲಾತಿಗಳನ್ನು ಪರೀಶಿಲನೆ ಮಾಡುವುದೇ ಹೆಚ್ಚಾಗಿ ಸಂಚಾರಿ ಪೋಲಿಸರು ಮಾಡುತ್ತಿರುವುದು ಅನೇಕ ಕಡೆ ಸುದ್ದಿಯಾಗುತ್ತಲೇ ಇರುತ್ತದೆ. ಸಂಚಾರಿ ಪೊಲೀಸರು ದಿಢೀರನೆ ರಸ್ತೆಗೆ ನುಗ್ಗುವುದು, ಅಡ್ಡಗಟ್ಟುವುದು, ದಂಡ ವಿಧಿಸುವುದನ್ನಷ್ಟೇ ತಮ್ಮ ಗುರಿಯಾಗಿಸಿಕೊಂಡಿದ್ದಾರೆ. ನಿತ್ಯ ಇಲಾಖೆ ನಿಗದಿಪಡಿಸಿರುವ ಟಾರ್ಗೆಟ್‌ನಷ್ಟು ದಂಡ ವಸೂಲಿ ಮಾಡುವುದಕ್ಕೆ ಎಲ್ಲೆಂದರಲ್ಲಿ ಹೆಲ್ಮೆಟ್ ಧರಿಸದೆ ಬರುವವರನ್ನು ಹಿಡಿಯುವುದಷ್ಟೇ ಅವರ ಕಾಯಕವಾಗಿದೆ. ಕಾನೂನುಬದ್ಧವಾಗಿ ಹಣ ವಸೂಲಿ ಮಾಡುವುದಕ್ಕೆ ಪೊಲೀಸರಿಗೆ ಇರುವ ದಾರಿ ಇದೊಂದೇ ಆಗಿರುವುದು ಇಂತಹ ಅವಘಡಗಳಿಗೆ ಕಾರಣವಾಗಿದೆ ಎಂದು ಈಗ ಸಾರ್ವಜನಿಕ ವಲಯದಲ್ಲಿ ಆರೋಪಗಳು ಕೇಳಿ ಬರುತ್ತಿವೆ.

ಸಂಚಾರಿ ಪೊಲೀಸರು ಕರ್ತವ್ಯದಲ್ಲಿದ್ದಾಗ ಅತ್ಯಂತ ಸೂಕ್ಷ್ಮವಾಗಿ ವರ್ತಿಸಬೇಕು. ವಾಹನಗಳಲ್ಲಿ ಪ್ರಯಾಣಿಸುವ ಸಾರ್ವಜನಿಕರನ್ನು ಏಕಾಏಕಿ ರಸ್ತೆಯಲ್ಲಿ ತಡೆದು ನಿಲ್ಲಿಸುವ ಅಥವಾ ಅವರಿಗೆ ಗಾಬರಿ ಉಂಟು ಮಾಡುವ ರೀತಿಯಲ್ಲಿ ವರ್ತಿಸಬಾರದು. ಮಂಡ್ಯ ಪ್ರಕರಣದಲ್ಲಿ ಕೂಡಾ ಸ್ವಲ್ಪ ಎಚ್ಚರ



ವಹಿಸಿದ್ದಿದ್ದರೆ ಮಗುವಿನ ಸಾವನ್ನು ತಪ್ಪಿಸಬಹುದಿತ್ತು ಎಂಬುದು ಸ್ಥಳೀಯರ ವಾದ.

**ಇಷ್ಟಕ್ಕೂ ಸರ್ಕಾರ ಹಾಗೂ ಪೋಲಿಸ್ ಇಲಾಖೆ ಸಂಚಾರಿ ಪೋಲಿಸರ ಕರ್ತವ್ಯಗಳ ಕುರಿತು ಹೊರಡಿಸಿರುವ ಸುತ್ತೋಲೆ ಹಾಗೂ ಅದೇಶದಲ್ಲಿ ಏನಿದೆ ಗೊತ್ತಾ?**

ಸಾರ್ವಜನಿಕ ಸೇವೆಗಾಗಿ ಸದಾ ಕರ್ತವ್ಯ ತತ್ಪರತೆಯಿಂದ ಕಾರ್ಯ ನಿರ್ವಹಿಸುತ್ತಾ ಇಲಾಖೆಯ ಹೆಮ್ಮೆ ಮತ್ತು ಘನತೆ ಗೌರವಗಳನ್ನು ಕಾಪಾಡುವ ಮುಖ್ಯ ಹೊಣೆ ಸಂಚಾರ ಪೊಲೀಸರ ಮೇಲಿದೆ. ರಸ್ತೆಗಳಲ್ಲಿ ಸುಗಮ ಸಂಚಾರ ಏರ್ಪಡಿಸುವುದರ ಜೊತೆಗೆ ಸಾರ್ವಜನಿಕರು ಅಪಘಾತಕ್ಕೆ ಒಳಗಾಗದಂತೆ ಕೈಗೊಳ್ಳುವ, ಅನೇಕ ಕ್ರಮಗಳಲ್ಲಿ ರಸ್ತೆ ಸುರಕ್ಷತೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರ ಜೊತೆಗೆ ಸಂಚಾರಿ ನಿಯಮಗಳನ್ನು ಜಾರಿ ಮಾಡುವುದರ ಮುಖೇನ ರಸ್ತೆಗಳನ್ನು, ಸುರಕ್ಷತಾ ವಲಯಗಳನ್ನಾಗಿ ಪರಿವರ್ತಿಸುವ ಗುರುತರ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ. ಸಾರ್ವಜನಿಕರಿಗೆ ತಕ್ಷಣಕ್ಕೆ ಗೋಚರವಾಗುವ ಸರ್ಕಾರದ ಪ್ರಮುಖ ಅಂಗಗಳಲ್ಲಿ ಸಂಚಾರ, ಪೊಲೀಸ್ ವಿಭಾಗವು ಅತ್ಯಂತ ಪ್ರಮುಖವಾದದ್ದು ಎಂಬುದನ್ನು ನಾವು ಮರೆಯಬಾರದು. ನಮ್ಮ ಪ್ರತಿಯೊಂದು ಚಟುವಟಿಕೆಗಳು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಪ್ರಚುರಗೊಳ್ಳುವುದರಿಂದ ನಾವುಗಳು ಜವಾಬ್ದಾರಿಯುತವಾಗಿ ವರ್ತಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಆದ್ಯತೆಯನ್ನು ಪಡೆದುಕೊಳ್ಳುವುದು ಅನಿವಾರ್ಯವಾಗಿದೆ.

ಬಹಳಷ್ಟು ಹಿರಿಯ ಅಧಿಕಾರಿಗಳು, ಮಾಧ್ಯಮದವರು ಹಾಗೂ ಸಾರ್ವಜನಿಕರು ಸಂಚಾರ ಪೊಲೀಸ್ ಅಧಿಕಾರಿ ಸಿಬ್ಬಂದಿಯವರು ರಸ್ತೆಗಳಲ್ಲಿ ಎಲ್ಲೆಂದರಲ್ಲಿ ನಿಂತು ನಿಯಮ ಜಾರಿಗಾಗಿ ಅಡ್ಡಾದಿಡ್ಡಿಯಾಗಿ ಕಾರ್ಯಾಚರಣೆಯಲ್ಲಿ ತೊಡಗುವ ಪರಿಯ ಬಗ್ಗೆ ವ್ಯಾಪಕವಾಗಿ ಟೀಕೆಗಳು ಕೇಳಿ ಬರುತ್ತಿವೆ. ಒಟ್ಟೊಟ್ಟಿಗೆ 5–6 ಜನ ಗುಂಪಿನಲ್ಲಿ ನಿಂತು ವಾಹನಗಳ ತಪಾಸಣೆ, ಇತ್ಯಾದಿಗಳನ್ನು ಮಾಡುತ್ತಾ ಅನಾವಶ್ಯಕವಾಗಿ ಇತರೆ ಸಾರ್ವಜನಿಕರಿಗೂ ಸಹ ತೊಂದರೆ ನೀಡುವ ಪರಿಪಾಠದ ಬಗ್ಗೆ ಹಲವಾರು ದೂರುಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಕಾನೂನು ಜಾರಿ ಮಾಡುವಾಗ ಕೈಗೊಳ್ಳಬೇಕಾದ ಗುಣಮಟ್ಟದ ಕಾರ್ಯ ನಿರ್ವಹಣಾ ಕ್ರಮಗಳನ್ನು ಸುತ್ತೋಲೆ ಮೂಲಕ ಪೋಲಿಸ್ ಇಲಾಖೆ ಆದೇಶ ಹೊರಡಿಸಿತ್ತು.

**ಆ ಕುರಿತಂತೆ ಸುತ್ತೋಲೆಯಲ್ಲಿರುವ ಕೆಲ ಪ್ರಮುಖ ಅಂಶಗಳು ಹೀಗಿವೆ.**

*ಠಾಣಾಧಿಕಾರಿಗಳು ಪಿಎಸ್‌ಐ/ಎಎಸ್‌ಐ ರವರಿಗೆ ಒಂದು ಸಂಚಾರ ಬೀಟ್ ನಿಗದಿಪಡಿಸಬೇಕು.

*ಬೀಟ್‌ಗೆ ನೇಮಕಗೊಂಡ ಅಧಿಕಾರಿಗಳು ಅವರಿಗೆ ನಿಯೋಜಿಸಿರುವ ಸಂಚಾರ ಬೀಟ್ ಸ್ಥಳದಲ್ಲಿಯೇ ದಂಡ ವಿಧಿಸಬೇಕು.

*ದಂಡ ವಿಧಿಸುವಾಗ ಪಾರದರ್ಶಕತೆ ವ್ಯವಸ್ಥೆಗಾಗಿ ಬಾಡಿ ಕ್ಯಾಮೆರಾವನ್ನು ಕಡ್ಡಾಯವಾಗಿ ಧರಿಸಬೇಕು.

*ಅಧಿಕಾರಿಗಳು ನಿರ್ದಿಷ್ಟ ಸ್ಥಳದಲ್ಲಿ ಪ್ರಕರಣ ದಾಖಲಿಸುವ ಮೊದಲು ಮೇಲಾಧಿಕಾರಿಗಳ ಠಾಣೆಗೆ ಮಾಹಿತಿ ನೀಡಬೇಕು.

*ಅಧಿಕಾರಿಗಳು ವಾಹನಗಳನ್ನು ನಿಲ್ಲಿಸುವಾಗ ಏಕಾಏಕಿ ಮದ್ಯ ರಸ್ತೆಯಲ್ಲಿ ಓಡಿಹೋಗಿ ತಡೆಯುವುದು, ಅಟ್ಟಿಸಿಕೊಂಡು ಹೋಗುವುದು, ಲಾಠಿಯಲ್ಲಿ ತಡೆಯುವುದು ಮಾಡಬಾರದು.

*ದಂಡ ವಿಧಿಸುವಾಗ ತನಗಾಗಲಿ ಸಾರ್ವಜನಿಕರಿಗಾಗಲೀ ಪ್ರಾಣ ಹಾನಿ ಆಗುವಂತೆ ಮಾಡುವಂತಿಲ್ಲ.

*ಸಾರ್ವಜನಿಕರೊಂದಿಗೆ ವಿಶೇಷವಾಗಿ, ಹೆಂಗಸರು, ವೃದ್ದರು. ಅಪ್ರಾಪ್ತ ಮಕ್ಕಳೊಂದಿಗೆ ಸೌಮ್ಯವಾಗಿ ವರ್ತಿಸುವುದು.



*ದಂಡ ವಿಧಿಸುವಾಗ ಯಾವುದೇ ಆಮಿಷಕ್ಕೆ ಒಳಗಾಗದೆ ನಿಷ್ಠೆಯಿಂದ ಕೆಲಸ ನಿರ್ವಹಿಸಬೇಕು.

*ಪ್ರತಿಯೊಬ್ಬ ಸಿಬ್ಬಂದಿಯು ನೋಟ್ ಪುಸ್ತಕ ಬರೆಯುವುದನ್ನು ಕಡ್ಡಾಯ ಮಾಡುವುದು.

*ದಂಡ ವಿಧಿಸುವಾಗ ಆದಷ್ಟು ಸಿ.ಸಿ.ಟಿ.ವಿ.ಗಳಿರುವ ಸ್ಥಳಗಳನ್ನು ಆಯ್ಕೆ ಮಾಡುವುದು.

*ಡಿಜಿ–ಲಾಕರ್ ಅಥವಾ ಇ–ಚಲನ್ ,ಎಮ್ – ಪರಿವಾಹನ್ ಗಳಲ್ಲಿ ತೋರಿಸಿದ ದಾಖಲೆಗಳನ್ನು ಪರಿಗಣಿಸುವುದು.

*ಇಂಡಿಯನ್ ಮೋಟಾರ್ ವೆಹಿಕಲ್ಸ್ ಕಾಯ್ದೆ ಅನುಗುಣವಾಗಿ ಸಂಚಾರ ನಿಯಮಗಳನ್ನು ಜಾರಿಗೊಳಿಸುವುದು.

*ಸಾರ್ವಜನಿಕರಿಗೆ ಗೋಚರಿಸುವಂತೆ ನಿಂತು ದಂಡ ವಿಧಿಸಬೇಕು ಹಾಗೂ ಯಾವುದೇ ಅಪಘಾತ ಅಥವಾ ಅವಘಡ ಸಂಭವಿಸುವುದನ್ನು ತಡೆಯುವುದು.

*ದಂಡ ನಮೂನೆಯ ಯಂತ್ರವು ಪಿಎಸ್‌ಐ/ಎಎಸ್‌ಐ ಅಧಿಕಾರಿಗಳೊಂದಿಗೆ ಮಾತ್ರ ಇರತಕ್ಕದ್ದು.

*ಪಾವತಿಯಾದ ದಂಡದ ಮೊತ್ತವನ್ನು ಮರುದಿನ ತಪ್ಪದೇ ಬ್ಯಾಂಕಿಗೆ ಸಂದಾಯ ಮಾಡುವುದು.

*ವಾಹನಗಳನ್ನು ವಶಕ್ಕೆ ಪಡೆದ ಎರಡು ದಿನಗಳೊಳಗೆ ವಿಲೇವಾರಿ ಮಾಡುವುದು.

*ಕಾರ್ಯಾಚರಣೆ ಪ್ರಭಾರ ವಹಿಸುವ ಎಲ್ಲಾ ಸಿಬ್ಬಂದಿಗಳು ಪ್ರತಿಫಲಿತ ಜಾಕೆಟ್‌ಗಳನ್ನು (ರಿಫ್ಲೆಕ್ಟಿವ್ ಜಾಕೆಟ್) ಧರಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.

*ಸಮವಸ್ತ್ರದ ಮೇಲೆ ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುವಂತೆ ಹೆಸರಿನ ಫಲಕ ಮತ್ತು ಬಿಲ್ಲೆ ಸಂಖ್ಯೆಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.

*ಕಾರ್ಯಾಚರಣೆ ವೇಳೆ ಆಂಬ್ಯುಲೆನ್ಸ್ ವಾಹನಗಳಿಗೆ ಹಾಗೂ ತುರ್ತು ಸೇವೆಗಳಲ್ಲಿ ತೊಡಗಿಸಿಕೊಳ್ಳುವಂತಹ ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ನೋಡಿಕೊಳ್ಳುವುದು.

*ತಪಾಸಣೆಗೆ ಒಳಪಡಿಸುವ ಚಾಲಕ / ಸವಾರನ ಬಳಿ ಅಧಿಕಾರಿಯು ನಯವಾಗಿ ವರ್ತಿಸಿ ಪೂರ್ವಭಾವಿ ಮಾಹಿತಿ (ಹೆಸರು, ವಿಳಾಸ, ಎಲ್ಲಿಂದ ಬಂದಿರುವ ಮತ್ತು ಎಲ್ಲಿಗೆ ಹೋಗುತ್ತಿರುವ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು.

*ಕಡ್ಡಾಯವಾಗಿ ಪಿ.ಡಿ.ಎ. ಯಂತ್ರದಲ್ಲಿ 2 ಪ್ರಿಂಟ್‌ಗಳ ಪ್ರತಿಗಳನ್ನು ತೆಗೆದು ಒಂದು ಪ್ರತಿಯನ್ನು ಚಾಲಕ/ಸವಾರನಿಗೆ ನೀಡಬೇಕು, ಮತ್ತೊಂದು ಪ್ರತಿಯನ್ನು ಅಧಿಕಾರಿಯು ದಾಖಲೆಗಾಗಿ ಇಟ್ಟುಕೊಳ್ಳಬೇಕು.

*ವಾಹನವನ್ನು ವಶಕ್ಕೆ ತೆಗೆದುಕೊಳ್ಳುವಾಗ ಅಧಿಕಾರಿಯು ಬೆಲೆ ಬಾಳುವ ವಸ್ತುಗಳಿದ್ದರೆ ಅವುಗಳನ್ನು ಚಾಲಕ ಸವಾರನ ವಶಕ್ಕೆ ಒಪ್ಪಿಸಬೇಕು.

*ಕಾರ್ಯಾಚರಣೆ ವೇಳೆ ಅಗತ್ಯ ಬಿದ್ದರೆ ಕಾನೂನು ಮತ್ತು ಸುವ್ಯವಸ್ಥೆ ಪೊಲೀಸರ ಸಹಕಾರವನ್ನು ಪಡೆದುಕೊಳ್ಳಲು ಕಾರ್ಯಾಚರಣೆ ಹಮ್ಮಿಕೊಳ್ಳುವ ಬಗ್ಗೆ ಮುಂಚಿತವಾಗಿಯೇ ವ್ಯಾಪ್ತಿಯ ಪೊಲೀಸ್ ಠಾಣೆಗೆ ವಿಷಯವನ್ನು ತಿಳಿಸುವುದು.

*ಕಾರ್ಯಾಚರಣೆಯನ್ನು ಸರಾಗವಾಗಿ ಸಮರ್ಥವಾಗಿ ನಡೆಸಬೇಕು, ಕಾರ್ಯಾಚರಣೆ ಸಮಯದಲ್ಲಿ ರಸ್ತೆಯಲ್ಲಿ ಸಂಚರಿಸುವ ಇನ್ನಿತರೆ ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುವುದು.

*ಯಾವುದೇ ಹಂತದಲ್ಲಿ ಸನ್ನಿವೇಶವನ್ನು ನಿಭಾಯಿಸುವುದು ಅಧಿಕಾರಿಗೆ ಕಷ್ಟಕರವಾಗಿ ಕಂಡುಬಂದಲ್ಲಿ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತಂದು ಅವರ ಮಾರ್ಗದರ್ಶನವನ್ನು ಪಡೆಯುವುದು. ಹೀಗೆ ಸಾಕಷ್ಟು ನಿಯಮಗಳು ಸರ್ಕಾರ

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

ಹಾಗೂ ಪೋಲಿಸ್ ಇಲಾಖೆಯ ಸುತ್ತೋಲೆ ಆದೇಶದಲ್ಲಿದ್ದರೂ ಅನೇಕ ಕಡೆ ಇವೆಲ್ಲವನ್ನೂ ಗಾಳಿಗೆ ತೂರಿ ಕೇವಲ ದಂಡ ವಿಧಿಸುವುದಷ್ಟೇ ಕಾಯಕ ಮಾಡಿಕೊಂಡಿರುವಂತೆ ಕೆಲ ಸಂಚಾರಿ ಪೋಲಿಸರ ವರ್ತನೆ ಎಂಬುದು ಅನೇಕರ ವಾದ. ಕಳೆದ ವರ್ಷ ಕೆ.ಆರ್ ಪೇಟೆಯ ಪ್ರಕರಣ ಒಂದರಲ್ಲಿ ಸಂಚಾರಿ ಪೋಲಿಸರು ದಂಡ ಸಂಗ್ರಹಿಸುವಂತಿಲ್ಲ, ನಿಯಮ ಉಲ್ಲಂಘಿಸಿದರು ಕೋರ್ಟಿನಲ್ಲೇ ದಂಡ ಪಾವತಿಸುವುದು ಎಂಬ ಆದೇಶವನ್ನು ಹೊರಡಿಸಿದ್ದು ಇಲ್ಲಿ ಗಮನಿಸಬಹುದಾಗಿದೆ.

**ದಂಡ ಒಂದೇ ಪರಿಹಾರವಲ್ಲ**

ಸಂಚಾರ ಕಾನೂನುಗಳು ಮತ್ತು ನಿಯಮಗಳನ್ನು ಜಾರಿಗೊಳಿಸಿ ಸಂಚಾರ ಅಪಘಾತಗಳನ್ನು ತನಿಖೆ ಮಾಡಿ ನೇರ ಸಂಚಾರ ಮತ್ತು ದಟ್ಟಣೆ ನಿಯಂತ್ರಣ ಸಂಚಾರ ಸುರಕ್ಷತೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಬೇಕಾದ ಸಂಚಾರಿ ಪೋಲಿಸರು ಈ ರೀತಿ ನಡೆದುಕೊಳ್ಳುವುದು ಎಷ್ಟು ಸಮಂಜಸ? ಮಂಡ್ಯದಲ್ಲಿ ಕೂಡಾ ಇವುಗಳಲ್ಲಿ ಬಹುಪಾಲು ಪಾಲನೆ ಮಾಡದೇ ಇರುವುದು ಮೇಲ್ನೋಟಕ್ಕೆ ಸಾಬೀತಾದ ಕಾರಣ ಮೂವರು ಪೋಲಿಸರನ್ನು ಅಮಾನತು ಮಾಡಲಾಗಿದೆ. ಇಂತಹ ಘಟನೆಗಳು ನಡೆದಾಗ ಕೇವಲ ಅಧಿಕಾರಿಗಳ ಅಮಾನತು ಮಾಡುವುದು ಬಿಟ್ಟು ಕಾನೂನು ರೀತಿ ವಾಹನ ತಪಾಸಣೆ ಮಾಡಿ ಸಾರ್ವಜನಿಕರ ಜೊತೆಗೆ ಸ್ನೇಹಮಯವಾಗಿ ವರ್ತಿಸಿದಾಗ ಪೋಲಿಸರ ಮೇಲೂ ಗೌರವ ಹೆಚ್ಚಾಗುತ್ತದೆ. ಕೇವಲ ದಂಡ ಪ್ರಯೋಗ ಮಾತ್ರವಲ್ಲದೇ ನಿರಂತರವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು ಜಾರಿ ಮಾಡುತ್ತಿರಬೇಕು. ಅಚಾತುರ್ಯದ ಈ ರೀತಿಯ ವರ್ತನೆ ಬಿಟ್ಟು ಪ್ರಯಾಣಿಕರ ಜೊತೆಗೆ ಒಂದೊಳ್ಳೆ ವರ್ತನೆ ತೋರಿದರೆ ಇಂತಹ ಅದೆಷ್ಟೋ ಘಟನೆಗಳು ನಡೆಯದಂತೆ ತಡೆಯಬಹುದು ಅಲ್ಲವಾ!

**– ಮಂಜುನಾಥ್ ಚಿಕ್ಕಬಳ್ಳಾಪುರ, 7892741920**

# ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಕ್ರಿಯಾಶೀಲರಾದ ಕ್ಷೇತ್ರ ಶಿಕ್ಷಣಾಧಿಕಾರಿ ಪಿ.ಮಹಾದೇವಯ್ಯ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಾಲೂಕಿನ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದು ಪ್ರಸ್ತುತ ಶೈಕ್ಷಣಿಕ ವರ್ಷ ಪ್ರಾರಂಭದಲ್ಲಿ ಸರಕಾರಿ ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಪ್ರೌಢ ಶಾಲೆ ಮುಖ್ಯಗುರುಗಳ ಸಭೆಯನ್ನು ಮಾಡುತ್ತಾ ಎಲ್ಲರಿಗೂ ಮಕ್ಕಳ ಏಳ್ಗೆಗಾಗಿ ಎಲ್ಲರೂ ಪ್ರಾಮಾಣಿಕವಾಗಿ ಶ್ರಮ ವಹಿಸಿ ಕಾರ್ಯ ಪ್ರವೃತ್ತರಾಗಬೇಕು ಎಂದು ಮಾರ್ಗದರ್ಶನ ಮಾಡಿದರು.

ಹಾಗೆಯೇ ಖಾಸಗಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ಸಭೆಯನ್ನು ಮಾಡಿ ತಮ್ಮ – ತಮ್ಮ ಶಾಲೆಯ ಶುಲ್ಕವನ್ನು ಸಾರ್ವಜನಿಕರಿಗೆ ಕಾಣಿಸುವ ಹಾಗೆ ನೋಟೀಸ್ ಬೋರ್ಡ್ ಗೆ ಹಾಕಬೇಕು ಅನಧಿಕೃತ ಕೋಚಿಂಗ್ ಸೂಪರ್ ಸೆಂಟರ್ ನಡೆಸುವ ಶಾಲೆಯವರು ಕಡ್ಡಾಯವಾಗಿ ಮಕ್ಕಳನ್ನು ತಮ್ಮ ಶಾಲೆ ಲಾಗಿನಲ್ಲಿ ದಾಖಲಾತಿ ಮಾಡಿಕೊಂಡಿರಬೇಕು ಇಲ್ಲದೆ ಅನಧಿಕೃತವಾಗಿ ವಸತಿ ಮಕ್ಕಳನ್ನು ಅನುಮತಿ ಇಲ್ಲದೆ ಇಟ್ಟುಕೊಂಡರೆ ಅಂತಹ ಶಾಲೆಗಳ ವಿರುದ್ಧ ಕ್ರಿಮಿನಲ್ ಕೇಸ್ ಮಾಡಲಾಗುವುದು ಎಂದು ಮಾರ್ಗದರ್ಶನ ಮಾಡಿದರು. ಸಭೆಯಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿ ಶಿವರಾಜ ಪೂಜಾರಿ ಮಾತನಾಡಿ ಆಡಳಿತಾತ್ಮಕವಾಗಿ ಎಲ್ಲರೂ ಸಮಯಕ್ಕೆ ಸರಿಯಾಗಿ ಇಲಾಖೆ ನಿಯಮಗಳಂತೆ ಮಾಹಿತಿಯನ್ನು ಇಲಾಖೆಗೆ ಕೊಡಲು ತಿಳಿಸಿದರು ಹಾಗೆಯೇ ಕಂಪ್ಯೂಟರ್ ಪ್ರೋಗ್ರಾಮರ್ ಶಾಹುಲ್ ಖಾದ್ರಿಯವರು ಆನ್ ಲೈನ್ ಕಾರ್ಯ ಚಟುವಟಿಕೆಗಳ ಸಂಪೂರ್ಣ ಮಾಹಿತಿಯನ್ನು ತಿಳಿಸಿದರು. ಜೊತೆಗೆ ಪಠ್ಯ ಪುಸ್ತಕ ನೋಡಲ್ ಅಧಿಕಾರಿಗಳಾದ ಶರಣಪ್ಪ ಸರ್ ಮಾತನಾಡಿ ಈಗಾಗಲೇ ಕನ್ನಡ ಮಾಧ್ಯಮ 65% ಆಂಗ್ಲ ಮಾಧ್ಯಮ 75% ಪಠ್ಯ ಪುಸ್ತಕ ಬಂದಿದ್ದು ಎಲ್ಲರೂ 100%ಹಣ ಸಂದಾಯ ಮಾಡಿ ಪಠ್ಯ ಪುಸ್ತಕ ಪಡೆದುಕೊಳ್ಳಲು ತಿಳಿಸಿದರು. ಈ ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಪಿ ಮಹಾದೇವಯ್ಯ ಕ್ಷೇತ್ರ ಸಮನ್ವಯ ಅಧಿಕಾರಿ ಶಿವರಾಜ್ ಪೂಜಾರಿ ಈ ಸಿ ಓ ಶರಣಪ್ಪ ಮ್ಯಾನೇಜರ್ ನರೇಂದ್ರ ಬಾಬು ರಾಮಕೃಷ್ಣ ಬಿ ಆರ್ ಪಿ ಶಶಿಧರ್ ಹಾಗೆ ರೂಪ್ಸ್ ಸಂಘಟನೆಯ ತಾಲೂಕಾ ಪ್ರಧಾನ ಕಾರ್ಯದರ್ಶಿ ಶರಣು ಹುಣಸಗಿ ಪ್ರಾಣೇಶ್ ಕುಲಕರ್ಣಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಯ್ಯಪ್ಪ ಕೆ ಸುಭಾಸ್ ಬಿರಾದಾರ್ ಶರಣು ಗಣೇಕಲ್ ಸಿದ್ದಯ್ಯ ಸ್ವಾಮಿ ರುದ್ರಪ್ಪ ಮಲ್ಲಿಕಾರ್ಜುನ ದೇಸಾಯಿ ಗಬ್ಬೂರ ತಾಲೂಕಿನ ಖಾಸಗಿ ಶಿಕ್ಷಣ ಸಂಸ್ಥೆ ಗಳ ಮುಖ್ಯಸ್ಥರು ಮುಖ್ಯ ಗುರುಗಳು ಭಾಗವಹಿಸಿದ್ದರು.

**–ವರದಿ: ಶರಣು ಹುಣಸಗಿ, ಜಾಲಹಳ್ಳಿ**



# ವಿವಿಧ ಬೇಡಿಕೆ ಈಡೇರಿಕೆಗಾಗಿ ಅನಿರ್ಧಿಷ್ಟಾವಧಿ ಮುಷ್ಕರ

ಬೆಳಗಾವಿ :ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಂಘ (ರಿ.) ಬೆಂಗಳೂರು. ಬೈಲಹೊಂಗಲ ಶಾಖೆ ವತಿಯಿಂದ ವಿವಿಧ ಬೇಡಿಕೆ ಈಡೇರಿಕೆ ಸಲುವಾಗಿ ದಿ: 30–05–2025 ರಿಂದ ಅನಿರ್ಧಿಷ್ಟಾವಧಿ ಮುಷ್ಕರ ಕೈಗೊಳ್ಳುವ ಬಗ್ಗೆ ಮನವಿಯನ್ನು ಮಾನ್ಯ ಉಪ ವಿಭಾಗಾಧಿಕಾರಿಗಳು ಉಪವಿಭಾಗ, ಬೈಲಹೊಂಗಲ, ಮಾನ್ಯ ತಹಶೀಲ್ದಾರರು, ಬೈಲಹೊಂಗಲ, ಮಾನ್ಯ ಉಪಾಧ್ಯಕ್ಷರು ಪುರಸಭೆ, ಬೈಲಹೊಂಗಲ, ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ, ಮಾನ್ಯ ವೃತ್ತ ಆರಕ್ಷಕ ನಿರೀಕ್ಷಕರು ಇವರಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಬುಡ್ಡೇಸಾಬ



ಶಿರಸಂಗಿ ಉಪಾಧ್ಯಕ್ಷರು, ಶ್ರೀ ವಿರೇಶ ಹಸಬಿ ಮುಖ್ಯಾಧಿಕಾರಿಗಳು, ಶ್ರೀಮತಿ ರೇವತಿ ಆರ್, ಶ್ರೀ ಜಿ. ಜಿ. ಮಹಾಳಂಕ, ಶ್ರೀ ಬಸನಗೌಡ ಪಾಟೀಲ, ಶ್ರೀ ಬಿ. ಆಯ್. ಗುಡಿಮನಿ, ಶ್ರೀಮತಿ ಮಹಾದೇವಿ ನಟಕಟ್ಟಿನ, ಶ್ರೀ ಬಿ. ಎ. ಮಠದ, ಶ್ರೀ ಎಸ್. ಎನ್. ಪಾಟೀಲ, ಶ್ರೀ ಎ. ವಾಯ್. ಹೆಗಡೆ, ಶ್ರೀ ಸುರೇಶ ದುರದುಂಡಿ, ಶ್ರೀ ಬಿ. ಎ. ಖಾನಪ್ಪನವರ, ಶ್ರೀ ಸಂತೋಷ ನರಗುಂದ, ಶ್ರೀ ಡಿ. ಎಮ್. ಖಲೀಫ ಶ್ರೀಮತಿ ಲಕ್ಷ್ಮೀ ಮಾದರ, ಶ್ರೀಮತಿ ಸೋನಾಲಿ ಕೆ. ಬುಬನಾಳೆ, ಶ್ರೀ ಸೋಮನಿಂಗ ದೊಡವಾಡ, ಶ್ರೀ ಗಿರೀಶ ಜಿಗಜಿನ್ನಿ, ಶ್ರೀ ವಿನಾಯಕ ತೋಟಗಿ, ಶ್ರೀ ರುದ್ರಯ್ಯ ಚಿಕ್ಕಮಠ, ಶ್ರೀ ಅಶೋಕ ಹುಲ್ಲೆನ್ನವರ, ಶ್ರೀ ಬಸವರಾಜ ನೇಸರಗಿ, ಶ್ರೀ ಸಿದ್ರಾಮ ತಟವಾಟಿ ಹಾಗೂ ಎಲ್ಲ ಪೌರಕಾರ್ಮಿಕರು ಮತ್ತು ನೀರು ಸರಬರಾಜು ಸಿಬ್ಬಂದಿಗಳು ಇದ್ದರು.

**ವರದಿ ಮಂಜು .ಎಮ್. ಚಿಕ್ಕಣ್ಣವರ**

# ಇಂಡಿಯಲ್ಲಿ ಶೀಘ್ರ ತಾಯಿ–ಮಗುವಿನ ಆಸ್ಪತ್ರೆ ಸೇವೆ ಪ್ರಾರಂಭ : ಶಾಸಕ ಯಶವಂತರಾಯಗೌಡ ಪಾಟೀಲ

**ವಿಜಯಪುರ/ ಇಂಡಿ:** ಶೀಘ್ರದಲ್ಲೇ ಜಿಲ್ಲಾ ಮಟ್ಟದ ತಾಯಿ–ಮಕ್ಕಳ ಆಸ್ಪತ್ರೆ ಸೇವೆ ಇಂಡಿಯಲ್ಲಿ ಒದಗಿಸಿಕೊಡಲು ಪ್ರಯತ್ನ ನಡೆದಿದ್ದು, ಶೀಘ್ರದಲ್ಲೇ ಆರಂಭವಾಗಲಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಅವರು ತಾಲೂಕಾ ಆಸ್ಪತ್ರೆ ಆವರಣದಲ್ಲಿ ಅಂದಾಜು 55 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ ಸಾರ್ವಜನಿಕ ಆರೋಗ್ಯ ಘಟಕದ ನೂತನ ಪ್ರಯೋಗಾಲಯ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿ ನಾನು ನಿರೀಕ್ಷಿಸಿದಷ್ಟು ಆರೋಗ್ಯ ಸೇವೆ ಇಲ್ಲಿನ ಅಧಿಕಾರಿಗಳಿಂದ ಪ್ರಾಮಾಣಿಕವಾಗಿ ದೊರೆತಿರುವುದಿಲ್ಲ. ಡಾ.ಯಾಳವಾರ ಅಂತವರು ಇಲ್ಲಿ ಪ್ರಾಮಾಣಿಕವಾಗಿ ಸಾರ್ವಜನಿಕ ಸೇವೆ ಮಾಡಿ ಹೋಗಿದ್ದಾರೆ, ಪ್ರಾಮಾಣಿಕತೆಯಿಂದ ಸೇವೆ ಮಾಡಿದವರ ಹೆಸರು ಅಜರಾಮರವಾಗಿ ಇರುತ್ತದೆ ಎಂದು ಹೇಳಿದರು.

ಬಡವರು ವಿಶ್ವಾಸವಿಟ್ಟು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವ ವಾತಾವರಣ ನಿರ್ಮಾಣ ಮಾಡಬೇಕು, ಮಾಡುವ ಕೆಲಸದಲ್ಲಿ ಆತ್ಮಸಾಕ್ಷಿಗೆ ಹೆದರಿ ಸೇವೆ ಮಾಡಬೇಕು ಸಂವೇದನಾ ಶೀಲರಾಗಿ ಬಡವರ ಆರೋಗ್ಯ ಸೇವೆ ಮಾಡಬೇಕು ಎಂದು ಹೇಳಿದರು.



ಬಡವರಿಗೆ ನಿಸ್ವಾರ್ಥದಿಂದ ಸೇವೆ ಮಾಡಿ ಗುಣಪಡಿಸಿದಾಗ, ಅವರು ನೀಡುವ ಹಾರೈಕೆ ಕುಟುಂಬಕ್ಕೆ ಸಲ್ಲುತ್ತದೆ ಎಂದರು. ಮಾನವೀಯತೆಯ ಸೇವೆ ಮುಖ್ಯವಾಗಿದ್ದು ಅಂತಹ ಸೇವೆ ನಿಮ್ಮಿಂದ ಜನರಿಗೆ ಸಿಗಲಿ, ಮನುಷ್ಯತ್ವದಿಂದ ಬದುಕು ಸಾಗಿಸಿದರೆ ಅದುವೆ ಸಾರ್ಥಕ ಬದುಕು, ತಾಲೂಕಿನಿಂದ ಆಸ್ಪತ್ರೆ ಬರುವ ಜನರಿಗೆ 247 ಸೇವೆ ಒದಗಿಸಬೇಕು, ರೋಗಿಗಳು ನಮ್ಮ ಆಸ್ಪತ್ರೆಯ ಅತಿಥಿಗಳು ಎಂಬ ಭಾವನೆಯಿಂದ ಒಳ್ಳೆಯ ಸೇವೆ ಒದಗಿಸಬೇಕು, ತಾಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಡೆಗೆ ಗಮನ ಹರಿಸಬೇಕು ಭ್ರಷ್ಟಾಚಾರ ರಹಿತ ಸೇವೆ, ಸ್ವಚ್ಚತೆ, ಗುಣಮಟ್ಟದ ಸೇವೆಗೆ ಆದ್ಯತೆ ನೀಡಬೇಕು, ಆರೋಗ್ಯ ಸಂಪತ್ತಿಗಿಂತ ದೊಡ್ಡ ಸಂಪತ್ತು ಬೇರೆ ಇಲ್ಲ. ಪ್ರತಿಯೊಬ್ಬರೂ ಆರೋಗ್ಯದ ಕಡೆಗೆ ಗಮನ ಹರಿಸಬೇಕು. ಕೋವಿಡ್ ಬಗ್ಗೆ ಭಯಪಡದೇ, ಜಾಗ್ರತರಾಗಿರಬೇಕು.ಅಂತರ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಡಿಎಸ್ಓ ಡಾ.ಇನಾಮದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎ.ಸಿ ಅನುರಾಧಾ ವಸ್ತದ, ತಹಶೀಲ್ದಾರ ಬಿ.ಎಸ್.ಕಡಕಭಾವಿ, ಡಾ.ಇಂಗಳೆ, ಲಿಂಬಾಜಿ ರಾಠೋಡ, ಜಹಾಂಗೀರ ಸೌದಾಗರ, ಜಾವೀದ ಮೋಮಿನ, ಇಲಿಯಾಸ ಬೊರಾಮಣಿ, ಪ್ರಶಾಂತ ಕಾಳೆ, ಡಾ. ಅರ್ಚನಾ ಕುಲಕರ್ಣಿ, ಜೀತಪ್ಪ ಕಲ್ಯಾಣಿ, ಭೀಮಾಶಂಕರ ಮೂರಮನ, ಮುಸ್ತಾಕ ಇಂಡಿಕರ, ಸತೀಶ ಕುಂಬಾರ, ಡಾ.ರಾಜೇಶ ಕೋಳೆಕರ, ಸಂತೋಷ ಪರಸೆನವರ, ಶಿವಯೋಗೆಪ್ಪ ಚನಗೊಂಡ, ಭೀಮಣ್ಣ ಕವಲಗಿ, ಸುಧೀರ ಕರಕಟ್ಟಿ, ಡಾ. ಅಮೀತ ಕೊಳೆಕರ, ಡಾ.ಧೂಮಗೊಂಡ, ಡಾ.ರವಿ, ಡಾ.ಪ್ರವೀಣ, ಡಾ.ವಿಪುಲ, ಡಾ.ಸಂತೋಷ, ಡಾ.ವಿಕಾಸ, ರವಿ ಪೊಳ, ವಿಜಯಲಕ್ಷ್ಮಿ ಹಾದಿಮನಿ ಮೊದಲಾದವರು ಕಾರ್ಯಕ್ರಮದಲ್ಲಿ ಇದ್ದರು .

**–ವರದಿ ಅರವಿಂದ್ ಕಾಂಬಳೆ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01–06–2025 ಪುಟಗಳು:16

# ಜಗಜ್ಯೋತಿ ಬಸವೇಶ್ವರರ 892ನೇ ಜಯಂತಿ ಹಾಗೂ ಆಪರೇಷನ್ ಸಿಂಧೂರ ವಿಜಯೋತ್ಸವ

**ಬೆಂಗಳೂರು:** (ಮೆ–17) ಪ್ರೆಸ್ಟೀಜ್ ಜಿಂದಾಲ್ ಸಿಟಿ ಮಂಜುನಾಥ್ ನಗರ ಬಸವ ಬಳಗದ ವತಿಯಿಂದ ಅದ್ದೂರಿಯಾಗಿ ಜಗಜ್ಯೋತಿ ಬಸವೇಶ್ವರರ 892 ನೆಯ ಜಯಂತಿ ಮತ್ತು ಭಾರತೀಯ ಸೇನೆ ಪಾಪಿ ಪಾಕಿಸ್ತಾನದ ಮೇಲೆ 26 ಹೆಣ್ಣು ಮಕ್ಕಳ ಪರವಾಗಿ ತೆಗೆದುಕೊಂಡ ದಿಟ್ಟ ಹೆಜ್ಜೆಯ ಆಪರೇಷನ್ ಸಿಂಧೂರ ವಿಜಯೋತ್ಸವ ಆಚರಣೆ ಮಾಡಲಾಯಿತು.

ಪ್ರೆಸ್ಟೀಜ್ ಜಿಂದಾಲ್ ಸಿಟಿ ಅಪಾರ್ಟ್ ಮೆಂಟ್ ಬಸವ ಬಳಗದ ವತಿಯಿಂದ ಪ್ರತೀ ವರ್ಷದಂತೆ ಈ ವರ್ಷವೂ ಸಹ ಮಹಾತ್ಮಾ ಬಸವೇಶ್ವರರ ಜಯಂತಿ ಪೂರ್ವ ನಿಯೋಜನೆಯಂತೆ ಅಚ್ಚುಕಟ್ಟಾಗಿ ಬಲು ವಿಜೃಂಭಣೆಯಿಂದ ಜರುಗಿತು. ಬಸವ ಜಯಂತಿ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಬೇಲೀಮಠ ಕ್ಷೇತ್ರದ ಮಠಾಧ್ಯಕ್ಷರಾದ ಶ್ರೀ ಶಿವರುದ್ರ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಜಗದ್ಗುರು ಬಸವೇಶ್ವರರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಬಸವ ಜಯಂತಿಗೆ ಚಾಲನೆ ನೀಡಿ ಕಾರ್ಯಕ್ರಮವನ್ನು ಉದ್ದೇಶಿಸಿ "ಅಹಿಂಸೆ, ಸಮಾನತೆ ಮತ್ತು ಸತ್ಯದ ಮಾರ್ಗದರ್ಶಕ ಜಗದ್ಗುರು ಬಸವಣ್ಣನವರ ಜ್ಞಾನ, ಭಕ್ತಿ ಮತ್ತು ಕ್ರಾಂತಿ ನಮಗೆ ಸದಾ ಪ್ರೇರಣೆ ಆಗಲಿ, ಬಸವಜಯಂತಿಯ ಈ ಪವಿತ್ರ ದಿನದಂದು ನಿಜ ಜೀವನ ಮೌಲ್ಯಗಳನ್ನು ನೆನೆದು, ನೆಲೆಗೆ ತರುವ ಪ್ರತಿಜ್ಞೆ ಮಾಡೋಣ" ಎಂದು ಆಶೀರ್ವಚನ ನೀಡಿದರು, ಅವರ ಹಿತ ನುಡಿಗಳು ಎಲ್ಲರಲ್ಲೂ ಆಳವಾದ ಪ್ರಭಾವ ಬೀರಿತು.

ಬಸವ ಬಳಗದ ಮಕ್ಕಳು ಶರಣರ ಉಡುಗೆಯಲ್ಲಿ ಅನುಭವ ಮಂಟಪದ ಶರಣರ ಸಮಾಗಮವನ್ನು ನೆನಪಿಸಿದರು. ಸ್ಫೂರ್ತಿದಾಯಕ ಬಸವಣ್ಣನವರ ಜೀವನಚರಿತ್ರೆ ಬಿಂಬಿಸುವ ನಾಟಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಎಲ್ಲರ ಕಣ್ ಮನ ಸೆಳೆಯಿತು. ಸಾಯಂಕಾಲ ಜಗಜ್ಯೋತಿ ಬಸವೇಶ್ವರ ಮತ್ತು ಆಪರೇಷನ್ ಸಿಂಧೂರ ವಿಜಯೋತ್ಸವದ ಭವ್ಯ ಮೆರವಣಿಗೆ ಜರುಗಿತು. ಬಸವ ರಥೋತ್ಸವ ಮತ್ತು ಆಪರೇಷನ್ ಸಿಂಧೂರ ವಿಜಯೋತ್ಸವ ಕಾಶ್ಮೀರದ ಪೆಹಲ್ಗಾಮನಲ್ಲಿ 26 ಸಹೋದರಿಯರ ಸಿಂಧೂರ ಅಳಿಸಿದ ಪಾಕಿಸ್ತಾನಕ್ಕೆ ಆಪರೇಶನ್ ಸಿಂಧೂರ ಮೂಲಕ 9 ಉಗ್ರರ ತಾಣ ಗಳನ್ನು ಉಡೀಸ್ ಮಾಡಿದ ಭಾರತೀಯ ಸೇನೆಗೆ ಅಭಿನಂದನೆ ಸಲ್ಲಿಸಿ ಸಿಂಧೂರ ವಿಜಯೋತ್ಸವ ಆಚರಿಸಲಾಯಿತು. ಡೊಳ್ಳು ಕುಣಿತ, ನಂದಿ ಧ್ವಜ, ಕೋಲಾಟ, ವೀರಗಾಸೆ, ಸಂಗೀತ ವಿಶೇಷವಾಗಿ ವೀರಗಾಸೆ ಎಲ್ಲರ ಗಮನ ಸೆಳೆಯಿತು, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವೈಭವದಿಂದ ಜರುಗಿತು.

ಕಾರ್ಯಕ್ರಮಕ್ಕೆ ಮಳೆ ಮಧ್ಯದಲ್ಲಿ ತೊಂದರೆ ಕೊಟ್ಟರೂ ಲೆಕ್ಕಿಸದೆ ಪ್ರೆಸ್ಟೀಜ್ ಜಿಂದಾಲ್ ಸಿಟಿ ಬಸವ ಬಳಗದ ಎಲ್ಲಾ ಕುಟುಂಬ ಸದಸ್ಯರು ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಿ ತಮ್ಮ ಧರ್ಮ ಹಾಗೂ ದೇಶ ಭಕ್ತಿಯನ್ನು ಇನ್ನೊಬ್ಬರಿಗೆ ಮಾದರಿಯಾಗುವ ರೀತಿಯಲ್ಲಿ ತೋ–ರಿಸಿಕೊಟ್ಟರು.

**ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಎಲ್ಲಾ ಬಂಧುಗಳಿಗೆ–**
**ಪಿಜೆಸಿ ಬಸವ ಬಳಗದ ವತಿಯಿಂದ ಎಲ್ಲರಿಗೂ ಧನ್ಯವಾದಗಳು**

ಬಸವ ಜಯಂತಿಯನ್ನು ಅಭೂತಪೂರ್ವ ಯಶಸ್ಸಿಗೆ ಕೊಂಡೊಯ್ದ ಅಸಾಧಾರಣ ಸ್ವಯಂಸೇವಕರ ತಂಡಕ್ಕೆ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು! ನಿಮ್ಮ ಅವಿರತ ಪರಿಶ್ರಮ, ಹಗಲಿರುಳು ದುಡಿದ ನಿಮ್ಮ ಬದ್ಧತೆ ಈ ಯಶಸ್ವಿ ಕಾರ್ಯಕ್ರಮದ ಬುನಾದಿಯಾಗಿದೆ.

**ಕಾರ್ಯಕ್ರಮದ ಯಶಸ್ಸಿಗೆ ನಿಧಿ ಸಂಗ್ರಹಣೆ ನಿರ್ಣಾಯಕವಾಗಿತ್ತು.**

ನಿಧಿ ಸಂಗ್ರಹಣೆ ಪ್ರಯತ್ನಗಳನ್ನು ಮುನ್ನಡೆಸಿದ ಸಮರ್ಪಿತ ವ್ಯಕ್ತಿಗಳಿಗೆ ನಮ್ಮ ವಿಶೇಷ ಕೃತಜ್ಞತೆಗಳು. ನಿಮ್ಮ ಸಂಪನ್ಮೂಲ ಕ್ರೋಢೀಕರಣದ ಕೌಶಲ್ಯ ಮತ್ತು ದಣಿವರಿಯದ ಪ್ರಯತ್ನವು ಆಚರಣೆಯ ಪ್ರತಿಯೊಂದು ಅಂಶವು ಸಮೃದ್ಧವಾಗಿ ಬೆಳೆಯಲು ಆರ್ಥಿಕ ಸ್ಥಿರತೆಯನ್ನು ಒದಗಿಸಿತು.

**ಶ್ರೀಗಳ ಆಶೀರ್ವಚನ ಆಳವಾದ ಮತ್ತು ಜ್ಞಾನೋದಯವಾಗಿತ್ತು**

ಶ್ರೀ ಶಿವರುದ್ರ ಸ್ವಾಮೀಜಿ ಬೇಲೀಮಠ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಹಿತ ನುಡಿಗಳಿಂದ ಕಾಯಕ್ರಮ ಉದ್ದೇಶಿಸಿ ಧರ್ಮ ಸಂದೇಶ ನೀಡಿದ ತಮ್ಮ ಪಾದ ಕಮಲಗಳಿಗೆ ಶಿರ ಸಾಷ್ಟಾಂಗ ಪ್ರಾಣಾಮಗಳು.

**ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆ ಮತ್ತು ಮಕ್ಕಳಿಗೆ**
**ಮಾರ್ಗದರ್ಶನ ಬಹು ದೊಡ್ಡ ಜವಾಬ್ದಾರಿ**

ಮಕ್ಕಳಿಗೆ ಮಾರ್ಗದರ್ಶನ ನೀಡಿದ ನಿರ್ವಾಹಕರಿಗೆ ಧನ್ಯವಾದಗಳು.
ಮಕ್ಕಳ ತಾಳ್ಮೆ ಮತ್ತು ಅವರ ಕಾರ್ಯಕ್ರಮದ ಕುರಿತಾದ ಒಲವು ಮೆಚ್ಚಲೇ ಬೇಕು. ಮನಸ್ಸುಗಳನ್ನು ಪೋಷಿಸಿದ್ದಕ್ಕಾಗಿ ಮತ್ತು ಬಸವಣ್ಣನವರ ಶಾಶ್ವತ ಜ್ಞಾನವನ್ನು ತಿಳಿಸಿದ್ದಕ್ಕಾಗಿ ನಿಮಗೆ ವಂದನೆಗಳು. ನಿಮ್ಮ ಆಕರ್ಷಕ ಚಟುವಟಿಕೆಗಳು ಮತ್ತು ತಾಳ್ಮೆಯ ಮಾರ್ಗದರ್ಶನವು ಮುಂದಿನ ಪೀಳಿಗೆಯಲ್ಲಿ ತಿಳುವಳಿಕೆ ಮತ್ತು ಕರುಣೆಯ ಬೀಜಗಳನ್ನು ಬಿತ್ತಿದೆ ಎಂಬುದರಲ್ಲಿ ಸಂದೇಹವಿಲ್ಲ.

**ನಮ್ಮ ಸಾಂಸ್ಕೃತಿಕ ಪರಂಪರೆಯ ಜೊತೆ ದೇಶ ಭಕ್ತಿ ಮೆರೆದ ನಿಮಗೊಂದು ಸಲಾಂ**


ಇತ್ತೀಚೆಗೆ ಕಾಶ್ಮೀರದಲ್ಲಿ ನಡೆದ ಆತಂಕೀಯ ದಾಳಿಯ ಪ್ರತಿಫಲವಾಗಿ ಸೇನೆಯ ಆ ಪಾಪಿಗಳನ್ನು ಸದೆಬಡಿದ ಯಶಸ್ಸನ್ನು ನಮ್ಮ ನಾಡಿನ ಹೆಣ್ಣುಮಕ್ಕಳಿಗೆ ಅರ್ಪಿಸಿದ ದೇಶದ ಸೈನಿಕರಿಗೆ ನಮನ ಸಲ್ಲಿಸಿದ ರೋಮಾಂಚಕ ಪ್ರದರ್ಶನವಾದ ಆಪರೇಷನ್ ಸಿಂಧೂರ ವಿಜಯೋತ್ಸವ ಹಾಗೂ ಬಸವ ಜಯಂತಿ ಮೆರವಣಿಗೆ ಯಲ್ಲಿ ನಿಮ್ಮ ಅಚಲ ಉತ್ಸಾಹ ಮತ್ತು ದಣಿವರಿಯದ ಪ್ರಯತ್ನಗಳಿಂದ ಜೀವಂತವಾಯಿತು.

**ಅನಿರೀಕ್ಷಿತ ಮಳೆಯು ನಿಮ್ಮ ಉತ್ಸಾಹವನ್ನು ಕುಗ್ಗಿಸಲು ಸಾಧ್ಯವಾಗಲಿಲ್ಲ**

ಬದಲಾಗಿ ನಮ್ಮ ಸಮುದಾಯದೊಂದಿಗೆ ಬಸವ ಜಯಂತಿಯ ಸ್ಫೂರ್ತಿಯನ್ನು ಹಂಚಿಕೊಳ್ಳುವಲ್ಲಿ ನಿಮ್ಮ ಗಮನಾರ್ಹ ಸ್ಥಿತಿಸ್ಥಾಪಕತ್ವ ಮತ್ತು ಸಮರ್ಪಣೆಯನ್ನು ಅದು ಎತ್ತಿ ತೋರಿಸಿತು.

**ಹಬ್ಬದ ಮನೆ ಊಟ ಜ್ಞಾಪಕ ಬಂತು**

ಅಂತಿಮವಾಗಿ, ಅದ್ದೂರಿ ಉತ್ತರ ಕರ್ನಾಟಕ ಶೈಲಿಯ ಭೋಜನವು ದಿನದ ಹಬ್ಬದ ಆಚರಣೆಗಳಿಗೆ ಹೃತ್ಪೂರ್ವಕ ಮುಕ್ತಾಯವನ್ನು ನೀಡಿತು. ಅಂತಹ ಆತ್ಮೀಯತೆ ಮತ್ತು









ಔದಾರ್ಯದಿಂದ ಈ ರುಚಿಕರವಾದ ಊಟವನ್ನು ನಿಖರವಾಗಿ ಆಯೋಜಿಸಿ, ತಯಾರಿಸಿ ಮತ್ತು ಬಡಿಸಿದ ಸ್ವಯಂಸೇವಕರು ನಿಜಕ್ಕೂ ಸಮುದಾಯ ಮತ್ತು ಆತಿಥ್ಯದ ಮನೋಭಾವವನ್ನು ಸಾಕಾರಗೊಳಿಸಿದರು. ಮಹಾ ಪ್ರಸಾದಕ್ಕಾಗಿ ಉತ್ತರ ಕರ್ನಾಟಕದ ಶೈಲಿಯ ಊಟದ ವ್ಯವಸ್ಥೆ ಕಾರ್ಯಕ್ರಮದ ಕೊನೆಯಲ್ಲಿ ಆಯೋಜಿಸಲಾಗಿತ್ತು, ಇನ್ನು ಪಿಜೆಸಿ ಸಮುದಾಯದ ಎಲ್ಲಾ ಬಂಧುಗಳು ಕಾರ್ಯಕ್ರಮದಲ್ಲಿ ಅತ್ಯಂತ ಉತ್ಸುಕರಾಗಿ ಭಾಗವಹಿಸಿದರು.

**ನಾವೆಲ್ಲಾ ಒಂದು ಎಂದು ಐಕ್ಯತೆ ತೋರಿಸಿದ್ದು ಮಾತ್ರ**
**ಎಂದಿಗೂ ಮರೆಯದ ಅವಿಸ್ಮರಣೀಯ ಕ್ಷಣಗಳು**

ನಮ್ಮ ಅಸೋಸಿಯೇಷನ್ ಸಹಕಾರ ಹಾಗೂ ನಿಮ್ಮಲ್ಲಿ ಪ್ರತಿಯೊಬ್ಬರೂ, ನಿಮ್ಮ ವಿಶಿಷ್ಟ ಪ್ರತಿಭೆಗಳು, ಅಚಲ ಶಕ್ತಿ ಮತ್ತು ನಿಸ್ವಾರ್ಥ ಮನೋಭಾವದಿಂದ, ಬಸವ ಜಯಂತಿಯ ಭವ್ಯ ಯಶಸ್ಸಿಗೆ ಕೊಡುಗೆ ನೀಡಿದ್ದೀರಿ. ಪ್ರತಿಕೂಲ ಹವಾಮಾನದ ನಡುವೆಯೂ ನಿಮ್ಮ ಸಮರ್ಪಣೆ ನಿಜಕ್ಕೂ ಸ್ಫೂರ್ತಿದಾಯಕ ಮತ್ತು ಆಳವಾಗಿ ಮೌಲ್ಯಯುತವಾಗಿದೆ. ನಿಮ್ಮ ಅಸಾಧಾರಣ ಸೇವೆಗಾಗಿ ಮತ್ತು ಇದನ್ನು ನಿಜವಾಗಿಯೂ ಮರೆಯಲಾಗದ ಆಚರಣೆಯನ್ನಾಗಿ ಮಾಡಿದ್ದಕ್ಕಾಗಿ
ಪಿಜೆಸಿ ಬಸವ ಬಳಗದ ನಮ್ಮೆಲ್ಲರ ಹೃದಯಂತರಾಳದಿಂದ ಧನ್ಯವಾದಗಳು.

**ವರದಿ: ಜಗದೀಶ್ ಕುಮಾರ್ ಭೂಮಾ**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ಪುರಸಭೆ ನೌಕರರಿಂದ ಅನಿರ್ದಿಷ್ಟಾವಧಿ ಮುಷ್ಕರ



**ವಿಜಯಪುರ/ಇಂಡಿ:** ಪೌರ ಕಾರ್ಮಿಕರು ಕಾಯಂ ಮಾಡುವುದು, ಸರಕಾರಿ ನೌಕರರೆಂದು ಪರಿಗಣಿಸುವದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪೌರ ನೌಕರರು ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹುಚ್ಚಪ್ಪ ಶಿವಶರಣ ಮಾತನಾಡಿ, ಪೌರ ನೌಕರರನ್ನು ರಾಜ್ಯ ಸರಕಾರಿ ನೌಕರರೆಂದು ಪರಿಗಣಿಸುವದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇ-ರಿಸುವಂತೆ ಸರಕಾರಕ್ಕೆ ಮನವಿ ಸಲ್ಲಿಸಿ ಒತ್ತಾಯಿಸುತ್ತಲೇ ಬಂದಿದ್ದೇವೆ, ಆದರೆ ಇದುವರೆಗೂ ಸ್ಪಂದಿಸಿಲ್ಲ ಹೀಗಾಗಿ ಮುಷ್ಕರ ಅನಿವಾರ್ಯ ಎಂದರು.

ಅಸ್ಲಂ ಖಾದಿಮ ಮಾತನಾಡಿ, ಪೌರಾಡಳಿತ ಸಚಿವರು ಇಲಾಖೆ ಕಾರ್ಯದರ್ಶಿ ಪೌರಾಡಳಿತ ನಿರ್ದೇಶಕರು ಸೇರಿದಂತೆ ಯಾರಿಂದಲೂ ಸ್ಪಂದನೆ ಸಿಕ್ಕಿಲ್ಲ ಎಂದರು.

ಪ್ರವೀಣ ಸೋನಾರ ಮಾತನಾಡಿ, ಕಳೆದ ಏಪ್ರಿಲ್ 6 ರಂದು ರಾಜ್ಯ ಪರಿಷತ್ತಿನ ಕಾರ್ಯಕಾರಿಣಿ ಸಭೆ ನಡೆಸಿ ಬೇಡಿಕೆಗಳನ್ನು ಈಡೆರಿಸಲು 45 ದಿನಗಳ ಗಡುವು ನೀಡಲಾಗಿತ್ತು. ಅಲ್ಲಿಯವರೆಗೆ ಸಾಂಕೇತಿಕವಾಗಿ ಪ್ರತಿಭಟನೆ ಆರಂಭಿಸಿ ಗಡುವು ಮುಗಿದ ಬಳಿಕ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳಲು ತೀರ್ಮಾನಿಸಲಾಗಿತ್ತು. ಅದರಂತೆ ನೌಕರರು ಕಪ್ಪು ಪಟ್ಟಿ ಧರಿಸಿ ಕೆಲಸ ಮಾಡುವ ಜತೆಗೆ ಪಂಜಿನ ಮೆರವಣಿಗೆ ನಡೆಸಿ ಸರಕಾರದ ಗಮನ ಸೆಳೆಯಲಾಗಿತ್ತು ಎಂದರು.

ನಮ್ಮ ಬೇಡಿಕೆಗಳಾದ ಪೌರ ನೌಕರರನ್ನು ರಾಜ್ಯ ಸರಕಾರಿ ನೌಕರರೆಂದು ಪರಿಗಣಿಸಬೇಕು, ನಗದು ರಹಿತ ಆರೋಗ್ಯ ಚಿಕಿತ್ಸಾ ಸೌಲಭ್ಯ ಯೋಜನೆಗಳಾದ ಜ್ಯೋತಿ ಸಂಜೀವಿನಿಯನ್ನು ಪೌರ ನೌಕರರಿಗೂ ವಿಸ್ತರಿಸಬೇಕು ಸರಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯ ನೀಡಬೇಕು ಎಂದರು.

ಜಿಲ್ಲಾಧ್ಯಕ್ಷ ಅಬ್ಬಾಸಲಿ ಕಾಖಂಡಕಿ, ತಾಲೂಕಾ ಅಧ್ಯಕ್ಷೆ ಲಕ್ಷ್ಮಿ ಕಾಲೆಭಾಗ, ಶ್ರೀಶೈಲ ಗುಡ್ಡ, ಮಲ್ಲಪ್ಪ ಕಂಠಿಕರ, ಕಲಾವತಿ ಕಾಳೆ, ಮಲ್ಲಪ್ಪ ನಡಗಡ್ಡಿ, ಲತಾ ಗುಡುಮಿ, ಮರೆಪ್ಪ ಗುಡುಮಿ, ಮಾಳು ಹೇಳವರ, ಮಲ್ಲು ಕಾಳೆ, ಶಶಿ ದೇವರ, ಬಸು ಪಾಟೀಲ, ಮಲ್ಲಿಕಾರ್ಜುನ ಶಿವಶರಣ, ದೇವೆಂದ್ರ ಕಟ್ಟಿಮನಿ, ಬಸವರಾಜ ಮುಂಜನ್ನಿ, ಚಂದು ಕಾಲೆಭಾಗ, ತಹಸಿನಬಾನು ವಾಲಿಕಾರ, ಸುಭಾನಿ ಕಸಬ, ಸದ್ದಾಂ ಶೇಖ, ಮಲ್ಲಪ್ಪ ನಡಗಡ್ಡಿ, ಮುತ್ತು ಮುರಾಳ, ದೇವೆಂದ್ರ ಕಟ್ಟಿಮನಿ ಸೇರಿದಂತೆ ಅನೇಕರು ಇದ್ದರು.

**ಬೆಂಬಲ:** ರಾಜ್ಯ ಸರಕಾರಿ ನೌಕರರ ಇಂಡಿ ಘಟಕದ ಅಧ್ಯಕ್ಷ ಬಸವರಾಜ ರಾಹೂರ, ತಾಲೂಕಾ ಕರವೇ ಅಧ್ಯಕ್ಷ ಬಾಳು ಮುಳಜಿ, ಪುರಸಭೆ ಸದಸ್ಯರ ಸಂಘದ ಅನೀಲಗೌಡ ಬಿರಾದಾರ, ಭೀಮಾಶಂಕರ ಮೂರಮನ, ಉಮೇಶ ದೇಗಿನಾಳ, ಬಿಜೆಪಿಯ ಶೀಲವಂತ ಉಮರಾಣಿ , ಮಲ್ಲಿಕಾರ್ಜುನ ಕಿವಡೆ ಮತ್ತಿತರರು ಬೆಂಬಲ ವ್ಯಕ್ತ ಪಡಿಸಿದರು.

**ವರದಿ. ಅರವಿಂದ್ ಕಾಂಬಳೆ**

# ಟೆಂಡರ್ ಪ್ರಕಾರ ಶೌಚಾಲಯ ಶುಲ್ಕ ಪಡೆಯಬೇಕು : ಪ್ರಶಾಂತ ಅಂಗಡಿ

ಟೆಂಡರ್ ಪ್ರಕಾರ ಶೌಚಾಲಯ ಶುಲ್ಕ ಪಡೆಯಬೇಕೆಂದು ಪ್ರಶಾಂತ ಅಂಗಡಿ ಅವರು ಘಟಕ ವ್ಯವಸ್ಥಾಪಕರಾದ ಕೆ. ಬಿ. ಅಮ್ಮಣಗಿ ರವರಿಗೆ ಮನವಿ ಸಲ್ಲಿಸಿದರು.

ಬೆಳಗಾವಿ ಜಿಲ್ಲೆ ರಾಮದುರ್ಗ ಪಟ್ಟಣದ ಬಸ್ ನಿಲ್ದಾಣದಲ್ಲಿ ಶೌಚಾಲಯ ಬಳಕೆದಾರರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದಾರೆ. ಶೌಚಾಲಯದಲ್ಲಿ ಮೂತ್ರ ವಿಸರ್ಜನೆಗಾಗಿ ಮಹಿಳೆಯರಿಂದ ಹಣ ಪಡೆಯಲಾಗುತ್ತಿದ್ದು, ಟೆಂಡರ್ ಷರತ್ತು ಉಲ್ಲಂಘಿಸುತ್ತಿದ್ದಾರೆ. ಟೆಂಡರ್ ಸಂದರ್ಭದಲ್ಲಿ ಪ್ರಯಾಣಿಕರಿಗೆ ಉಚಿತವಾಗಿ ಮೂತ್ರ ವಿಸರ್ಜನೆಗೆ ಅವಕಾಶ ನೀಡಬೇಕು ಎಂದು ವಿಧಿಸಿದ ಷರತ್ತುಗಳ ಉಲ್ಲಂಘನೆಯಾಗುತ್ತಿದೆ.

ಶೌಚಾಲಯ ಬಳಕೆದಾರರಿಂದ ಗುತ್ತಿಗೆದಾರರು 1ರಿಂದ 2 ರೂ. ಪಡೆಯಬೇಕು ಎಂಬ ನಿಯಮಗಳಿದ್ದರೂ ಕೂಡಾ ಮಹಿಳೆಯರಿಂದ ಮೂತ್ರ ವಿಸರ್ಜನೆಗೆ 2ರೂ ಹಾಗೂ ಶೌಚಾಲಯ ಬಳಕೆಗೆ 10 ರೂಪಾಯಿ ಹೆಚ್ಚಿನ ಹಣ ಪಡೆಯುತ್ತಿದ್ದಾರೆ.



**ಮಹಿಳೆಯರಿಗೆ ಮುಜುಗರ**

ಇಲ್ಲಿ ಪುರುಷ ಸಿಬ್ಬಂದಿ ಮಹಿಳಾ ಶೌಚಾಲಯದ ಬಳಿ ಹಣ ವಸೂಲಿ ಮಾಡುತ್ತಿದ್ದು, ಮಹಿಳೆಯರು ಶೌಚಾಲಯಕ್ಕೆ ತೆರಳಲು ಮುಜುಗರ ಅನುಭವಿಸುವಂತಾಗಿದೆ.


ಶೌಚಾಲಯ ಪ್ರವೇಶ ದ್ವಾರದಲ್ಲಿ ಶೌಚಾಲಯ ಉಪಯೋಗಿಸಲು ವಿಧಿಸುವ ಶುಲ್ಕದ ವಿವರ ಹಾಕಬೇಕು. ಆದರೆ ಇದುವರೆಗೆ ಸೂಚನಾ ಫಲಕ ಹಾಕಿಲ್ಲ. ನಿಗದಿತ ಶುಲ್ಕ ಗೊತ್ತಾದರೆ, ಪ್ರಯಾಣಿಕರು ಜಗಳ ಮಾಡುತ್ತಾರೆ ಎನ್ನುವ ಕಾರಣಕ್ಕೆ ಬರಹ ಅಳಿಸಲಾಗಿದೆ. ಶೌಚಾಲಯದಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಕನ್ನಡ ಮಾತನಾಡಲಿಕ್ಕೆ ಕೂಡಾ ಬರುವುದಿಲ್ಲ ಅಂಥವರಿಗೆ ನೀವು ಏಕೆ ಟೆಂಡರನ್ನು ನೀಡುತ್ತೀರಿ ಎಂದು ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗುತ್ತಿದೆ

ಟೆಂಡರ್ ಪ್ರಕಾರ ಶೌಚಾಲಯ ಬಳಕೆದಾರ-ರಿಂದ 2 ರೂ. ತೆಗೆದುಕೊಳ್ಳಬೇಕು ಇದನ್ನು ಬಿಟ್ಟು 10 ರೂಪಾಯಿ ತೆಗೆದುಕೊಳ್ಳುತ್ತಿದ್ದಾರೆ ಶೌಚಾಲಯ ಬಳಕೆದಾರರು 5 ರೂ. ಕೊಡಲು ಹೋದರೆ ಅವರಿಂದ 10 ರೂಪಾಯಿ ಬೇಕೆಂದು ಹೆಚ್ಚಿನ ಶುಲ್ಕ ವಸೂಲಿ ಮಾಡುತ್ತಿದ್ದಾರೆ ಇದರ ಬಗ್ಗೆ ಸಮಾಜ ಸೇವಕರಾದ ಪ್ರಶಾಂತ ಅಂಗಡಿ ಅವರು ರಾಮದುರ್ಗ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಘಟಕ ವ್ಯವಸ್ಥಾಪಕರಾದ ಕೆ. ಬಿ. ಅಮ್ಮಣಗಿ ಅವರಿಗೆ ಟೆಂಡರ್ ಪ್ರಕಾರ ಶೌಚಾಲಯ ಬಳಕೆದಾರರಿಂದ ಶುಲ್ಕ ಪಡೆಯಬೇಕು ಎಂದು ಮನವಿ ಮಾಡಿಕೊಂಡರು.

**ವರದಿ ಕರಿಯಪ್ಪ ಮಾ. ಮಾದರ**

# ವಿಧಾನಸಭೆ ಮುಖ್ಯ ಸಚೇತಕ ಅಶೋಕ್ ಪಟ್ಟಣ ಇವರಿಗೆ ಮನವಿ ಸಲ್ಲಿಸಿದ ಪ್ರಶಾಂತ್ ಅಂಗಡಿ

**ರಾಮದುರ್ಗ ಪುರಸಭೆ ಕಲ್ಯಾಣ ಮಂಟಪ ಹಾಗೂ ಪುರಸಭೆ ಕಚೇರಿಯನ್ನು ದುರಸ್ತಿ ಪಡಿಸಲು ಪ್ರಶಾಂತ್ ಅಂಗಡಿ ಇವರಿಂದ ವಿಧಾನಸಭೆ ಮುಖ್ಯ ಸಚೇತಕ ಅಶೋಕ್ ಪಟ್ಟಣ ಇವರಿಗೆ ಮನವಿ.**



**ಬೆಳಗಾವಿ/ರಾಮದುರ್ಗ :** ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಪುರಸಭೆ ಕಲ್ಯಾಣ ಮಂಟಪವು ದುರಸ್ತಿ ಇರುವುದ-ರಿಂದ ಪುರಸಭೆಗೆ ಒಂದು ವರ್ಷಕ್ಕೆ ಸುಮಾರು 5 ರಿಂದ 8 ಲಕ್ಷದವರೆಗೆ ಬಾಡಿಗೆ ರೂಪದಲ್ಲಿ ಬರುವ ಆದಾಯವನ್ನು ಪುರಸಭೆ ಅವರು ಕಳೆದುಕೊಳ್ಳುತ್ತಿದ್ದೀರಿ ಆದರೆ ಪುರಸಭೆ ಕಲ್ಯಾಣ ಮಂಟಪ ನಿರ್ಮಾಣವಾದಾಗಿನಿಂದ ಇದುವರೆಗೂ ಅಲ್ಲಿ ಸರಿಯಾಗಿ ವಿದ್ಯುತ್, ಶೌಚಾಲಯದ ನೀರು, ಕಿಡಕಿಗಳು, ರೂಮಿನ ಬಾಗಿಲುಗಳು ಸರಿಯಾಗಿ ಇಲ್ಲದೇ ಇರುವುದರಿಂದ ಇದುವರೆಗೂ ದುರಸ್ತಿ ಮಾಡದೆ ಇರುವುದು ಬೇಸರದ ಸಂಗತಿಯಾಗಿದೆ, ಸಭೆ ಸಮಾರಂಭಗಳಿಗೆ ಹಾಗೂ ಮದುವೆ ಸೀಜನ್‌ನಲ್ಲಿ ಬಡವರಿಗೆ ಈ ಕಲ್ಯಾಣ ಮಂಟಪವು ತುಂಬಾ ಅನುಕೂಲವಾಗಿದ್ದು ಈಗ ಈ ಕಲ್ಯಾಣ ಮಂಟಪ ದುರಸ್ತಿಯಲ್ಲಿ ಇರುವುದರಿಂದ ಪುರಸಭೆಯವರು ಬಾಡಿಗೆ ನೀಡದೇ ಇರುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗದೆ ತೊಂದರೆಯಾಗಿದ್ದು ಆದಷ್ಟು ಬೇಗ ಈ ಪುರಸಭೆ ಕಲ್ಯಾಣ ಮಂಟಪವನ್ನು ದುರಸ್ತಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಪಟ್ಟಣದ ಪುರಸಭೆ ಕಚೇರಿಯ ಗೋಡೆಗಳು ಅಲ್ಲಲ್ಲಿ ಶಿಥಿಲಗೊಂಡಿದ್ದು ಮಳೆ ಆದರೆ ಸಾಕು ಮಳೆಯ ನೀರು ಪುರಸಭೆಯ ಕಚೇರಿಯ ಒಳಗೆ ಬೀಳುತ್ತದೆ ಇದರಿಂದ ಕಚೇರಿಯಲ್ಲಿ ಇರತಕ್ಕಂತಹ ದಾಖಲೆಗಳು ಹಾಳಾಗುವ ಸಾಧ್ಯತೆ ಇದೆ. ಅದಲ್ಲದೆ ಯಾವಾಗ ಬೇಕಾದರೂ ಪುರಸಭೆ ಕಟ್ಟಡದ ಗೋಡೆಯು ಬೀಳುವ ಸಾಧ್ಯತೆ ಇದೆ. ಇದ-ರಿಂದ ಸಾರ್ವಜನಿಕರಿಗೆ ಹಾಗೂ ಅಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿಗಳಿಗೆ ಶಿಥಿಲಗೊಂಡ ಗೋಡೆಗಳು ಅಪಾಯಕಾರಿ ಆಗಿದ್ದು ದಯವಿಟ್ಟು ಪುರಸಭೆ ಕಚೇರಿ ಮತ್ತು ಪುರಸಭೆ ಕಲ್ಯಾಣ ಮಂಟಪವನ್ನು ದುರಸ್ತಿ ಮಾಡಬೇಕೆಂದು ಸಮಾಜ ಸೇವಕರು ಹಾಗೂ ಪತ್ರಕರ್ತರಾದ ಪ್ರಶಾಂತ್ ಶಿ. ಅಂಗಡಿ ಅವರು ವಿಧಾನಸಭೆ ಮುಖ್ಯ ಸಚೇತಕ ಅಶೋಕ್ ಪಟ್ಟಣ ಅವರಿಗೆ ಮನವಿ ಮಾಡಿದರು.

**ವರದಿ ಕರಿಯಪ್ಪ ಮಾ. ಮಾದರ**

ಕರುನಾಡ ಕಂದ
ಸಂಪುಟ 04 | ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ಸುಳ್ಳು ಭರವಸೆಗಳನ್ನು ನೀಡಿ ಮಹಿಳೆಯ ಜೊತೆ ಲೈಂಗಿಕ ಕ್ರಿಯೆ ನಡೆಸಿದರೆ 10 ವರ್ಷಗಳವರೆಗೆ ಜೈಲು ಶಿಕ್ಷೆ

ಸಮಾಜದಲ್ಲಿ ಮಹಿಳೆಯರು ಬದುಕು ಕಟ್ಟಿಕೊಳ್ಳುವುದು ತುಂಬಾ ಕಷ್ಟ, ಕಷ್ಟಪಟ್ಟು ಓದಿ ಉದ್ಯೋಗವನ್ನು ಪಡೆಯುವ ಹೆಣ್ಣುಮಕ್ಕಳು ಹಾಗೂ ವಿದ್ಯೆ ಕಲಿಯಲು ಸಾಧ್ಯವಾಗದೆ ಸಣ್ಣ-ಪುಟ್ಟ ಉದ್ಯೋಗ ಮಾಡುವ ಮಹಿಳೆಯರು, ಉದ್ಯೋಗ ನೀಡುವ, ಮೇಲ್ವಿಚಾರಕ, ಸಹ ಉದ್ಯೋಗಿ ಹಾಗೂ ಇತರೆ ಯಾರೇ ಪುರುಷರು ಸುಳ್ಳು ಭರವಸೆ ಆಮಿಷಗಳಿಗೆ ಒಳಪಡಿಸಿ ಮಹಿಳೆಯ ಜೊತೆ ಲೈಂಗಿಕ ಕ್ರಿಯೆ ನಡೆಸುವ ಆರೋಪಗಳು ಸರ್ವೇ ಸಾಮಾನ್ಯವಾಗಿ ಕಾಣಬಹುದಾಗಿದೆ. ಈ ರೀತಿ ಸುಳ್ಳು ಭರವಸೆಗಳನ್ನು ನೀಡಿ ಮಹಿಳೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸಿದರೆ ಭಾರತೀಯ ನ್ಯಾಯ ಸಂಹಿತಾ (ಬಿ. ಎನ್. ಎಸ್) ನ ಸೆಕ್ಷನ್ 69 ರ ಪ್ರಕಾರ ದಂಡನೆಗೆ ಗುರಿಪಡಿಸಲಾಗುತ್ತದೆ.

ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ನ ಸೆಕ್ಷನ್ 69 ರ ಪ್ರಕಾರ, ಮದುವೆಯ ಸುಳ್ಳು ಭರವಸೆ ಅಥವಾ ಇತರ ಮೋಸದ ವಿಧಾನಗಳ ಆಧಾರದ ಮೇಲೆ ಮಹಿಳೆಯೊಂದಿಗೆ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿದರೆ, 10 ವರ್ಷಗಳವರೆಗೆ ಜೈಲು ಶಿಕ್ಷೆಗೆ ಗುರಿಪಡಿಸಲಾಗುವುದು.

ಮದುವೆ ಅಥವಾ ಉದ್ಯೋಗದಂತಹ ಸುಳ್ಳು ಭರವಸೆಗಳನ್ನು ನೀಡುವ ಮೂಲಕ, ಅವುಗಳನ್ನು ಪೂರೈಸುವ ಯಾವುದೇ ಉದ್ದೇಶವಿಲ್ಲದೆ, ಪುರುಷನು





ಕಿರಣ್.ಕೆ.ಟಿ ವಕೀಲರು
ಅಂಕಣ ನಿಮ್ಮ ಬದುಕಿಗೆ ಕಾನೂನು ಕವಚ

ಮಹಿಳೆಯನ್ನು ಲೈಂಗಿಕ ಸಂಭೋಗ ಮಾಡಿದರೆ ಈ ಸೆಕ್ಷನ್ ಅಡಿಯಲ್ಲಿ ದಂಡನೆಗೆ ಗುರಿಪಡಿಸಲಾಗುತ್ತದೆ.

**ಮೋಸದ ವಿಧಾನಗಳು:**

ಮದುವೆಯ ಭರವಸೆ, ಉದ್ಯೋಗ ನೀಡುವ ಭರವಸೆ, ಉದ್ಯೋಗ ಬಡ್ತಿ ಹಾಗೂ ಇತರೆ ಯಾವುದೇ ಸುಳ್ಳು ಭರವಸೆಗಳನ್ನು ನೀಡಿ ಪುರುಷನು ಮಹಿಳೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸುವುದು.


ಸೆಕ್ಷನ್ 69 ರ ಅಡಿಯಲ್ಲಿ ವಂಚನೆಯ ವಿಧಾನಗಳಿಂದ ಉಂಟಾಗುವ ಲೈಂಗಿಕ ಸಂಭೋಗವು ಅತ್ಯಾಚಾರದ ಅಪರಾಧವಲ್ಲ ಕಾರಣವೇನೆಂದರೆ, ಸುಳ್ಳು ಆಮಿಷಗಳನ್ನು ನೀಡಿ ಪುರುಷ ಮಹಿಳೆಯನ್ನು ಲೈಂಗಿಕ ಕ್ರಿಯೆ ನೆಡಸುವ ಸಂದರ್ಭದಲ್ಲಿ ಲೈಂಗಿಕ ಕ್ರಿಯೆ ಇಬ್ಬರ ಪರಸ್ಪರ ಒಪ್ಪಿಗೆಯೊಂದಿಗೆ ನಡೆಯುವ ಕಾರಣ, ಈ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರ ಎಂದು ಪರಿಗಣಿಸಲಾಗುವುದಿಲ್ಲ, ಆದರೆ ಈ ರೀತಿಯ ಲೈಂಗಿಕ ಕ್ರಿಯೆಯು ಶಿಕ್ಷಾರ್ಹವಾಗಿದೆ. ಮೇಲೆ ತಿಳಿಸಿರುವ ರೀತಿಯಲ್ಲಿ ವಂಚನೆಗಳು ನಡೆದಲ್ಲಿ ನೇರವಾಗಿ ಪೋಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಬಹುದಾಗಿದೆ ಹಾಗೂ ಒಂದು ವೇಳೆ ಪೋಲಿಸರು ದೂರು ದಾಖಲಿಸದೆ ಇದ್ದಲ್ಲಿ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ದಾಖಲಿಸಬಹುದಾಗಿದೆ.

# 'ನಾಯಕತ್ವ ಗುಣ ಬೆಳೆಸುವ ಜೆಸಿಐ' : ಜೆಸಿ ಮೊಹಮ್ಮದ ವಾಸೀಮ್ ಫಯಾಜ್

**ಬಳ್ಳಾರಿ / ಕಂಪ್ಲಿ :** ಪ್ರತಿ ಮನುಷ್ಯನಿಗೆ ಉತ್ತಮ ಜೀವನ ನಿರ್ವಹಣೆಯೊಂದಿಗೆ ಉನ್ನತ ಸಾಧನೆಗೆ ವಿವಿಧ ಹಂತಗಳ ತರಬೇತಿ ಅವಶ್ಯಕವಾಗಿದೆ ಎಂದು ಜೆಸಿಐ ನ ವಲಯ ತರಬೇತುದಾರ ಜೆಸಿ ಮೊಹಮ್ಮದ ವಾಸೀಮ್ ಫಯಾಜ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜೆಸಿಐ ಕಂಪ್ಲಿ ಸೋನಾ ಘಟಕದ ವತಿಯಿಂದ ಏರ್ಪಡಿಸಿದ್ದ ಜೆಸಿಐ ಭಾರತ ರಾಷ್ಟ್ರೀಯ ತರಬೇತಿ ದಿನಾಚರಣೆ ಹಾಗೂ ವಿದ್ಯಾರ್ಥಿಗಳಿಗೆ ಉನ್ನತ ಸಾಧನೆಗೆ ಉತ್ತಮ ಗುರಿ ಮಾರ್ಗದರ್ಶನ ಕುರಿತು ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಜೆಸಿಐ ವತಿಯಿಂದ ವಿದ್ಯಾರ್ಥಿಗಳಿಗೆ,ಉದ್ಯಮಿಗಳಿಗೆ, ಯುವಕರಿಗೆ,ಮಹಿಳೆಯರಿಗೆ ಸೇರಿದಂತೆ ವಿವಿಧ ರಂಗ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುವವರಿಗೆ ಹಂತ ಹಂತವಾಗಿ ನಿರಂತರ ತರಬೇತಿ ಆಯೋಜಿಸುವ ಮೂಲಕ ಸದೃಢ ರಾಷ್ಟ್ರನಿರ್ಮಾಣ ಹಾಗೂ ನಾಯಕತ್ವ ಗುಣ ಬೆಳೆಸಲು ಜೆಸಿಐ ಮುಂದಾಗುತ್ತಿದೆ ಎಂದರು.



ಜೆಸಿಐ ಕಂಪ್ಲಿ ಸೋನಾ ಘಟಕದ ಅಧ್ಯಕ್ಷ ಜೆಸಿ ಬಿ.ರಸೂಲ್ ಅಧ್ಯಕ್ಷತೆ ವಹಿಸಿ ಮಾತನಾಡಿ ವ್ಯಕ್ತಿಯ ವ್ಯಕ್ತಿತ್ವವನ್ನು ವಿಕಸನಗೊಳಿಸಿ ಬೆಳೆಸುವ ಕಾರ್ಯವನ್ನು ಜೆಸಿಐ ಸಂಸ್ಥೆ ಮಾಡುತ್ತಿದೆ. ಎಲ್ಲ ಕ್ಷೇತ್ರಗಳ ವ್ಯಕ್ತಿಗಳಿಗೆ ವಿಶೇಷ ತರಬೇತಿ ನೀಡಿ ಬದಲಾವಣೆಯೊಂದಿಗೆ ಮಾದರಿಯಾಗಿ ಕಾರ್ಯ ನಿರ್ವಹಿಸುವಂತೆ ಸಂಸ್ಥೆಯು ಪ್ರೇರೇಪಿಸುತ್ತಿದೆ. ಆದ್ದರಿಂದ ಜೆಸಿಐ ಸೇರ್ಪಡೆ ಮೂಲಕ ಪದವಿ ವಿದ್ಯಾರ್ಥಿಗಳು ಸಾಮಾಜಿಕ ಚಿಂತನೆಯನ್ನು ಮೈಗೂಡಿಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಕೈಗೊಳ್ಳಲು ಮುಂದಾಗಬೇಕು ಎಂದರು.

ಈ ವೇಳೆ ಕಾಲೇಜಿನ ಪ್ರಾಂಶುಪಾಲ ಎಂ.ಪಿ. ಬಾಲಾಜಿ ಮಾತನಾಡಿ ಎಲ್ಲಾ ಹಂತದಲ್ಲೂ ತರಬೇತಿ ಪಡೆದರೆ ವಿದ್ಯಾರ್ಥಿಗಳಿಗೆ ಉನ್ನತ ಸಾಧನೆಗೆ ಉತ್ತಮವಾಗುತ್ತ ಮಾರ್ಗದರ್ಶನದ ಜೊತೆಗೆ ಸಹಕಾರಿಯಾಗಲಿದೆ ಎಂದರು.

ಜೆಸಿಐ ತರಬೇತಿ ಕಾರ್ಯಾಗಾರದಲ್ಲಿ ವಲಯ ತರಬೇತುದಾರ ಮೊಹಮ್ಮದ ವಾಸೀಮ್ ಫಯಾಜ್ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಜೆಸಿಐ ಕಂಪ್ಲಿ ಸೋನಾ ಘಟಕದ ಪೂರ್ವಾಧ್ಯಕ್ಷ ಹೆಚ್.ಜಿ.ಎಫ್ ಇಂದ್ರಜಿತ್ ಸಿಂಗ್ ಪದಾಧಿಕಾರಿಗಳಾದ ಜೆಸಿ ಅಕ್ಕಿಜಿಲಾನ್, ಜೆಸಿ ಯೂಸೂಫ್, ಜೆಸಿ ವೆಂಕಟಸಪ್ತಗಿರಿ, ಜೆಸಿ ಅಮರನಾಥ ಶಾಸ್ತ್ರಿ, ಎ. ಎಸ್. ಯಲ್ಲಪ್ಪ, ಉಪನ್ಯಾಸಕರಾದ ಡಾ. ಚಂದ್ರಶೇಖರ ವಿ. ಬಿಳೇಗುಡ್ಡ, ರಾಜಾ್ಮ ಟಿ.ಎಂ.ಆರ್. , ಡಾ.ಜೆ.ಕೃಷ್ಣ, ಡಾ.ಕೆ ಮಹೇಶ, ಡಾ.ಅನ್ನಪೂರ್ಣಗುಡದೂರು, ಕಾಲೇಜಿನ ವಿದ್ಯಾರ್ಥಿಗಳು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

# 2 ಕೋಟಿ ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ಶಾಸಕ ಎಂ. ಆರ್. ಮಂಜುನಾಥ್

**ಚಾಮರಾಜನಗರ/ ಹನೂರು:** ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಾದ ಚನ್ನಾಲಿಂಗನಹಳ್ಳಿ ಮತ್ತು ಕಣ್ಣೂರು ಗ್ರಾಮಗಳಲ್ಲಿ 2 ಕೋಟಿ ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಎಂ. ಆರ್. ಮಂಜುನಾಥ್ ಅವರು 2024 - 25 ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಪ್ರಗತಿ ಕಾಲೋನಿ ಯೋಜನೆ ಅಡಿಯಲ್ಲಿ ಸುಮಾರು 2 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ 1.50 ಕೋಟಿ ಚೆನ್ನಾಲಿಂಗನಹಳ್ಳಿ ಹಾಗೂ 50 ಲಕ್ಷ ಕಣ್ಣೂರು ಗ್ರಾಮಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ-ಕ್ಕಾಗಿ ಭೂಮಿ ಪೂಜೆ ನೆರವೇರಿಸಲಾಗಿದೆ. ಮುಂದಿನ ದಿನಗಳಲ್ಲಿ ಇತರೆ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಲಾಗುವುದು ಎಂದರು.



ನಂತರ ಮಾತನಾಡಿದ ಅವರು ಗುತ್ತಿಗೆದಾರರಿಗೆ ನನ್ನದೊಂದು ಕಿವಿಮಾತು ನೀವು ಕೈಗೊಳ್ಳುವ ಕಾಮಗಾರಿಯ ಗುಣಮಟ್ಟದಿಂದ ಕೂಡಿರಬೇಕು ಗುಣಮಟ್ಟದ ವಿಚಾರದಲ್ಲಿ ನನ್ನ ಜೊತೆ ಯಾವುದೇ ರಾಜಿ ಇಲ್ಲ ಸ್ಥಳೀಯ ಮುಖಂಡರ ವಿಶ್ವಾಸದೊಂದಿಗೆ ಪ್ರತಿ ಹಂತದ ಕಾಮಗಾರಿಯ ಪ್ರಗತಿಯನ್ನು ನನ್ನ ಗಮನಕ್ಕೆ ತರಬೇಕು ಗುಣಮಟ್ಟದ ಕಾಮಗಾರಿಯನ್ನು ಕೈಗೊಳ್ಳುವ ಜೊತೆಗೆ ಶೀಘ್ರಗತಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಬೇಕು ಎಂದು ತಿಳಿಸಿದರು.

ನಂತರ ಚನ್ನಾಲಿಂಗನಹಳ್ಳಿ ಗ್ರಾಮದ ಶಿಕ್ಷಕರಾದ ಕೆ. ನಾಗರಾಜು ಮಾತನಾಡಿ ನಮ್ಮ ಗ್ರಾಮದಲ್ಲಿ ಇನ್ನೂ ಅನೇಕ ಕೆಲಸ ಕಾರ್ಯಗಳು ಆಗಬೇಕಾಗಿದೆ, ಸಿದ್ದಪ್ಪಾಜಿ ದೇವಸ್ಥಾನದ ಮುಂಭಾಗ ಮುಖ್ಯದ್ವಾರ ನಿರ್ಮಾಣ, ಬಾಬಾ ಸಾಹೇಬ್ ಅಂಬೇಡ್ಕರ್ ಅಥವಾ ಜಗಜೀವನ ರಾಮ್ ಹೆಸರಿನಲ್ಲಿ ಗ್ರಂಥಾಲಯ, ಹಳೇಬೀದಿ ಮತ್ತು ಹೊಸಬೀದಿ ನಡುವೆ ಸಂಪರ್ಕ ಸಾಧಿಸುವ ಕಿರು ಸೇತುವೆ ನಿರ್ಮಾಣ, ಸಾಂಸ್ಕೃತಿಕ ಭವನ ನಿರ್ಮಾಣ, ಸಮುದಾಯದ ಹೊಸ ಬಡಾವಣೆಯಲ್ಲಿ ಸಿಸಿ ರಸ್ತೆ ನಿರ್ಮಾಣ, ಗ್ರಾಮದ ಪ್ರಮುಖ ಸ್ಥಳಗಳಲ್ಲಿ ಹೈ ಮಾಸ್ಕ್ ದೀಪ ಅಳವಡಿಸುವುದು ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಿ ಮಾನ್ಯ ಶಾಸಕರಿಗೆ ಗ್ರಾಮಸ್ಥರ ಪರವಾಗಿ ಮನವಿ ಪತ್ರವನ್ನು ಸಲ್ಲಿಸಿದರು.

ಇದೆ ಸಂದರ್ಭದಲ್ಲಿ ಕಣ್ಣೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ರಾಜಮ್ಮ, ಸದಸ್ಯರಾದ ರತ್ನಮ್ಮ, ಜ್ಯೋತಿ, ಸೋಮೇಶ, ರಮೇಶ, ಸೋಮಣ್ಣ, ಮುಖಂಡರಾದ ರಾಚಪ್ಪ, ನಾಗೇಂದ್ರ, ನಟರಾಜು, ಶ್ರೀಕಂಠ, ಮಲ್ಲೇಗೌಡ, ಸುರೇಶ್, ವೆಂಕಟೇಶ್,ರಾಚಪ್ಪ, ಯಜಮಾನರಾದ ಮಾದೇವ, ನಿಂಗರಾಜು, ಅರಸಯ್ಯ, ಕರಿಯನಪುರ ಕುಮಾರ, ರಾಜು, ಮಾದೇಶ್, ಗೋವಿಂದರಾಜು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

**ವರದಿ :ಉಸ್ಮಾನ್ ಖಾನ್**

ಕರುನಾಡ ಕಂದ
ಸಂಪುಟ 04 | ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ಶಾಸಕರಿಂದ ಕಾರ್ಮಿಕರಿಗೆ ಟೂಲ್ ಕಿಟ್ ವಿತರಣೆ



**ಚಾಮರಾಜನಗರ/ ಗುಂಡ್ಲುಪೇಟೆ :** ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಟೂಲ್ ಕಿಟ್ ಅನ್ನು ಶಾಸಕ ಎಚ್. ಎಂ. ಗಣೇಶಪ್ರಸಾದ್ ವಿತರಣೆ ಮಾಡಿದರು.

ಪಟ್ಟಣದ ಕಾರ್ಮಿಕ ಇಲಾಖೆ ಕಚೇರಿಯಲ್ಲಿ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕಾರ್ಮಿಕ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಟೂಲ್ ಕಿಟ್ ವಿತರಿಸಿ ಮಾತನಾಡಿದ ಶಾಸಕ ಎಚ್. ಎಂ. ಗಣೇಶಪ್ರಸಾದ್, ಸರ್ಕಾರದಿಂದ ಕಾರ್ಮಿಕರಿಗೆ ಹಲವು ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು, ಎಲ್ಲಾ ಕಾರ್ಮಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಜೊತೆಗೆ ವಿವಿಧ ಸವಲತ್ತುಗಳನ್ನು ಪಡೆದುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಮಿಕ ನಿರೀಕ್ಷಕ ಆರ್. ನಾರಾಯಣ ಮೂರ್ತಿ ಮಾತನಾಡಿ, ಸುಮಾರು 40 ಮಂದಿ ಕಾರ್ಮಿಕರಿಗೆ ಟೂಲ್ ಕಿಟ್ ಗಳನ್ನು ವಿತರಣೆ ಮಾಡಲಾಗುತ್ತಿದೆ, ಉತ್ತಮ ರೀತಿಯಲ್ಲಿ ಇದನ್ನು ಬಳಕೆ ಮಾಡಿಕೊಳ್ಳಿ ಎಂದು ತಿಳಿಸಿದರು.

**ಆರೋಗ್ಯ ತಪಾಸಣಾ ಶಿಬಿರ:**

ಪಟ್ಟಣದ ಕಾರ್ಮಿಕ ಇಲಾಖೆ ಕಚೇರಿ ಆವರಣದಲ್ಲಿ ಆಯೋಜನೆ ಮಾಡಲಾಗಿದ್ದ ಆರೋಗ್ಯ ತಪಾಸಣೆ ಶಿಬಿರಕ್ಕೆ ನೂರಾರು ಮಂದಿ ಕಾರ್ಮಿಕರು ಆಗಮಿಸಿ ಕಣ್ಣು, ವಿವಿಧ ಮಾದರಿಯ ರಕ್ತ ಪರೀಕ್ಷೆ ಮಾಡಿಸಿಕೊಂಡರು. ಈ ವೇಳೆ ತಹಸೀಲ್ದಾರ್ ಟಿ. ರಮೇಶ್ ಬಾಬು, ಕಾರ್ಮಿಕ ಇಲಾಖೆ ಸಿಬ್ಬಂದಿ ಗಣೇಶ್ ಸೇ-ರಿದಂತೆ ಹಲವು ಕಾರ್ಮಿಕ ಸಂಘಟನೆಗಳು, ಫಲಾನುಭವಿಗಳು ಹಾಜರಿದ್ದರು.

**ವರದಿ ಗುಂಡ್ಲುಪೇಟೆ ಕುಮಾರ್**

# ಗುಂಡ್ಲುಪೇಟೆಯಲ್ಲಿ ಅದ್ದೂರಿ ಭೀಮೋತ್ಸವ ಆಚರಣೆ



**ಚಾಮರಾಜನಗರ/ ಗುಂಡ್ಲುಪೇಟೆ:** ಪಟ್ಟಣದಲ್ಲಿ ಅಂಬೇಡ್ಕರ್ ಆಚರಣಾ ಸಮಿತಿ ಹಮ್ಮಿಕೊಂಡಿದ್ದ ಭೀಮೋತ್ಸವ-2025 ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ಡಿ. ದೇವರಾಜು ಅರಸು ಕ್ರೀಡಾಂಗಣದಲ್ಲಿ ಅಲಂಕೃತ ಬೆಳ್ಳಿ ರಥದಲ್ಲಿ ಬಾಬಾ ಸಾಹೇಬ ಅಂಬೇಡ್ಕರ್ ಪ್ರತಿಮೆಗೆ ಟಿ. ನರಸೀಪುರದ ನಳಂದ ಬುದ್ದ ವಿಹಾರದ ಭೋದಿರತ್ನ ಬಂತೇಜಿ ಮತ್ತು ಮಾಜಿ ಶಾಸಕ ಸಿ. ಎಸ್. ನಿರಂಜನ್ ಕುಮಾರ್ ಪುಷ್ಪಾರ್ಚನೆ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಭೋದಿರತ್ನ ಬಂತೇಜಿ ಮಾತನಾಡಿ, ಬಾಬಾ ಸಾಹೇಬ ಅಂಬೇಡ್ಕರ್ ಆಚರಣೆಗಿಂತ ಅವರ ಅನುಸರಣೆ ಮುಖ್ಯ, ಮಕ್ಕಳಿಗೆ ಆಸ್ತಿ ಮಾಡದೆ ಅವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ಕೊಡುವಂತೆ ಹೇಳಿದರು, ಸಮ ಸಮಾಜ ಕಟ್ಟಲು ಶಿಕ್ಷಣದಿಂದ ಮಾತ್ರ ಸಾಧ್ಯ, ತಾವು ಉಪವಾಸ ಇದ್ದರೂ ಸಹ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಮೂಲಕ ಶೈಕ್ಷಣಿಕವಾಗಿ ಮುಂದೆ ಬರುವಂತೆ ಸಲಹೆ ನೀಡಿದರು.

ಮಾಜಿ ಶಾಸಕ ಸಿ. ಎಸ್. ನಿರಂಜನಕುಮಾರ್ ಮಾತನಾಡಿ, ಭಾರತಕ್ಕೆ ವಿಶ್ವ ಶ್ರೇಷ್ಠ ಸಂವಿಧಾನವನ್ನು ನೀಡಿದ ಅಂಬೇಡ್ಕರ್ ಅವರನ್ನು ಒಂದು ವರ್ಗಕ್ಕೆ ಸೀಮಿತ ಮಾಡದೆ ಎಲ್ಲಾ ವರ್ಗದವರು ಅವರನ್ನು ಸ್ಮರಣೆ ಮಾಡಿಕೊಳ್ಳಬೇಕು, ತಾನು ಸುಟ್ಟ ಇತರಿರಿಗೆ ಬೆಳಕಾದ ಬಾಬಾ ಅಂಬೇಡ್ಕರ್ ಸಾಹೇಬ ಮಹನೀಯರ ಜಯಂತಿಯನ್ನು ತಾಲ್ಲೂಕಿನಲ್ಲಿ ಬಹಳ ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಿರುವುದು ಸಂತೋಷವಾಗಿದೆ ಎಂದರು.

ಕೇರಳ ಚಂಡಾ, ಕಂಸಾಳೆ, ಡೊಳ್ಳು ಕುಣಿತ, ಗಾರುಡಿ ಗೊಂಬೆ ಕುಣಿತ, ಡಿಜೆ ,ಮಂಗಳ ವಾದ್ಯ, ತಮಟೆ ಹಾಗೂ ಆನೆಯ ಪ್ರತಿಕೃತಿಯ ಮೇಲೆ ಅಂಬೇಡ್ಕರ್ ಭಾವಚಿತ್ರ ಸೇರಿದಂತೆ ವಿವಿಧ ಕಲಾತಂಡಗಳು ಭೀಮೋತ್ಸವ ಕಾರ್ಯಕ್ರಮದಲ್ಲಿ ಮೆರಗು ತಂದಿತು. ಕಾರ್ಯಕ್ರಮದಲ್ಲಿ ಕಾಡಾ ಮಾಜಿ ಅಧ್ಯಕ್ಷ ಹೆಚ್. ಎಸ್. ನಂಜಪ್ಪ, ನವೀನ್ ಮೌರ್ಯ ವಕೀಲ ಉಮೇಶ್, ಮುಖಂಡರಾದ ಧೀರಜ್ ಪ್ರಸಾದ್, ಪುರಸಭೆ ಸದಸ್ಯ ಅಣ್ಣಯ್ಯಸ್ವಾಮಿ, ಎನ್.ಕುಮಾರ್, ಸುಭಾಷ್ ಮಾಡ್ರಹಳ್ಳ, ಮಾಜಿ ತಾ. ಪಂ. ಅಧ್ಯಕ್ಷ ಹೊರೆಯಾಲ ಕೃಷ್ಣ, ಗಿರೀಶ್ ಲಕ್ಕೂರು, ಕಮರಹಳ್ಳಿ ರವಿ, ಹೊರೆಯಾಲ ಶಿವಸ್ವಾಮಿ, ಸಂಪತ್ತು, ವಿಷಕಂಠಮೂರ್ತಿ, ಅಗತಗೌಡನಹಳ್ಳಿ ಬಸವರಾಜು, ಪಾಳ್ಯ ಶ್ರೀನಿವಾಸ್, ಮೋಹನ್ ದಾಸ್, ಮಲ್ಲಿಕ್, ವಕೀಲರ ಸಂಘದ ಅಧ್ಯಕ್ಷ ಟಿ. ಎಸ್. ವೆಂಕಟೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ವರದಿ ಗುಂಡ್ಲುಪೇಟೆ ಕುಮಾರ್**

# ಗೋಲಗೇರಿಯಲ್ಲಿ ಶಾಸಕರಿಂದ ವಿವಿಧ ಕಾಮಗಾರಿಗಳಿಗೆ ಚಾಲನೆ


ವಿಜಯಪುರ ಜಿಲ್ಲೆ ಸಿಂದಗಿ ತಾಲೂಕಿನ ಗೋಲಗೇರಿಯ ಎಸ್ ಸಿ ಕಾಲೋನಿಯಲ್ಲಿ ಸಿ ಸಿ ರಸ್ತೆ ನಿರ್ಮಾಣ ಹಾಗೂ ಶ್ರೀ ಚೌಡೇಶ್ವರಿ ದೇವಸ್ಥಾನ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಅಶೋಕ್ ಮನಗೂಳಿ ಚಾಲನೆ ನೀಡಿದರು.

ತಾಲೂಕಿನ ಗೋಲಗೇರಿ ಗ್ರಾಮದಲ್ಲಿ ಕೆ ಆರ್ ಐ ಡಿ ಪಿ ಎಲ್ ಸಿಂದಗಿ 2024-25 ನೇ ಸಾಲಿನ ಪ್ರಗತಿ ಕಾಲೋನಿ ಯೋಜನೆಯಡಿಯಲ್ಲಿ ಗ್ರಾಮದ ಎಸ್ ಸಿ ಕಾಲೋನಿಯಲ್ಲಿ ಮಂಜೂರಾದ 50 ಲಕ್ಷ ರೂ. ಮೊತ್ತದ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿ ಹಾಗೂ ಅದೇ ಗ್ರಾಮದಲ್ಲಿ 2023-24 ನೇ ಸಾಲಿನ ಮುಖ್ಯಮಂತ್ರಿ ವಿಶೇಷ ಅನುದಾನದಡಿಯಲ್ಲಿ ಶ್ರೀ ಚೌಡೇಶ್ವರಿ ದೇವಸ್ಥಾನ ಹತ್ತಿರ ಮಂಜೂರಾದ 10 ಲಕ್ಷ ರೂ. ಮೊತ್ತದ ಸಮುದಾಯ ಭವನ ನಿರ್ಮಾಣ ಕಾಮಗಾ-ರಿಗೆ ಭೂಮಿ ಪೂಜೆ ಮಾಡುವ ಮೂಲಕ ಚಾಲನೆ ನೀಡಿದ ಶಾಸಕ ಅಶೋಕ ಮನಗೂಳಿ ಅವರು ಮಾತನಾಡಿ ಈ ಗ್ರಾಮದ ಜನರು ನಮ್ಮ ಮನೆತನದ ಮೇಲೆ ಇಟ್ಟಿರುವ ಪ್ರೀತಿ ಭರವಸೆ ನಂಬಿಕೆಗೆ ನಾನು ಸದಾ ಚಿರಋಣಿ ಇರುತ್ತೇನೆ, ಈ ಗ್ರಾಮದ ಜನ ಸಾರ್ವತ್ರಿಕ ಚುನಾವಣೆಯಲ್ಲಿ ನನಗೆ ಅತೀ ಹೆಚ್ಚಿನ ಮತಗಳನ್ನು ಕೊಡುವುದರ ಮೂಲಕ ನನಗೆ ಆಯ್ಕೆ ಮಾಡಿದ್ದಾರೆ ಗ್ರಾಮಕ್ಕೆ ಹೆಚ್ಚಿನ ಅನುದಾನ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದರು




ಈ ಸಂದರ್ಭದಲ್ಲಿ ಎಪಿಎಂಸಿ ಉಪಾಧ್ಯಕ್ಷ ಬಸವರಾಜ್ ಮಾರಲಬಾವಿ, ಮಾಜಿ ಜಿ. ಪಂ ಉಪಾಧ್ಯಕ್ಷ ಮಲ್ಲಣ್ಣ ಸಾಲಿ, ರವಿರಾಜ್ ದೇವರಮನಿ, ಪಿಎಲ್‌ಡಿ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶಿವ ಹತ್ತಿ, ಅಬೂಬಕರ್ ಶಾಬಾದಿ, ಮೈಬೂಬ ದೊಡ್ಡಮನಿ, ಕುಮಾರ್ ಗೊಂದಳಿ, ಪುಂಡಲೀಕ್ ರಾಠೋಡ, ಕೆ ಆರ್ ಐ ಡಿ ಪಿ ಎಲ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರಾಜಶೇಖರ್ ಪುಂಡಲಿಂಗ್, ಹೂಗಾರ್ ಹಿರಿಯ ಮುಖಂಡರು, ಗ್ರಾಮ ಪಂಚಾಯತ್ ಸದಸ್ಯರು, ಸೇರಿದಂತೆ ಗ್ರಾಮಸ್ಥರು, ಕಾರ್ಯಕರ್ತರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

**ವರದಿ : ಕೆ ಪಿ ಮೇಲಿನಮನಿ**




**ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಾ ತಹಶೀಲ್ದಾರ್ ಕಚೇರಿಯ ಶಿರಸ್ತೇದಾರರಾದ ಶ್ರೀ ರಾಘವೇಂದ್ರ ಸ. ಪೂಜೇರಿ ಅವರೊಂದಿಗೆ ಕರುನಾಡ ಕಂದ.**



**ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬುಡರಕಟ್ಟಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ದುಂ. ಕುಂಟೋಜಿ ಅವರೊಂದಿಗೆ ಕರುನಾಡ ಕಂದ.**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01–06–2025 ಪುಟಗಳು:16

# ಬಡಿಗೇರ ಜಿಲಾನಸಾಬ್‌ರವರಿಗೆ ರಾಜ್ಯಮಟ್ಟದ 'ಕರ್ನಾಟಕ ಕವಿಭೂಷಣ' ಪ್ರಶಸ್ತಿ






**ಬಳ್ಳಾರಿ / ಕಂಪ್ಲಿ :** ಚುಟುಕು ಸಾಹಿತ್ಯ ಪರಿಷತ್ ಕೊಪ್ಪಳ ವತಿಯಿಂದ ರಾಜ್ಯಮಟ್ಟದ ಆರತಕ್ಷತೆ ಕವಿಗೋಷ್ಠಿಯಲ್ಲಿ ಪಟ್ಟಣದ ಶಿಕ್ಷಕ, ಸಾಹಿತಿ, ಪತ್ರಕರ್ತ ಬಡಿಗೇರ್ ಜಿಲಾನಸಾಬ್ ಅವರಿಗೆ ರಾಜ್ಯಮಟ್ಟದ 'ಕರ್ನಾಟಕ ಕವಿಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ದಿ.25–5–2025 ಭಾನುವಾರ ದಂದು ಕೊಪ್ಪಳ ನಗರದ ಶ್ರೀ ಮಹಾಂತಯ್ಯನ ಮಠ ಕಲ್ಯಾಣ ಮಂಟಪದಲ್ಲಿ ಕಿಶನ್ ಸುರ್ವೆ ಹಾಗೂ ತೇಜಸ್ವಿ ರವರ ಮದುವೆ ನಿಮಿತ್ಯ ಜರುಗಿದ ಕವಿಗೋಷ್ಠಿಯಲ್ಲಿ "ವೀರ ಯೋಧರ ನಿಮಗೊಂದು ನನ್ನ ಸಲಾಂ" ಎಂಬ ಶೀರ್ಷಿಕೆಯ ಕವನ ವಾಚನ ವಾಚಿಸಿದಕ್ಕಾಗಿ ರಾಜ್ಯಮಟ್ಟದ 'ಕರ್ನಾಟಕ ಕವಿಭೂಷಣ' ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳದ ಸರ್ಕಾರಿ ಪ್ರಥ–'ಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಭಾಗ್ಯ ಜ್ಯೋತಿ, ಬೆಂಗಳೂರಿನ ಹಿರಿಯ ಪತ್ರಕರ್ತರಾದ ರಮೇಶ ಸುರ್ವೆ, ಗದಗ ಹಿರಿಯ ಸಾಹಿತಿಗಳಾದ ಡಾ. ರಾಜೇಂದ್ರ ಗಡಾದ, ಸಿರಿ ಕನ್ನಡ ರಾಜ್ಯಾಧ್ಯಕ್ಷರಾದ ಜಿ. ಎಸ್. ಗೋನಾಳ, ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ರುದ್ರಪ್ಪ ಭಂಡಾರಿ, ಕನ್ನಡ ಚಲನಚಿತ್ರದ ನಾಯಕಿ ಮೀನಾ ಕುಮಾರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

**ಪ್ರಶಸ್ತಿ ಪಡೆದ ಕವನ**
**ವೀರಯೋಧರೆ ನಿಮಗೊಂದು ನನ್ನ ಸಲಾಂ**

ದೇಶದೊಳಗಡೆ ದೀಪಾವಳಿ
ಬೆಳಕಿನ ಹಬ್ಬದ ಸಂತೋಷ ಬಾಳಲಿ
ಹೊಸ ಬಟ್ಟೆ ಸಿಹಿ ತಿನಿಸುಗಳಲ್ಲಿ ,
ಗಡಿಯಲ್ಲಿ ಕಾಯುವ ದೀಪವಿಲ್ಲದ
ಸಿಹಿ ಇಲ್ಲದ ಹೊಸ ಬಟ್ಟೆ ಇಲ್ಲದ ಕಷ್ಟದಲ್ಲೂ ನಗುನಗುತ್ತಾ
ಭಾರತಾಂಬೆಗೆ ದೀಪ ಬೆಳಗುವ ವೀರಯೋಧರೆ ನಿಮಗೊಂದು
ನನ್ನ ಸಲಾಂ

ನಮ್ಮ ನೆಮ್ಮದಿಯ ನಿದ್ದೆಗಾಗಿ
ನಿಮ್ಮ ಜೀವನ ಜೀವ ಮುಡುಪಾಗಿಟ್ಟು ನಮಗಾಗಿ
ನಮ್ಮ ಖುಷಿ ಸಂತೋಷಕ್ಕೆ ಕಾರಣವಾಗಿ
ನಮ್ಮ ಆಯುಷ್ಯದ ರೂವಾರಿಗಳಾಗಿ
ವೀರ ಯೋಧರೆ
ನಿಮಗೆ ನಿಮ್ಮ ಕುಟುಂಬಕ್ಕೊಂದು
ನನ್ನ ಸಲಾಂ

ಪಾಕಿಸ್ತಾನದ ಸ್ವಾರ್ಥಿಗಳು ಭಾರತಾಂಬೆಯ
ಒಡಲಿಗೆ ಕಿಚ್ಚಚ್ಚಿದರು
ನಿಮ್ಮ ಸರ್ವಸ್ವವನ್ನು ತ್ಯಾಗ ಮಾಡಿ
ನಿಸ್ವಾರ್ಥ ಸೇವೆಯನ್ನು ನೀಡಿ
ಆ ಒಡಲಿಗೆ ಹಾಲೆರೆದು
ಶಾಂತಿಗೊಳಿಸುವ
ವೀರ ಯೋಧರೇ ನಿಮಗೊಂದು ನನ್ನ ಸಲಾಂ

ದೇಶಕ್ಕಾಗಿ ಪ್ರಾಣತೆತ್ತು
ಹಗಲಿರುಳು ನಿದ್ದೆ ಬಿಟ್ಟು
ಶತ್ರುಗಳ ಹಾವಳಿಯನ್ನು ಹತ್ತಿಟ್ಟು
ನಿಮ್ಮ ಪ್ರಾಣವನ್ನು ಒತ್ತೆ ಇಟ್ಟು
ಮಡಿದ ವೀರ ಯೋಧರೆ ನಿಮ್ಮ ತ್ಯಾಗ ಬಲಿದಾನಕ್ಕೆ
ನಿಮಗೊಂದು ನನ್ನ ಸಲಾಂ

ಪ್ರವಾಸಿಗರ ಸ್ವರ್ಗ ತಾಣ ಪೆಹೆಲ್ಗಾಂ
ಹಿಮಗಿರಿಯ ಮಲ್ಲಿಗೆ ಶೃಂಗಾರ ಮುಕುಟಂ
ಅ ಸೌಂದರ್ಯವೇ ಮುಳುವಾಗಿದೆ ಈ ನೆಲಕ್ಕೆ
ಮುತ್ತೈದೆಯರ ಸಿಂಧೂರ
ಅಳಿಸಿ ಹಾಕಿದರು ಉಗ್ರಗಾಮಿಗಳು
ಸಿಂಧೂರ ಆಪರೇಷನ್ ಹೆಸರಿನಲ್ಲಿ
ಉಗ್ರಗಾಮಿಗಳ ನೆಲೆಯನ್ನೇ ಧ್ವಂಸಗೊಳಿಸಿದ ವೀರಯೋಧರೆ
ನಿಮಗೊಂದು ನನ್ನ ಸಲಾಂ

ಹಿಂದೆ ಕಾರ್ಗಿಲ್ ದಲ್ಲಿ ಸೋತು ಪೆಟ್ಟು ತಿಂದು
ಓಡಿದರು ಹೇಡಿಗಳು
ಆದರೂ ಬುದ್ಧಿ ಬಾರದ ಪಾಪಿಗಳು
ಅದಕ್ಕೆ ತಕ್ಕ ಉತ್ತರ ಕೊಟ್ಟ ಭಾರತದ ವೀರ ಯೋಧರು
ನಿಮಗೊಂದು ನನ್ನ ಸಲಾಂ

ಭಾರತದ ರಕ್ಷಣೆಗೆ ರಾಮ ಲಕ್ಷ್ಮಣರಿವರು
ನುಡಿದಂತೆ ನಡೆಯುವ ಭೀಮಾರ್ಜುನರು
ನೊಂದ ಭಾರತೀಯರ ಆಶಾಕಿರಣರು
ವೀರ ಯೋಧರೇ
ನಿಮಗೊಂದು ನನ್ನ ಸಲಾಂ

ಭಾರತದ ಮೇಲೆ ಮತ್ತೆ ಮತ್ತೆ ಮಾಡಬೇಡಿ ದಾಳಿ ಏಕೆಂದರೆ
ಭಾರತದ ಸೈನಿಕರೇ ಚಂಡಮಾರುತ ಬಿರುಗಾಳಿ
ಬೀಸಿದರೆ ಉಳಿಯಲ್ಲ ವಿಶ್ವ ಭೂಪಟದಲ್ಲಿ ನಿಮ್ಮ ಹಾವಳಿ
ಭಾರತ ಸೈನಿಕರು ಎಡೆಮುರಿ ಕಟ್ಟಿ ಬಿಸಾಡುವುರಿಲಿ
ವೀರಯೋಧರೆ ನಿಮಗೊಂದು ನನ್ನ ಸಲಾಂ

ವಂದೇ ಮಾತರಂ ಮಂತ್ರ ಪಟಿಸುತ್ತಾ
ಎದೆ ಉಬ್ಬಿಸಿ ಗಡಿಯಲ್ಲಿ ಸಿಂಹದಂತೆ ಘರ್ಜಿಸುತ್ತಾ
ಭಾರತ್ ಮಾತಾ ಕಿ ಜೈ ಎನ್ನುತ್ತಾ ಸಂಭ್ರಮದಿ ಹೇಳೋಣ
ವೀರ ಯೋಧರೇ ನಿಮಗೊಂದು ನನ್ನ ಸಲಾಂ

**– ಕರುನಾಡ ಕಂದ**

# ಲೋಕಾರ್ಪಣೆಗೊಂಡ ಇಂದಿರಾ ಕ್ಯಾಂಟಿನ್ : ಬಡ ಮತ್ತು ಕೂಲಿ ಕಾರ್ಮಿಕರಿಗೆ ವರ : ಶಾಸಕ ಜೆ.ಎನ್.ಗಣೇಶ

**ಬಳ್ಳಾರಿ / ಕಂಪ್ಲಿ :** ಇಂದಿನ ದುಬಾರಿ ದಿನಮಾನದಲ್ಲಿಯೂ ಕಡಿಮೆ ದರದಲ್ಲಿ ಆಹಾರ ವಿತರಿಸುವ ಇಂದಿರಾ ಕ್ಯಾಂಟೀನ್ ಬಡವರಿಗೆ ವರವಾಗಿದೆ ಎಂದು ಶಾಸಕ ಜೆ. ಎನ್. ಗಣೇಶ ಹೇಳಿದರು.

ಸ್ಥಳೀಯ ಹಳೇ ಬಸ್ ನಿಲ್ದಾಣ ಬಳಿಯಲ್ಲಿ ನಿರ್ಮಿಸಲಾದ ಇಂದಿರಾ ಕ್ಯಾಂಟೀನ್ ಲೋಕಾರ್ಪಣೆಗೊಳಿಸಿದ ನಂತರ ಮಾತನಾಡಿ, ಕಾಂಗ್ರೆಸ್ ಸರ್ಕಾರ ಬಡವರ ಪರವಾಗಿ ನಿಂತಿದೆ. ಕಂಪ್ಲಿ ಹೃದಯ ಭಾಗದಲ್ಲಿ ಜನರಿಗೆ ಅನುಕೂಲವಾಗುವ ಸ್ಥಳದಲ್ಲಿ ಇಂದಿರಾ ಕ್ಯಾಂಟಿನ್ ಪ್ರಾರಂಭಿಸಲಾಗಿದೆ, ಕಂಪ್ಲಿ ತಾಲೂಕು ಕೇಂದ್ರವಾಗಿದ್ದು, ಸಾಕಷ್ಟು




ವಹಿವಾಟುಗಳು ಹಾಗೂ ನಗರಕ್ಕೆ ಗ್ರಾಮೀಣ ಭಾಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಮತ್ತು ಇಲ್ಲಿ ಬಡವರು ಮತ್ತು ಕೂಲಿಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ವಾಸಿಸುತ್ತಿದ್ದಾರೆ. ಈ ಭಾಗದ ಜನರ ಬಹಳ ದಿನಗಳ ಬೇಡಿಕೆಯಂತೆ ಇಂದಿರಾ ಕ್ಯಾಂಟೀನ್ ಆರಂಭಿಸಲಾಗಿದೆ. ಇಂದಿರಾ ಕ್ಯಾಂಟೀನ್‌ನಲ್ಲಿಟಿಫಿನ್‌ಗೆ 5 ರೂ. ಊಟಕ್ಕೆ 10 ರೂಪಾಯಿ ನಿಗದಿ ಮಾಡಿದ್ದು, ಇದು ಬಡವ–ರಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದರು. ತದ ನಂತರ ಶಾಸಕ ಗಣೇಶ ಇವರು ಉಪ್ಪಿಟ್ಟು, ಕೇಸರಿಬಾತ್ ಉಪಹಾರದ ರುಚಿ ಸವಿಯುವ ಜತೆಗೆ ಜನರಿಗೆ ಉಪಹಾರ ಬಡಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಮಂಜುನಾಥ ನಾಯಕ, ಪುರಸಭೆ ಅಧ್ಯಕ್ಷ ಭಟ್ಟ ಪ್ರಸಾದ್, ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಉಸ್ಮಾನ್, ಉಪಾಧ್ಯಕ್ಷೆ ಸುಶೀಲಮ್ಮ, ಸದಸ್ಯರಾದ ಸಿ.ಆರ್. ಹನುಮಂತ, ವೀರಾಂಜಿನೀಯಲು, ಮೌಲಾ, ಲೊಡ್ಡು ಹೊನ್ನೂರವಲಿ ಸೇರಿದಂತೆ ಸದಸ್ಯರು, ಮುಖಂಡರು, ಕಾರ್ಯಕರ್ತರು ಹಾಗೂ ಪುರಸಭೆ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

**ವರದಿ : ಜಿಲಾನಸಾಬ್ ಬಡಿಗೇರ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01-06-2025 ಪುಟಗಳು:16

# ನೈತಿಕ ಶಿಕ್ಷಣದಲ್ಲಿ ನಿಮ್ಮ ಮಗುವಿಗೆಷ್ಟು ಗ್ರೇಡ್?

**"ನನ್ನ ಮಗ ಈ ಸಾರಿ ಎಕ್ಸಾಮ್ ನಲ್ಲಿ 98 ಮಾತ್ರ ಅಂಕ ಗಳಿಸಿದ್ದಾನೆ. ಬರೀ ಊರೂರು ಅಂತ ಸುತ್ತಾಡಿ ಓದಿನ ಕಡೆ ಗಮನ ಕಡಿಮೆಯಾಗಿ ನೂರು ಪರ್ಸೆಂಟ್ ಬರೋದು ತಪ್ಪಿತು"**

ಒಂದನೇ ತರಗತಿ ಓದುತ್ತಿದ್ದ ಪುಟಾಣಿ ಬಾಲಕನೊಬ್ಬನ ತಾಯಿ ತನ್ನ ಪಕ್ಕದ ಮನೆಯ ಗೃಹಣಿಯೊಬ್ಬರಿಗೆ ಈ ಮಾತನ್ನು ಹೇಳುತ್ತಾಳೆ. ಮಗು ಊರೂರು ಅಲೆದಾಡಿದ್ದರಿಂದ ನೂರು ಪರ್ಸೆಂಟ್ ಅಂಕ ಬರೋದು ತಪ್ಪಿತ್ತು, 100% ಬಂದರೆ ಮಾತ್ರ ನಮ್ಮ ಮಗು ಪರಿಪೂರ್ಣ ಜಾಣ ಎಂಬ ಭ್ರಮೆ ಆಕೆಯಲ್ಲಿದೆ.

ಇದು ಕೇವಲ ಈ ಮಹಿಳೆಯೊಬ್ಬಳ ಸಮಸ್ಯೆ ಮಾತ್ರವಲ್ಲ; 'ಶಿಕ್ಷಣ' ಎಂಬ ಪರಿಕಲ್ಪನೆಯನ್ನು ತಪ್ಪಾಗಿ ಅರ್ಥೈಸಿಕೊಂಡು ಕೇವಲ ಓದು, ಬರಹ, ಅಂಕ ಮಾತ್ರವೇ ಶಿಕ್ಷಣ ಎಂಬ ಭ್ರಮೆಯಿಂದ ಮಕ್ಕಳ ಮೇಲೆ ಅಂಕಗಳ ಚೀಲ ಹೊರಿಸುತ್ತಿರುವ ಎಲ್ಲ ಪಾಲಕರದ್ದೂ ಇದೇ ಸಮಸ್ಯೆ.

ಮಗು ಊರೂರು ಅಲೆದಾಡುವುದು, ನೆಂಟರ ಮನೆಗೆ ಹೋಗುವುದು, ತೋಟ ಸುತ್ತಾಡುವುದು, ಗೆಳೆಯರ ಕೂಟದೊಂದಿಗೆ ಹರಟುವುದು... ಇವೆಲ್ಲವೂ ಅಂಕಗಳು ಕಡಿಮೆಯಾಗಲು ಕಾರಣ ಇರಬಹುದು ನಿಜ; ಆದರೆ ಅಂಕಗಳ ಮೊತ್ತ ಕಡಿಮೆಯಾಗುವುದೆಂದರೆ ಅದು ಕಲಿಕೆಯಲ್ಲಾದ ಹಿನ್ನಡೆ ಎಂದು ಅರ್ಥೈಸಿಕೊಳ್ಳುವುದು ಮಾತ್ರ ದೊಡ್ಡ ತಪ್ಪು. ಮಗು ನಾಲ್ಕು ಗೋಡೆಗಳ ನಡುವೆ ಕುಳಿತು ಪುಸ್ತಕದ ಹುಳು ಆದರೆ 100 ಪರ್ಸೆಂಟ್ ಅಂಕ ಪಡೆಯುವುದು ದೊಡ್ಡ ಮಾತೇನಲ್ಲ. ತರಗತಿ ಕೋಣೆಯಾಚೆ ಹೊರಗಿನ ಪ್ರಪಂಚವನ್ನು ವಾಸ್ತವವಾಗಿ ಅರ್ಥ ಮಾಡಿಕೊಳ್ಳುವುದು ಕೂಡ ಕಲಿಕೆಯ ಒಂದು ಭಾಗವೇ ಆಗಿದೆ. ಗೆಳೆಯರ ಕೂಟ ಮಗುವಿನ ಮಾನಸಿಕ ವಿಕಾಸದ ಮೂಲ. ಸಂವಹನ ಕೌಶಲ್ಯ ವೃದ್ಧಿಯಾಗುವುದು ಇಲ್ಲೇ. ನೆಂಟರ ಮನೆಗೆ ಆಗಾಗ ಭೇಟಿ ನೀಡುವುದರಿಂದ ಮಗುವಿನಲ್ಲಿ ಹೊಸ ಅನುಭವಗಳಾಗುತ್ತವೆ. ಇದು ಕೂಡ ಒಂದು ಕಲಿಕೆಯೇ.

ಓದು ಬರಹದಲ್ಲಿ ಮಗು ಎಷ್ಟು ಅಂಕ ಪಡೆದಿದೆ ಎಂಬ ಆಧಾರದ ಮೇಲೆ ಮಗುವಿನ ಕಲಿಕೆಯನ್ನು ನಿರ್ಧರಿಸುವ ಪೋಷಕರು, ತಮ್ಮ ಮಗು ನೈತಿಕವಾಗಿ ಎಷ್ಟು ಅಂಕ ಪಡೆಯಲು ಅರ್ಹ ಎಂಬುದನ್ನು ಅಂದಾಜಿಸಬೇಕಲ್ಲವೇ? ನೈತಿಕ ಶಿಕ್ಷಣ ಎನ್ನುವುದು ಪಠ್ಯ ರೂಪಿಸಿ ಅಂಕಗಳಿಗೆ ಸಮೀಕರಿಸಿ ನಿರ್ಧರಿಸುವುದಿಲ್ಲ.



ದೈನಂದಿನ ಚಟುವಟಿಕೆಗಳಲ್ಲಿ ಅನೌಪಚಾರಿಕವಾಗಿ ಮಕ್ಕಳ ವರ್ತನೆಯಲ್ಲಿ ನೈತಿಕ ಮೌಲ್ಯಗಳನ್ನು ತೂರಬೇಕು. ಇದು ಕೇವಲ ಶಿಕ್ಷಕರ ಕೆಲಸ ಮಾತ್ರವಲ್ಲ, ಪಾಲಕರ ಜವಾಬ್ದಾರಿಯೂ ಅಧಿಕವಾಗಿರುತ್ತದೆ. ಹಾಗಾದರೆ ಮಗು ನೈತಿಕವಾಗಿ ಗುಣಮಟ್ಟದ ಕಲಿಕೆಯನ್ನು ಹೊಂದಿದೆ ಅಥವಾ ಹೊಂದುತ್ತಿದೆ ಎಂಬುದನ್ನು ಅಳೆಯುವ ಮಾನದಂಡಗಳೇನು? ಮಗುವಿನ ನೈತಿಕ ಕಲಿಕೆಯನ್ನು ಪಠ್ಯ ಬೋಧಿಸಿ ಔಪಚಾರಿಕವಾಗಿ ಮಾತ್ರ ರೂಪಿಸಲು ಹೇಗೆ ಸಾಧ್ಯವಿಲ್ಲವೋ ಮಗುವಿನ ನೈತಿಕ ಕಲಿಕೆಯನ್ನು ಪರೀಕ್ಷಿಸಲು ಪ್ರಶ್ನೆ ಪತ್ರಿಕೆ ರೂಪಿಸಿ ಉತ್ತರ ಬರೆಸಿ ಅಂಕ ನೀಡಿ ಅಳೆಯಲು ಸಾಧ್ಯವಿಲ್ಲ. ಅನೌಪಚಾರಿಕ ಕಲಿಕಾ ಪ್ರಕ್ರಿಯೆಯನ್ನು ಅನೌಪಚಾರಿಕವಾಗಿಯೇ ಪರೀಕ್ಷಿಸಬೇಕು. ಮಗುವಿನ ನೈತಿಕ ಗುಣಮಟ್ಟ ಅಳೆಯಲು ಮಕ್ಕಳನ್ನು ಪ್ರಶ್ನಿಸುವ ಬದಲು ಪೋಷಕರು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವುದು ಸೂಕ್ತ.

ನಮ್ಮ ಮಗು ನಮ್ಮೊಂದಿಗೆ ಗೌರವಯುತವಾಗಿ ಮಾತನಾಡುತ್ತಿದೆಯೇ? ಮಗು ಶಾಲೆಯಿಂದ ಅಥವಾ ಹೊರಗಿನಿಂದ ಯಾವುದಾದರೂ ವಸ್ತುಗಳನ್ನು ಮನೆಗೆ ತಂದಾಗ ಇದು ಯಾರದ್ದು, ಹೇಗೆ ಬಂತು ಎಂದು ನಾವು ವಿಚಾರಿಸುತ್ತಿದ್ದೇವೆಯೇ? ಮಗುವಿಗೆ ಏನಾದರೂ ವಸ್ತು ಕೊಳ್ಳಲು ಹಣ ನೀಡಿದಾಗ ಉಳಿದ ಚಿಲ್ಲರೆ ಹಣವನ್ನು ಮಗು ಪೋಷಕರಿಗೆ ಒಪ್ಪಿಸುತ್ತಿದೆಯೇ? ಮಗು ನೆರೆಹೊರೆಯವರೊಡನೆ, ಬಂಧುಗಳೊಡನೆ ಸಂಯಮ, ಗೌರವದಿಂದ ಮಾತನಾಡುತ್ತಿದೆಯೇ? ಮಗುವಿನಲ್ಲಿ ತಮ್ಮ ಶಿಕ್ಷಕರ ಬಗ್ಗೆ ನೈಜ ಗೌರವ ಭಾವನೆ ಇದೆಯೇ? ತನ್ನನ್ನು ಓದಿಸಲು, ಬೆಳೆಸಲು ಪೋಷಕರು ಪಡುವ ಕಷ್ಟಗಳ ಬಗೆಗೆ ಮಗುವಿಗೆ ಅರಿವಿದೆಯೇ? ಪೋಷಕರಾದ ನಾವು ನಮ್ಮ ಮಕ್ಕಳಿಗೆ ಆಗಾಗ ನೀತಿ ಕಥೆಗಳನ್ನು ಹೇಳುತ್ತಿದ್ದೇವೆಯೇ? ಇಂತಹ ಕೆಲವು ಸ್ವಯಂ ಆತ್ಮಾವಲೋಕನ ಪ್ರಶ್ನೆಗಳನ್ನು ಕೇಳಿಕೊಳ್ಳುವ ಮೂಲಕ ಪೋಷಕರು ತಮ್ಮ ಮಗುವಿನ ನಿಜವಾದ ಗ್ರೇಡ್ ಅಳೆಯಬಹುದು. ಇಂತಹ ಪ್ರಶ್ನೆಗಳಿಗೆ ಹೌದು ಎಂಬ ಉತ್ತರಗಳು ಹೆಚ್ಚಿದ್ದು, ಇಲ್ಲ ಎಂಬ ಉತ್ತರಗಳು ಕಡಿಮೆಯಾಗಿದ್ದಷ್ಟು ನಿಮ್ಮ ಮಗುವಿನ ಗ್ರೇಡ್ ಹೆಚ್ಚು ತೃಪ್ತಿಕರವಾಗಿದೆ ಎಂದು ಅರ್ಥೈಸಿಕೊಳ್ಳಬಹುದು.

ಅಂಕಪಟ್ಟಿಯಲ್ಲಿ ನೂರು ಅಂಕ ಪಡೆದ ಮಗುವನ್ನು ಮಾತನಾಡಿಸಿದಾಗ ಎದುರುಗಿನ ವ್ಯಕ್ತಿಗೆ ಆ ಮಗು ಗೌರವ ನೀಡದೆ ಹೋದರೆ ಆ ಮಗು ಉತ್ತಮ ವಿದ್ಯಾರ್ಥಿಯಾಗಲು ಹೇಗೆ ಸಾಧ್ಯ? ಅಪ್ಪನ ಜೇಬಿನಿಂದ ದುಡ್ಡನ್ನು ಕದ್ದು ತಿನಿಸುಗಳನ್ನು ಕೊಂಡು ಹಣ ಬಳಸುವ ವಿದ್ಯಾರ್ಥಿಯು ಉತ್ತಮ ವಿದ್ಯಾರ್ಥಿಯಾಗಲು ಹೇಗೆ ಸಾಧ್ಯ? ಪೋಷಕರಿಂದ ಒಂದೂ ನೈತಿಕ ಕಥೆಯನ್ನು ಕೇಳದವನು, ಭಾವನಾತ್ಮಕವಾಗಿ ಸಂವೇದನೆ ಇಲ್ಲದವನು ಉತ್ತಮ ವ್ಯಕ್ತಿಯಾಗಲು ಹೇಗೆ ಸಾಧ್ಯ? ಸಂವೇದನಾ ರಹಿತವಾದ ಮಗು ಕೇವಲ ತಮ್ಮ ಪೋಷಕರಿಗೆ ಅಷ್ಟೇ ಅಲ್ಲ, ಸಮಾಜಕ್ಕೂ ಕೂಡ ಉತ್ತಮ ವ್ಯಕ್ತಿಯಾಗಿ ಬದುಕಲಾರ.

ನೈತಿಕವಾಗಿ ಅದಃಪತಕ್ಕಿಳಿದಿರುವ ಮಕ್ಕಳು ಓದು ಬರಹದಲ್ಲಿ ನೂರು ಅಂಕ ಪಡೆದರೂ ಕೂಡ ಅದು ವ್ಯರ್ಥ. ಒಂದು ಕಾಗದದ ಮೇಲೆ ನಮೂದಿಸಿರುವ ಅಂಕಗಳ ಪ್ರಮಾಣವು ಮಗುವಿನ ಗುಣಮಟ್ಟದ ಮಾನದಂಡವಲ್ಲ ಎಂಬುದನ್ನು ಎಲ್ಲ ಪೋಷಕರು ಮೊದಲು ಅರಿತುಕೊಳ್ಳಬೇಕು. ಅಂಕಪಟ್ಟಿಯಾಚೆಗಿನ ಬದುಕು ನಿಜವಾದ ವಾಸ್ತವದ ಬದುಕು ಎಂಬ ಸತ್ಯವನ್ನು ಮಗುವಿಗೆ ಅರ್ಥ ಮಾಡಿಸುವುದರ ಜೊತೆಗೆ ಪೋಷಕರು ಅರಿತುಕೊಳ್ಳಬೇಕು. ಹೀಗಿದ್ದಾಗ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ.

ಪ್ರಸ್ತುತ ದಿನಗಳಲ್ಲಿ ಸಮಾಜದಲ್ಲಿ ನಡೆಯುತ್ತಿರುವ ಆಘಾತಕಾರಿ ಬೆಳವಣಿಗೆಗಳು ಆ ವ್ಯಕ್ತಿಯ ನೈತಿಕ ಹಿನ್ನೆಲೆಯಲ್ಲಾದ ಹಿನ್ನೆಡೆಯ ಸಂಕೇತಗಳು. ಸರ್ಕಾರವು ಕೂಡ ವ್ಯವಹಾರಿಕ ಶಿಕ್ಷಣ ಪದ್ಧತಿಯನ್ನು ನಿಲ್ಲಿಸಿ ನೈತಿಕ ತಳಹದಿಯ ಮೇಲೆ ಶಿಕ್ಷಣವನ್ನು ಕೊಡುವುದರ ಮೂಲಕ ಭವಿಷ್ಯದಲ್ಲಿ ಉತ್ತಮ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಬೇಕಿದೆ. ರವೀಂದ್ರನಾಥ ಟಾಗೋರ್, ಮಹಾತ್ಮ ಗಾಂಧೀಜಿ, ಸ್ವಾಮಿ ವಿವೇಕಾನಂದ ಅವರಂತಹ ಮಹಾನ್ ತತ್ವಜ್ಞಾನಿಗಳು ಶಿಕ್ಷಣಕ್ಕೆ ನೀಡಿರುವ ತಮ್ಮ ವೈಚಾರಿಕ ಕೊಡುಗೆಗಳನ್ನು ಪ್ರಸ್ತುತ ದಿನಗಳಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಅವರ ವಿಚಾರಗಳನ್ನು ತಳಹದಿಯನ್ನಾಗಿ ಮಾಡಿಕೊಳ್ಳಬೇಕಿದೆ.

**–ಸೋಮಲಿಂಗಪ್ಪ ಬೆಣ್ಣಿ**

# ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಬೆಂಬಲ ನೀಡಿದ ಕರ್ನಾಟಕ ಕಾವಲು ಪಡೆ

**ಚಾಮರಾಜನಗರ/ ಗುಂಡ್ಲುಪೇಟೆ :** ಕರ್ನಾಟಕ ಕಾವಲು ಪಡೆಯ ವತಿಯಿಂದ ದಿನಾಂಕ 29/05/2025 ರಂದು ಗುಂಡ್ಲುಪೇಟೆ ಪಟ್ಟಣದಲ್ಲಿ ಪುರಸಭೆಯ ಸಿಬ್ಬಂದಿ ವರ್ಗದವರು, ಪೌರ ಕಾರ್ಮಿಕರು ತಮ್ಮ ಹಲವಾರು ಬೇಡಿಕೆಗಳನ್ನು ಈಡೇರಿಸಬೇಕೆಂದು ಕಳೆದ ಮೂರು ದಿನಗಳಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ಹಮ್ಮಿಕೊಂಡಿದ್ದು ಇವರಿಗೆ ಕರ್ನಾಟಕ ಕಾವಲು ಪಡೆ ಸಂಘಟನೆ ವತಿಯಿಂದ ಬೆಂಬಲ ವ್ಯಕ್ತಪಡಿಸಲಾಯಿತು.

ಈ ಸಂದರ್ಭದಲ್ಲಿ ಕಾವಲು ಪಡೆಯ ತಾಲ್ಲೂಕು ಅಧ್ಯಕ್ಷರಾದ ಎ. ಅಬ್ದುಲ್ ಮಾಲಿಕ್ ಮಾತನಾಡಿ ಇವರ ಬೇಡಿಕೆಯನ್ನು ಸರ್ಕಾರ ಕೂಡಲೇ ಈಡೇರಿಸಬೇಕೆಂದು




ಸರ್ಕಾರಕ್ಕೆ ಒತ್ತಾಯಿಸಿದರು.

ಇದೇ ವೇಳೆ ಪುರಸಭೆಯ ಆರ್.ಓ.ಸವಿತಾ, ಪರಿಸರ ಅಭಿಯಂತರ ಮಹೇಶ್, ಜೆ.ಇ.ಮಂಜುನಾಥ್, ಪುಟ್ಟಸ್ವಾಮಿ, ತ್ರಿವೇಣಿ ಹಾಗೂ ಪುರಸಭೆಯ ಎಲ್ಲಾ ಪೌರಕಾರ್ಮಿಕರು ಹೊರಗುತ್ತಿಗೆ ನೌಕರರು, ಸಿಬ್ಬಂದಿ ವರ್ಗದವರು ನೀರಗಂಟಿಗಳು, ವಾಹನ ಚಾಲಕರು ಹಾಗೂ ಸಂಘಟನೆಯ ಜಿಲ್ಲಾ ಕಾರ್ಯಾಧ್ಯಕ್ಷರಾದ ಅಬ್ದುಲ್ ರಷೀದ್ ತಾಲ್ಲೂಕು ಗೌರವಾಧ್ಯಕ್ಷರಾದ ರಾಮೇಗೌಡ, ತಾಲ್ಲೂಕು ಕಾರ್ಯದರ್ಶಿಗಳಾದ ಎಸ್. ಮುಬಾರಕ್, ಟೌನ್ ಉಪಾಧ್ಯಕ್ಷರಾದ ಸಾದಿಕ್ ಪಾಷಾ, ಟೌನ್ ಸಂಚಾಲಕರಾದ ಮಿಮಿಕ್ರಿರಾಜು, ರಾಚಪ್ಪ ನಾಯಕ್ ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

**ವರದಿ ಗುಂಡ್ಲುಪೇಟೆ ಕುಮಾರ್**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01–06–2025 ಪುಟಗಳು:16



# ಶಿಕ್ಷಣವು ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ನೆರವಾಗುತ್ತದೆ

ಖಡ್ಗಕ್ಕಿಂತ ಲೇಖನಿ ಹರಿತ ಇದು ಶಿಕ್ಷಣಕ್ಕಿರುವ ತಾಕತ್ತು. ಹಣ ಇದ್ದವನು ಕೆಲವನ್ನು ಮಾತ್ರ ಗೆಲ್ಲಬಲ್ಲ. ಶಿಕ್ಷಣ ಇದ್ದವನು ಜಗತ್ತನ್ನೇ ಗೆಲ್ಲಬಲ್ಲ. ಇದಕ್ಕೆ ಸಾಕ್ಷಿಯಾಗಿ ದೇಶದ ಮಹಾನ್ ನಾಯಕರು ಮಾಡಿರುವ ಸಾಧನೆಗಳ ಪಟ್ಟಿ ತುಂಬಾ ಉದ್ದವಿದೆ. ಈ ಜಗತ್ತಿನಲ್ಲಿ ಶಿಕ್ಷಣ ವಿದ್ಯೆಗೆ ಇರುವ ಮಾನ್ಯತೆ ಯಾವುದೇ ಭೌತಿಕ ವಿಷಯಗಳಿಗೆ ಶಾಶ್ವತವಾಗಿ ಸಿಗಲು ಸಾಧ್ಯವೇ ಇಲ್ಲ. ಶಾಲೆ ಮತ್ತು ಜೀವನದ ನಡುವಿನ ವ್ಯತ್ಯಾಸವೆಂದರೆ ಶಾಲೆಯಲ್ಲಿ ಮೊದಲು ನಿಮಗೆ ಪಾಠ ಕಲಿಸುತ್ತಾರೆ ನಂತರ ಪರೀಕ್ಷೆಯನ್ನು ನೀಡಲಾಗುತ್ತದೆ. ಆದರೆ ಜೀವನದಲ್ಲಿ ನಿಮಗೆ ಮೊದಲು ಪರೀಕ್ಷೆಗಳು ಎದುರಾಗುತ್ತದೆ, ನಂತರ ಅದರಿಂದ ನಾವು ಪಾಠ ಕಲಿಯುತ್ತೇವೆ.

ಶಿಕ್ಷಣವು ತರಗತಿಯಲ್ಲಿ ಮತ್ತು ಅದರ ಹೊರಗೆ ವ್ಯಕ್ತಿಯ ಜೀವನವನ್ನು ರೂಪಿಸುತ್ತದೆ. ಗುಣಮಟ್ಟದ ಶಿಕ್ಷಣವು ಯಶಸ್ವಿ ವೃತ್ತಿಜೀವನಕ್ಕೆ ಅಡಿಪಾಯವನ್ನು ಹಾಕಬಹುದು ಆದರೆ ಅದು ಅದರ ಏಕೈಕ ಉದ್ದೇಶದಿಂದ ದೂರವಿದೆ. ಶಿಕ್ಷಣ ಔಪಚಾರಿಕ ಮತ್ತು ಅನೌಪಚಾರಿಕ ಎರಡೂ ಜ್ಞಾನ ವಿಮರ್ಶಾತ್ಮಕ ಆಲೋಚನಾ ಕೌಶಲ್ಯಗಳು ಮತ್ತು ಅನೇಕ ಸಂದರ್ಭಗಳಲ್ಲಿ ತೆರೆದ ಮನಸ್ಸಿನಿಂದ ಪರಿಚಯವಿಲ್ಲದ ಸಂದರ್ಭಗಳು ಮತ್ತು ವಿಷಯಗಳನ್ನು ಸಮೀಪಿಸುವ ಸುಧಾರಿತ ಸಾಮರ್ಥ್ಯವನ್ನು ನೀಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಆಧುನಿಕ ಶಿಕ್ಷಣದ ಕೆಲವು ಒತ್ತಡಗಳು ಇಂದಿನ ಮಕ್ಕಳು ಮತ್ತು ಯುವ ವಯಸ್ಕರಲ್ಲಿ ಮಾನಸಿಕ ಆರೋಗ್ಯ ಸವಾಲುಗಳ ಹೆಚ್ಚಳಕ್ಕೆ ಕೊಡುಗೆ ನೀಡುತ್ತವೆ ಎಂದು ಭಾವಿಸಲಾಗಿದೆ. ಶಿಕ್ಷಣದ ಪ್ರಸ್ತುತ ವಿಧಾನಗಳನ್ನು ಪರಿಶೀಲಿಸುವುದು ಮತ್ತು ಅವುಗಳು ಪ್ರತಿಕೂಲವಾಗಿರುವ ವಿಧಾನಗಳನ್ನು ಗುರುತಿಸುವುದು ಪೋಷಕರು ಶಿಕ್ಷಕರು ಮತ್ತು ಇತರ ಮಧ್ಯಸ್ಥಗಾರರು ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಉತ್ತಮವಾಗಿ ಬೆಂಬಲಿಸಲು ಸಹಾಯ ಮಾಡಬಹುದು. ವಿದ್ವಾಂಸರು ಮತ್ತು ತತ್ವಜ್ಞಾನಿಗಳು ಇತಿಹಾಸದುದ್ದಕ್ಕೂ ಶಿಕ್ಷಣದ ಉದ್ದೇಶವನ್ನು ಚರ್ಚಿಸಿದ್ದಾರೆ. ತೊಡಗಿಸಿಕೊಂಡಿರುವ ನಾಗರಿಕರಿಗೆ ಶಿಕ್ಷಣ ಅಗತ್ಯ ಎಂದು ಕೆಲವರು ವಾದಿಸಿದ್ದಾರೆ. ವಿಧೇಯತೆಯನ್ನು ಉತ್ತೇಜಿಸುವುದು ಮತ್ತು ಯುವಕರನ್ನು ಪ್ರಬಲ ಸಾಂಸ್ಕೃತಿಕ ವಿಚಾರಗಳಿಗೆ ಕಲಿಸುವುದು ಇದರ ಉದ್ದೇಶ ಎಂದು ಕೆಲವರು ಭಾವಿಸಿದರು ಇನ್ನೂ ಕೆಲವರು ಜ್ಞಾನದ ಅನ್ವೇಷಣೆಯು ಸ್ವತಃ ಒಂದು ಸದ್ಗುಣ ಅಥವಾ ಆಧ್ಯಾತ್ಮಿಕ ಗುರಿಯಾಗಿದೆ ಎಂದು ನಂಬಿದ್ದರು. ಇಂದು ಶಿಕ್ಷಣದ ಉದ್ದೇಶದ ಸುತ್ತಲಿನ ಸಂಭಾಷಣೆಗಳು ಮಕ್ಕಳ ಅಭಿವೃದ್ಧಿ ಮತ್ತು ಆರ್ಥಿಕತೆಯ ಸುತ್ತ ಕೇಂದ್ರೀಕೃತವಾಗಿವೆ ಅಂದರೆ ಶಿಕ್ಷಣವು ಮಕ್ಕಳನ್ನು ಆರೋಗ್ಯಕರ, ಸಮರ್ಥ ವಯಸ್ಕರಾಗಿ ಬೆಳೆಯಲು ಹೇಗೆ ಸಹಾಯ ಮಾಡುತ್ತದೆ ಮತ್ತು ಆರ್ಥಿಕವಾಗಿ ತಮ್ಮನ್ನು ಬೆಂಬಲಿಸಲು ಮತ್ತು ಸಮಾಜಕ್ಕೆ ಕೊಡುಗೆ ನೀಡಲು ಸಾಧ್ಯವಾಗುತ್ತದೆ. ಆದಾಗ್ಯೂ ಶಿಕ್ಷಣದ ಆರ್ಥಿಕ ಮತ್ತು ಪ್ರಾಯೋಗಿಕ ಪ್ರಯೋಜನಗಳ ಮೇಲೆ ಅತಿಯಾದ ಗಮನವು ಸಂತೋಷದ ಪ್ರಕ್ರಿಯೆಯನ್ನು ಕಸಿದುಕೊಳ್ಳುತ್ತದೆ ಎಂದು ಕೆಲವು ತಜ್ಞರು ಎಚ್ಚರಿಸುತ್ತಾರೆ. ಮಾನವರು ವಿಶೇಷವಾಗಿ ಮಕ್ಕಳು–ನೈಸರ್ಗಿಕ ಕಲಿಯುವವರು, ಅವರು ವಾದಿಸುತ್ತಾರೆ. ಮತ್ತು ಕಲಿಕೆಯು ತನ್ನದೇ ಆದ ಕಾರಣಕ್ಕಾಗಿ ಅನುಸರಿಸಿದಾಗ ಅದು ಅತ್ಯಂತ ಮೌಲ್ಯಯುತವಾಗಿರುತ್ತದೆ.

ಮಕ್ಕಳ ಬೆಳವಣಿಗೆಗೆ ಶಿಕ್ಷಣ ಏಕೆ ಮುಖ್ಯ ಎಂಬುವುದು ಶಿಕ್ಷಣವು ಸಮಾಜದಲ್ಲಿ ಕಾರ್ಯನಿರ್ವಹಿಸಲು ಅಗತ್ಯವಿರುವ ಸಾಮಾಜಿಕ ಭಾವನಾತ್ಮಕ ಮತ್ತು ಅರಿವಿನ ಕೌಶಲ್ಯಗಳನ್ನು ಮಕ್ಕಳಿಗೆ ಕಲಿಸಲು ಮೌಲ್ಯಯುತವಾಗಿದೆ. ಔಪಚಾರಿಕ ಶಿಕ್ಷಣವು ಸಾಮಾಜಿಕ ಕಲಿಕೆಯನ್ನು ಸುಗಮಗೊಳಿಸುತ್ತದೆ. ಕಾರ್ಯನಿರ್ವಾಹಕ ಕಾರ್ಯನಿರ್ವಹಣೆಯ ಕೌಶಲ್ಯಗಳನ್ನು ನಿರ್ಮಿಸುತ್ತದೆ ಮತ್ತು ಮಕ್ಕಳು ಸ್ವಾಭಾವಿಕವಾಗಿ ತೆರೆದುಕೊಳ್ಳದ ವಿಷಯಗಳನ್ನು ಅನ್ವೇಷಿಸಲು ಅನುವು ಮಾಡಿಕೊಡುತ್ತದೆ. ಅನೌಪಚಾರಿಕ ಶಿಕ್ಷಣವು ವಿಶಿಷ್ಟವಾಗಿ ಅವರ ಸ್ವಂತ ಆಸಕ್ತಿಗಳನ್ನು ಬೆಳೆಸಿಕೊಳ್ಳಲು ಮತ್ತು ಸ್ವಯಂ ನಿರ್ದೇಶನವನ್ನು ಕಲಿಯಲು ಅನುವು ಮಾಡಿಕೊಡುತ್ತದೆ. ಅದು ಸ್ವತಃ ಪ್ರಮುಖ ಜೀವನ ಕೌಶಲ್ಯವಾಗಿದೆ. ಶಿಕ್ಷಣವು ಮಕ್ಕಳನ್ನು ಭವಿಷ್ಯಕ್ಕಾಗಿ ಹೇಗೆ ಸಿದ್ಧಪಡಿಸುತ್ತದೆ ಎಂದರೆ ತಾತ್ವಿಕವಾಗಿ ಆಧುನಿಕ ಜಗತ್ತಿನಲ್ಲಿ ಶಿಕ್ಷಣವು ಭವಿಷ್ಯದ ಯಶಸ್ಸಿಗೆ ಅಗತ್ಯವಾದ ತಾಂತ್ರಿಕ ಕೌಶಲ್ಯಗಳನ್ನು ಕಲಿಸುತ್ತದೆ ಮತ್ತು ಮಾನವರು ಸಮಸ್ಯೆಗಳನ್ನು ಸೃಜನಾತ್ಮಕವಾಗಿ ಸಮೀಪಿಸಲು ಹೊಸ ದೃಷ್ಟಿಕೋನಗಳನ್ನು ತೊಡಗಿಸಿಕೊಳ್ಳಲು ಮತ್ತು ನಿರಂತರವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಹೊಸತನವನ್ನು ಕಂಡುಕೊಳ್ಳಲು ಅನುವು ಮಾಡಿಕೊಡುವ ವಿಮರ್ಶಾತ್ಮಕ ಚಿಂತನೆಯ ಸಾಮರ್ಥ್ಯಗಳನ್ನು ಬೆಳೆಸುತ್ತದೆ. ಪ್ರಸ್ತುತ ಔಪಚಾರಿಕ ಶಿಕ್ಷಣದ ವ್ಯವಸ್ಥೆಯು ಅದನ್ನು ಪರಿಣಾಮಕಾರಿಯಾಗಿ ಮಾಡುತ್ತದೆಯೇ ಆದಾಗ್ಯೂ ಸಾರ್ವಜನಿಕರು ಮತ್ತು ನೀತಿ ನಿರೂಪಕರ ನಡುವೆ ದೊಡ್ಡ ಚರ್ಚೆಯ ಮೂಲವಾಗಿದೆ.ವಿದ್ಯಾರ್ಥಿಗಳು ಹೇಗಿರಬೇಕು ಎಂಬುದಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ಆದರ್ಶ ಉದಾಹರಣೆ. ಬಾಬಾಸಾಹೇಬರು ಹೇಳುವಂತೆ. ಶಿಷ್ಯನಾದವನು ತನ್ನ ಗುರುವಿನಿಂದ ಮಾರ್ಗದರ್ಶನ ಪಡೆಯುತ್ತಾನೆ. ಅವನು ತನ್ನ ಗುರುನಿನ ಸಿದ್ಧಾಂತಗಳನ್ನು ಮತ್ತು ನಿರ್ಣಯಗಳನ್ನು ಸ್ವೀಕರಿಸಬೇಕಾಗಿಲ್ಲ. ಗುರುವಿನ ತತ್ವಗಳನ್ನು ನಿರಾಕರಿಸುವಾಗಲೂ ಶಿಷ್ಯ ತನ್ನ ಗುರುವಿನ ಬಗ್ಗೆ ತನ್ನ ಆಳವಾದ ಗೌರವವನ್ನು ವ್ಯಕ್ತಪಡಿಸುತ್ತಾನೆ. ವಸ್ತುನಿಷ್ಠವಾದ ಓದು ಹಾಗೂ ಪ್ರಶ್ನೆಗಳ ಮೂಲಕ ತಮ್ಮ ಜ್ಞಾನಭಂಡಾರವನ್ನು ಸಂಪಾದಿಸಿಕೊಂಡವರು ಬಾಬಾಸಾಹೇಬರು. ಅವರ ಓದಿನ ಸಂದರ್ಭದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಚಳವಳಿಗೆ ಆಹ್ವಾನಿಸುತ್ತಾರೆ. ಆಗ ಮೊದಲು ನನ್ನ ಕೆಲಸ ಓದು ಆನಂತರ ಎಲ್ಲವೂ ಎಂಬ ಪರಿಪೂರ್ಣವಾದ ಜ್ಞಾನ ಸಂಪಾದಿಸಲು ನಿಂತ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನಡೆ ಇವತ್ತಿನ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕಾಗಿದೆ. ಬಾಬಾಸಾಹೇಬರು ತಮ್ಮ ಜ್ಞಾನಶಿಸ್ತಿನಿಂದಲೇ ಇಡೀ ಜಗತ್ತೇ ಮೆಚ್ಚುವಂತಹ ಭಾರತದ ಸಂವಿಧಾನವನ್ನು ಬರೆದುಕೊಟ್ಟದ್ದು ಎಲ್ಲರಿಗೂ ತಿಳಿದಿರುವ ವಸ್ತುನಿಷ್ಠ ಸತ್ಯ. ಶಿಕ್ಷಕರು ವಿದ್ಯಾರ್ಥಿಗಳನ್ನು ತನ್ನ ಮನೆಯೊಳಗಿನ ಮಕ್ಕಳಿಗಿಂತಲೂ ಹೆಚ್ಚಾಗಿ ಕಾಳಜಿ ಹಾಗೂ ಪ್ರೀತಿ ತೋರುತ್ತಾರೆ. ಜೊತೆಗೆ ವಿವೇಕದ ಪಾಠ ಹೇಳುತ್ತಾರೆ. ತಮ್ಮ ವಿದ್ಯಾರ್ಥಿಗಳು ಗೆದ್ದಾಗ ಸಂಭ್ರಮಿಸುವ ಹಾಗೂ ಸೋತಾಗ ಬೆನ್ನಿಗೆ ನಿಂತು ಗೆಲ್ಲುವ ತನಕವೂ ಛಲಬಿಡದೆ ಜತನದಿಂದ ಆತ್ಮಸ್ಥೈರ್ಯ ತುಂಬುತ್ತಾರೆ. ಓದದೆ ಬರೆಯದೆ ಒಂದೇ ಒಂದು ದಿನ ಬದುಕಿರುವುದನ್ನು ತನ್ನಿಂದ ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದ ಶಿಕ್ಷಕರುಗಳೂ ನಮ್ಮ ನಡುವೆ ಇದ್ದಾರೆ. ಅವರ ಕನಸು ಹಾಗೂ ಜೀವಾಳವೇ ವಿದ್ಯಾರ್ಥಿಗಳು. ಈ ಬದುಕು ನಿಮ್ಮ ಜವಾಬ್ದಾರಿ ಮಾತ್ರವೇ ಆಗಿರುತ್ತದೆ. ನಿಮ್ಮ ಓದಿನ ಅವಧಿಯಲ್ಲಿ ಪ್ರಾಮಾಣಿಕವಾಗಿ ತಮ್ಮ ಗುರಿಯೆಡೆಗೆ ಸಾಗಲು ಓದುವುದನ್ನೇ ಕಾಯಕವಾಗಿಸಿಕೊಳ್ಳಿ. ಯಾರು ಏನೇ ಅಂದರೂ ನಿಮ್ಮ ಆತ್ಮವಿಶ್ವಾಸ ಕುಗ್ಗಬಾರದು. ನಿನ್ನ ಗುರಿ ಇರುವುದು ಮುಂದೆಯೇ ಹೊರತು ಹಿಂದಲ್ಲ.

–ರಾಣಪ್ಪ ಡಿ ಪಾಳಾ



ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01–06–2025 ಪುಟಗಳು:16

# ಮನಸ್ಸೆಂಬ ಮಾಂತ್ರಿಕ



ಮನುಷ್ಯನಿಗೆ ದೈಹಿಕ ಆರೋಗ್ಯ ಎಷ್ಟು ಮುಖ್ಯವೋ.. ಅಷ್ಟೇ ಮಾನಸಿಕ ಆರೋಗ್ಯವೂ ಸದೃಢವಾಗಿ ಇರಬೇಕಾದದ್ದು ಅವಶ್ಯಕ..! ದೈಹಿಕ ಮತ್ತು ಮಾನಸಿಕ ಆರೋಗ್ಯಗಳೆರಡನ್ನೂ ಒಂದೇ ತಕ್ಕಡಿಯ ತಟ್ಟೆಯಲ್ಲಿ ಹಾಕಿ ತೂಗಿದಾಗ, ಎರಡೂ ಸಮದೂಗಿದರೆ ಮಾತ್ರ ಬಾಳು ಸುಂದರ..! ದೈಹಿಕ ಆರೋಗ್ಯ ಕೆಟ್ಟರೆ ಅದರಿಂದ ಮಾನಸಿಕ ನೆಮ್ಮದಿಯೂ ಕೆಡುತ್ತದೆ. ಮಾನಸಿಕ ಆರೋಗ್ಯವೇ ಕೆಟ್ಟಿದ್ದರೆ, ದೈಹಿಕವಾಗಿ ಆರೋಗ್ಯವಂತರಾಗಿದ್ದರೂ ಯಾವುದೇ ಪ್ರಯೋಜನವಿಲ್ಲ..! ಈ "ಮನಸ್ಸು" ಎನ್ನುವ ಅತಿ ಸೂಕ್ಷ್ಮವಾದ ಹಾಗೂ ಕಣ್ಣಿಗೆ ಗೋಚರವಾಗದ ಶಕ್ತಿ ಎಂತಹ ಕೆಲಸವನ್ನಾದರೂ ತಕ್ಷಣವೇ ಮಾಡಿ ಮುಗಿಸಬಲ್ಲ ಸಾಮರ್ಥ್ಯವನ್ನು ಹೊಂದಿದೆ. ಅದಕ್ಕೇ ಹಿರಿಯರು 'ಮನಸ್ಸಿದ್ದರೆ ಮಾರ್ಗ' ಎಂಬ ಗಾದೆ ಮಾತನ್ನು ಹೇಳಿದ್ದಾರೋ ಏನೋ..!?

ಇನ್ನು ಮನಸ್ಸು ಮರ್ಕಟ, ಮನಸ್ಸು ಚಂಚಲ ಎಂಬ ಮಾತುಗಳೂ ಇವೆ. ಮನಸ್ಸು ಒಂದೇ ಕಡೆಯಲ್ಲಿ ಕೇಂದ್ರೀಕೃತವಾಗದೆ, ಕ್ಷಣಕ್ಕೊಮ್ಮೆ ಅದು ತನ್ನ ಆಸೆ, ಕನಸುಗಳನ್ನು ಬದಲಾಯಿಸುತ್ತದೆ ಎಂಬ ಉಕ್ತಿಗಳೂ ಪ್ರಚಲಿತದಲ್ಲಿದೆ. ಹೀಗಿರುವಾಗ ಇಂತಹ ಮನಸ್ಸಿನ ಮಾತಿನಿಂದ ವ್ಯಕ್ತಿಯ ವರ್ತನೆ, ನಡವಳಿಕೆಗಳು ತತ್ ಕ್ಷಣವೇ ಬದಲಾವಣೆಯ ಸ್ವರೂಪವನ್ನು ಪಡೆಯಬಹುದು. ಮನಸ್ಸಿನ ಮಾತಿನಿಂದ ಮಾನವರು ಆಕಾಶದ ಎತ್ತರಕ್ಕೆ ಹಾರಬಹುದು ಅದೇ ಕ್ಷಣದಲ್ಲಿ ಪಾತಾಳದ ಪ್ರಪಾತಕ್ಕೂ ಇಳಿಯಬಹುದು..! ಧನಾತ್ಮಕ ಚಿಂತನೆಗಳು ನಮ್ಮ ಮನದಲ್ಲಿದ್ದಾಗ ನಮಗೆ ಎದುರಾಗುವ ಯಾವುದೇ ಕಷ್ಟ, ನೋವುಗಳು ಕೂಡ ಹೂವಿನ ಹಾಸಿಗೆಯಂತೆ ಭಾಸವಾಗಿ, ಯಾರೂ ಏರಲು ಸಾಧ್ಯವೇ ಇರದ ಪರ್ವತವನ್ನೂ ಹತ್ತಿ ಬಿಡಬಹುದು. ಮನಸ್ಸಿನ ತುಂಬಾ ಋಣಾತ್ಮಕ ಚಿಂತನೆಗಳು ಆವರಿಸಿದ್ದಾಗ ಕೈಯಲ್ಲಿ ತುಂಡು ಮಾಡಬಹುದಾದ ಕೆಲಸಕ್ಕೂ ಕೊಡಲಿ ಬೇಕಾಗಬಹುದು.

ಕೆಲವು ಚಿಕ್ಕ ಮಕ್ಕಳಲ್ಲಿ ಕಂಡುಬರುವ ಹಿಂಜರಿಕೆ, ಭಯದ ಸ್ವಭಾವಕ್ಕೆ ಅವರು ಬೆಳೆದು ಬಂದ ಮನೆಯ ವಾತಾವರಣವೂ ಕಾರಣವಾಗಿರುತ್ತದೆ. ಕೆಲವೊಮ್ಮೆ ಅವರ ಮನೆಯ ಬಡತನದಿಂದ ಮಕ್ಕಳಿಗೆ ಧರಿಸಲು ಉತ್ತಮ ಗುಣಮಟ್ಟದ ಉಡುಪುಗಳ ಕೊರತೆಯಾಗಿ, ಆ ಮಕ್ಕಳು ಸಮಾಜದ ಮುಖ್ಯವಾಹಿನಿಗೆ ಬರಲು ಅಂಜಬಹುದು. ಇಂತಹ ಮಕ್ಕಳನ್ನು ಎಲ್ಲಾ ಮಕ್ಕಳಂತೆ ಸಹಜವಾಗಿರುವಂತೆ ಮಾಡಲು ಮುಖ್ಯವಾಗಿ ಹೆತ್ತವರು ಮತ್ತು ಶಿಕ್ಷಕರು ಪ್ರಯತ್ನಿಸಬೇಕು. ಇಂತಹ ಮಕ್ಕಳ ಬಾಳಿನಲ್ಲಿ 'ಸಮಾನತೆ' ಎಂಬ ಪದದ ಸದ್ಬಳಕೆಯು ಆಗುವಂತೆ ಉಳಿದವರು ನೋಡಿಕೊಳ್ಳಬೇಕು. ಮಕ್ಕಳ ಮನಸ್ಸು ಇದರಿಂದ ಗರಿಬಿಚ್ಚಿ ಕುಣಿಯುವ ನವಿಲಿನಂತಾಗುವುದು.

ಹದಿಹರೆಯದ ವಯಸ್ಸು ಹೆಚ್ಚು ಆಕರ್ಷಣೆಯ ಕಡೆಗೆ ವಾಲುವ ಸಮಯ. ಎಲ್ಲವೂ ರಂಗುರಂಗಾಗಿ ಕಾಣುವ ಈ ಅವಧಿಯಲ್ಲಿ ಹೆಚ್ಚಿನ ಮಕ್ಕಳ ಮುಗ್ಧತೆಯ ದುರುಪಯೋಗಗಳಾಗುತ್ತವೆ. ಇಂತಹ ಹುಚ್ಚು ಕೋಡಿ ವಯಸ್ಸಿನಲ್ಲಿ ಆಗುವ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ಹೆತ್ತವರು ತಮ್ಮ ಮಕ್ಕಳಿಗೆ ತಿಳಿಸಿಕೊಡಬೇಕು. ಶಾಲೆಗಳಲ್ಲಿ ಶಿಕ್ಷಕರೂ ಕೂಡ ಆಪ್ತ ಸ್ನೇಹಿತರಂತೆ ವರ್ತಿಸಿ, ಮಕ್ಕಳು ಹಾದಿ ತಪ್ಪದಂತೆ ಮಾರ್ಗದರ್ಶನ ಮಾಡಬೇಕು. ಆಕರ್ಷಣೆ ಮತ್ತು ಪ್ರೀತಿಯ ನಡುವಿನ ವ್ಯತ್ಯಾಸವನ್ನು ಸರಿಯಾಗಿ ತಿಳಿದರೆ ಹದಿಹರೆಯದ ಮಕ್ಕಳು ಎಡವದಂತೆ ಬಾಳು ನಡೆಸಬಹುದು. ಇವುಗಳಿಂದ ಮನಸ್ಸು ಪ್ರಬುದ್ಧವಾಗುತ್ತದೆ. ಉದ್ಯೋಗ ಹಿಡಿಯಬೇಕಾದ ಸಮಯದಲ್ಲಿ ಹೆಚ್ಚು ಒತ್ತಡಕ್ಕೆ ಒಳಗಾಗಬಾರದು. ಕೆಲಸ ಸಿಕ್ಕಿದ ನಂತರವೂ ಕೆಲಸದ ಸಮಯಕ್ಕಿಂತ ಹೆಚ್ಚು ಕೆಲಸ ಮಾಡುವುದು ಅಥವಾ ಆತುರಾತುರವಾಗಿ ಕೆಲಸ ಮಾಡಿ ಮುಗಿಸಬೇಕು ಎಂಬ ಚಿಂತೆಗಳಿಂದ ಕೆಲಸ ಮಾಡಬಾರದು. ಕೆಲಸ ಮುಗಿದ ನಂತರ ನಮಗೆ ನಾವು ಸ್ವಲ್ಪ ಸಮಯ ಕೊಟ್ಟು ಕೊಳ್ಳಬೇಕು. ಮನೋರಂಜನೆ ಕಾರ್ಯಕ್ರಮಗಳನ್ನು ವೀಕ್ಷಿಸುವುದು, ಇಷ್ಟದ ಪುಸ್ತಕಗಳನ್ನು ಓದುವುದು ಅಥವಾ ಸಂಗೀತವನ್ನು ಆಲಿಸುವುದು ಮಾಡುವುದು ಒಳ್ಳೆಯದು. ಇದರಿಂದ ಮನಸ್ಸು ನಿರಾಳವಾಗುವುದು.

ಮದುವೆಯ ಸಂದರ್ಭದಲ್ಲಿ ಸಂಗಾತಿಯ ಆಯ್ಕೆ ಮಾಡುವಾಗ, ಹೆಣ್ಣು ಮತ್ತು ಗಂಡು ಮೊದಲು ಒಪ್ಪಿಕೊಳ್ಳಬೇಕು. ಯಾರದೋ ಒತ್ತಾಯಕ್ಕೋ, ಅನಿವಾರ್ಯ ಪರಿಸ್ಥಿತಿಗಳಿಗೆ ಕಟ್ಟುಬಿದ್ದು ವಿವಾಹವಾದರೆ ಮುಂದೆ ಜೀವನ ಪೂರ್ತಿ ನರಳಬೇಕಾಗುತ್ತದೆ. ಒಂದು ವೇಳೆ ಇಂತಹ ಪರಿಸ್ಥಿತಿಯಲ್ಲಿಯೇ ಮದುವೆ ಆದರೂ, ಮುಂದೆ ಹೊಂದಾಣಿಕೆ ಮಾಡಿಕೊಂಡು ಜೀವನ ಮಾಡುವ ಮನಸ್ಸು ಇಬ್ಬರಿಗೂ ಇರಬೇಕು. ಆಗಲೇ ಅಸಹನೆ, ಕಿರಿಕಿರಿಗಳು ಇಲ್ಲದಂತಾಗಿ ಮನಸ್ಸು ಪ್ರಫುಲ್ಲವಾಗುತ್ತದೆ. ಇಳಿವಯಸ್ಸಿನಲ್ಲಿ ಮನುಷ್ಯರು ಮತ್ತೇ ಬಾಲ್ಯಾವಸ್ಥೆಗೆ ತಲುಪುತ್ತಾರೆ ಎಂಬ ಮಾತಿದೆ. ಇಂತಹ ವಯಸ್ಸಿನಲ್ಲಿ ಕೆಲವರ ಮನಸ್ಸಿನಲ್ಲಿ ಅಭದ್ರತೆಯ ಭಾವನೆ ಕಾಡಬಹುದು. ಆಗ ಮನೆಯ ಸದಸ್ಯರೆಲ್ಲರೂ ಅವರಿಗೆ ಮನೋಬಲವನ್ನು ತುಂಬಬೇಕು. "ನಿಮ್ಮೊಂದಿಗೆ ನಾವಿದ್ದೇವೆ" ಎಂಬ ಮನೋಸ್ಥೈರ್ಯ ನೀಡಬೇಕು. ಮರೆವು ಎಂಬ ಖಾಯಿಲೆ ಈ ವಯಸ್ಸಿನಲ್ಲಿ ಬರುವ ಸಂದರ್ಭಗಳು ಹೆಚ್ಚು. ಜೊತೆಗೆ ಕಿವುಡುತನ, ದೃಷ್ಟಿ ಸಮಸ್ಯೆಗಳೂ ಕೆಲವರಿಗೆ ಹಿಂಸೆ ನೀಡಬಹುದು. ಇದರಿಂದ ಇಳಿವಯಸ್ಸಿನವರ ಮಾತುಗಳಲ್ಲಿ ಒರಟುತನ ಕಂಡು ಬರಬಹುದು. ಇದನ್ನು ಅರಿತು ಮನೆಯವರು ಹಿರಿಯರೊಂದಿಗೆ ಸಹನೆಯಿಂದ ನಡೆದುಕೊಳ್ಳಬೇಕು.

ಕುರೂಪ, ಬಡತನ, ಕಡಿಮೆ ಕಲಿಕಾ ಮಟ್ಟ, ಕಡಿಮೆ ಅಂಕಗಳು, ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವುದು, ಪ್ರೇಮ ವೈಫಲ್ಯ, ದೈಹಿಕ ಮತ್ತು ಮಾನಸಿಕ ಕಿರುಕುಳ, ಬೆದರಿಕೆ, ನಿರುದ್ಯೋಗ, ದಾಂಪತ್ಯದ ವಿರಸ, ಬಂಜೆತನ, ಅತ್ತೆ–ಸೊಸೆ ಜಗಳ, ಮನೆಯವರ ನಿರ್ಲಕ್ಷ್ಯ ಇವುಗಳೆಲ್ಲಾ ಮಾನಸಿಕ ಸ್ವಾಸ್ಥ್ಯವನ್ನು ಹದಗೆಡಿಸಬಹುದಾದ ಪ್ರಮುಖ ಕಾರಣಗಳು. ಇಂತಹ ಸನ್ನಿವೇಶಗಳಲ್ಲಿ ಎಲ್ಲರೂ ಮೊದಲು ತಮ್ಮ ಮನಸ್ಸಿನ ಮೇಲೆ ಹತೋಟಿ ಸಾಧಿಸಬೇಕು. ಮನಸ್ಸಿಗೆ ಬರುವ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆಗಳನ್ನು ಕಿತ್ತೊಗೆಯಬೇಕು. ಎಲ್ಲಾ ಸಮಸ್ಯೆಗಳಿಗೆ ಆತ್ಮಹತ್ಯೆಯೊಂದೇ ಪರಿಹಾರವಲ್ಲ ಎಂಬ ಮಾತನ್ನು ದೃಢವಾಗಿ ನಂಬಬೇಕು. ಜೊತೆಗಿರುವ ಸ್ನೇಹಿತರು, ಮನೆಯವರ ಸಲಹೆಗಳನ್ನು ಕೇಳಬೇಕು. ಇನ್ನೂ ಸಮಸ್ಯೆಗಳು ಪರಿಹಾರವಾಗದಿದ್ದರೆ ಆಪ್ತಸಮಾಲೋಚಕರ ಸಹಾಯ ಪಡೆಯಬೇಕು. ಅದಕ್ಕಿಂತಲೂ ಹೆಚ್ಚಿನ ಸಮಸ್ಯೆಗಳು ಕಂಡುಬಂದರೆ ಮನಶಾಸ್ತ್ರಜ್ಞರು, ಮನೋವೈದ್ಯರನ್ನು ಸಂಪರ್ಕಿಸಿ ಶುಶ್ರೂಷೆ ಪಡೆದು ಸುಖೀ ಜೀವನ ನಡೆಸಬಹುದು.

ಪ್ರೇಮ ವೈಫಲ್ಯದಿಂದ ಜೀವ ಕಳೆದುಕೊಂಡವರು ಇದ್ದರೂ, ಆ ನೋವನ್ನು ಜಯಿಸಿ, ಗೆದ್ದು ಹೊಸ ಬದುಕು ಕಟ್ಟಿಕೊಂಡವರೂ ಇದ್ದಾರೆ..! ಇಂತಹ ವಿಪರೀತ ಒಂಟಿತನ ಕಾಡುವ ಸಮಯಗಳಲ್ಲಿ ಮನಸ್ಸಿಗೆ ಸಾಂತ್ವನ ನೀಡುವ ಗೆಳೆಯರೋ, ಹೆತ್ತವರೋ ಜೊತೆಗಿದ್ದಲ್ಲಿ ಈ ಸನ್ನಿವೇಶಗಳು ತಿಳಿಯಾಗಬಹುದು. ಅಥವಾ ಬೇರೆ ಊರಿಗೆ ಪ್ರವಾಸ ಹೊರಟಾಗಲೂ ಬದಲಾದ ಪರಿಸರದಲ್ಲಿ ಮನಸ್ಸು ಕೂಡ ಪರಿವರ್ತನೆ ಹೊಂದಬಹುದು. ಮನಸ್ಸೆಂಬ ಮಾಂತ್ರಿಕನ ಮೇಲೆ ಹಿಡಿತ ಸಾಧಿಸಿದರೆ ಸಕಲವೂ ನಮ್ಮದಾದುವ ಸಂಭವಗಳೇ ಹೆಚ್ಚು..!! ಮನಕ್ಕೆ ಹಿತವಾಗುವ ವಾತಾವರಣವನ್ನು ನಾವೇ ಸೃಷ್ಟಿ ಮಾಡಿಕೊಂಡು ಮನಸ್ಸನ್ನು ಅರಳಿಸೋಣ.

**–ವಿಜಯಲಕ್ಷ್ಮಿ ನಾಯ್ಕ್ ಬಿಳಿಯೂರು**



# 'ಹೆಣ್ಣು' ಆಟಕ್ಕುಂಟು ಲೆಕ್ಕಕ್ಕಿಲ್ಲವೇ..?

ಹೆಣ್ಣು ಇಲ್ಲದಿದ್ದರೆ ಸಂಸಾರ ರಥ ಸುಗಮವಾಗಿ ಸಾಗಲು ಸಾಧ್ಯ ಇಲ್ಲ ಅಂತ ಗೊತ್ತಿದ್ದರೂ, ಬೆಳಗ್ಗೆ ಎದ್ದಾಗಿನಿಂದ ಸಂಜೆವರೆಗೆ ಗಾಣದೆತ್ತಿನಂತೆ ದುಡಿದರೂ, ಆಕೆಯ ಕೆಲಸ ಗಣನೆಗೆ ಬರುವುದೇ ಇಲ್ಲ. ಆಕೆಯ ಸಾಮರ್ಥ್ಯ ಕಣ್ಣಿಗೆ ಕಾಣುವುದಿಲ್ಲವಲ್ಲ..! ಆಟಕ್ಕುಂಟು ಲೆಕ್ಕಕ್ಕಿಲ್ಲ ಅನ್ನುವ ಮನೋಭಾವಕ್ಕೆ ಅವಳ ಸ್ಥಾನಮಾನಗಳು ಗೌಣ ಅನ್ನಿಸುವುದು ಎಷ್ಟು ಸಮಂಜಸ..? ಉತ್ತರವಿಲ್ಲದೆ ಧ್ವನಿ ಏರಿಸಿ ಗದರುವುದಷ್ಟೆ, ಹೆಣ್ಣು ನಾಲ್ಕು ಗೋಡೆಗಳಿಗೆ ಸೀಮಿತವಾದವಳು ಮನೆ ಕೆಲಸ ಬಿಟ್ಟರೆ ಬೇರೆ ಮಾಡುವುದು ಏನಿದೆ ನಿನಗೆ..? ಸುಮ್ಮನೆ ಮೂರು ಹೊತ್ತು ತಿಂದು ಮಲಗೊದು ಬಿಟ್ಟು ಮನೆ ಹೊರಗೆ ಒಳಗೆ ಕೆಲಸ ಹುಡುಕಿಕೊಂಡು ಮಾಡಬೇಕು, ಹೆಂಗಸು ಆದವಳು ಹಾಗಿದ್ರೇನೆ ಒಳ್ಳೆಯದು ಎನ್ನುವ ಓಬಿರಾಯನ ಕಾಲದ ತತ್ವ ಸಿದ್ಧಾಂತಗಳು..!?

ಇಂಗ್ಲೀಷಿನಲ್ಲಿ ಒಂದು ಮಾತಿದೆ. 'ಗುಡ್ ಫಾರ್ ನಥಿಂಗ್' ಎಂದು. ಇದನ್ನೂ ಸಹ ನಮ್ಮ 'ಆಟಕ್ಕುಂಟು ' ಎನ್ನುವ ನುಡಿಗಟ್ಟಿನಂತೆಯೇ ಬಳಸುವುದುಂಟು. ಅಪ್ರಯೋಜಕರಿಗೆ, ನಿಷ್ಪಯೋಜಕರಿಗೆ ಬೆಟ್ಟು ಮಾಡಿ ತೋರಿಸುವಾಗ ಈ ಮಾತು ಹೇಳಲಾಗುತ್ತದೆ. ಎಂದರೆ ಮನುಷ್ಯ ಒಳ್ಳೆಯವರೇ, ಆದರೆ ಏನೂ ಉಪಯೋಗವಿಲ್ಲ! ಹೆಣ್ಣು ಮನೆ ಕೆಲಸದವಳು, ಗಂಡು ಹೇಳಿದಂತೆ ಕೇಳಬೇಕಾದವಳು, ಅವಳು ಮನೆಯಲ್ಲಿ ಒಬ್ಬಳು.. ಆದರೆ ಗಂಡಿಗೆ ಸರಿಸಮಾನಳಲ್ಲ..!

ಗಂಡಿನ ದಾಸ್ಯದಲ್ಲಿ ಆಕೆಯದು ನೀರವ ಮೌನ!. ನಿಷ್ಪಯೋಜಕಳಂತೆ ಕಂಡವರಿಗೆ ಅವರು ಕೊನೆಯ ಕಾಲದಲ್ಲಿ ಆಸರೆಯಾಗಿ ನಿಲ್ಲಲು ಹೆಣ್ಣೇ ಬೇಕೆಂಬುದು ಅರಿವು ಆಗಿ ಅವನ ಕಣ್ಣು ಅಂಚು ತುಂಬಿ ಹರಿದು ಪಶ್ಚಾತ್ತಾಪದ ಮೊರೆ ಹೋದರೂ ಅವಳು ನೊಂದು ಬೆಂದು ಸಂಸಾರ ಸಾಗರದಲ್ಲಿ ತೋಯ್ದ ಜೀವನ ಮರಳಿಬಾರದು.. ಮನೆಯಲ್ಲಿ ಮಾಡುವ ಕೆಲಸಕ್ಕೂ ಹಣ ನೀಡುವಂತಿದ್ದರೆ ಹೆಣ್ಣಿನ ಶಕ್ತಿ ಸಾಮರ್ಥ್ಯವೇನೆಂದು ಅರ್ಥವಾಗುತ್ತಿತ್ತೇನೊ..?

ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಗಾದೆ ಮಾತಿನಂತೆ ಅತ್ತೆಯಾದವಳು ತಾನು ಪಟ್ಟ ಕಷ್ಟದಲ್ಲಿ ಅರ್ಧದಷ್ಟು ಆದರೂ ಸೊಸೆಯಾದವಳು ಕಷ್ಟ ಪಡಲಿ ಎಂದು ಬಯಸುತ್ತ ಮಾತು ಮಾತಿಗೂ ಸೊಸೆಯನ್ನು ಹಿಂಸಿಸುವಳು. ಬಾವಿಯಲ್ಲಿ ನೀರು ಸೇದಿ ಮೂರು ಮೂರು ಬಿಂದಿಗೆ ನೀರು ಹೊತ್ತು ತುಂಬಿಸುತ್ತಿದ್ವು, ಹಳ್ಳಕ್ಕೆ ಹೋಗಿ ಬಟ್ಟೆ ತೋಳ್ಕೊಂಡು ಬಂದು ಮೇವು ಕುಯ್ದು ಎಮ್ಮೆ ದನ ಮೇಯಿಸಿಕೊಂಡು ಸಗಣಿ ಬಾಚಿ ಹೊಲ ತೋಟ ಮನೆ ಅಂತ ಎಲ್ಲ ಕೆಲಸ ಮಾಡಿದೀವಿ. ನೀವು ಅಡುಗೆ ಮಾಡೊಕೇ ಸುಸ್ತು ಆಗ್ತೀರ. ಒಳಕಲ್ಲಲ್ಲಿ ರುಬ್ಬೊಹಾಗಿಲ್ಲ, ಸೌದೆ ತಂದು ಒಲೆಯಲ್ಲಿ ಅಡುಗೆ ಮಾಡೋ ಹಾಗಿಲ್ಲ, ಕುಕ್ಕರಿನಲ್ಲಿ ಕೂಗಿಸಿ ಇಡೊಕೆ, ಅಂತ ಅತ್ತೆ ಗೊಣಗುತ್ತಿದ್ದರೆ ಇತ್ತ ಸೊಸೆ ಕರೆಂಟ್ ಇಲ್ಲದೆ ಒಳಕಲ್ಲಲ್ಲಿ ಖಾರ ರುಬ್ಬುತ್ತಿದವಳು ಸಣ್ಣ ಕಿರು ನಗೆಯನ್ನು ಬೀರಿ ರುಬ್ಬುವ ವೇಗವನ್ನು ಹೆಚ್ಚಿಸಿದಳು.


ಸಣ್ಣ ಸಣ್ಣ ಆಸೆಗಳಲ್ಲಿ ಖುಷಿ ಪಡುವ ಜೀವ ಏನನ್ನು ಬಯಸದೆ, ತನ್ನ ಆಸೆಗಳನ್ನು ಹೇಳಿಕೊಂಡರು ನನಸಾಗದೆಂದು ತಿಳಿದು ಮನೆಯವರ ಖುಷಿಯಲ್ಲಿ ತಾನು ಖುಷಿ ಕಾಣುವಳು. ಆಕೆ ಹೆಚ್ಚೇನು ಬಯಸುವುದಿಲ್ಲ, ತಾನು ಹುಟ್ಟಿ ಬೆಳೆದು ಬಂದ ತವರು ಮನೆ ಸಂಬಂಧವನ್ನು ಕಳಚಿಕೊಂಡು, ತನ್ನವರನ್ನೆಲ್ಲ ಬಿಟ್ಟು ಹೊಸ ಸಂಬಂಧಕ್ಕೆ ಬೆಸುಗೆ ಬೆಸೆಯುವ ಜೀವವ ಗಣನೆಗೆ ತೆಗೆದುಕೊಳ್ಳದೆ ಇದ್ದರು ಪರವಾಗಿಲ್ಲ ಅವಳಿಗೆ ಪ್ರೀತಿ ಕೊಡಿ, ಅವಳು ಮಾಡುವ ಕೆಲಸಕ್ಕೆ ಮೆಚ್ಚುಗೆಯ ಮಾತುಗಳನ್ನಾಡಿ. ಬಾರದೆ ಇರುವ ಕೆಲಸವನ್ನು ನಿಧಾನವಾಗಿ ಹೇಳಿ ಕಲಿಸಿಕೊಡಿ. ಎಲ್ಲದಕ್ಕಿಂತ ಹೆಚ್ಚಾಗಿ ಬೇರೆಯವರೊಂದಿಗೆ ಹೋಲಿಸದಿರಿ. ನಿಮ್ಮ ಮನೆ ನಡೆಸುವವಳು, ವಂಶ ಬೆಳಗುವವಳು, ಮರ್ಯಾದೆ ಉಳಿಸುವವಳು, ಪ್ರೇಮದ ಹಣತೆ ಹಚ್ಚುವವಳು ಹೆಣ್ಣೇ ಎಂಬುದು ಮನದಲ್ಲಿಟ್ಟು ಅವಳನ್ನು ನಿಮ್ಮಲ್ಲಿ ಒಬ್ಬರಂತೆ ನೋಡಿ. ಸರ್ವವೂ ಹೆಣ್ಣೇ, ಹೆಣ್ಣಿಂದಲೆ ಸಕಲವೂ, ಒಳಿತು ಕೆಡುಕುಗಳ ಆಗರವು.ಸಂಬಂಳವಿಲ್ಲದೆ ಹಗಲು ರಾತ್ರಿ ಮನೆಗಾಗಿ ದುಡಿಯುವ ಹೆಣ್ಣಿಗೆ ಸ್ಥಾನಮಾನ ಕೊಟ್ಟು ಗೌರವಿಸಿ.

**–ತುಳಸಿ ಚೈತ್ರಾ ದಯಾನಂದ್.**

ಕರುನಾಡ ಕಂದ
ಸಂಪುಟ 04 । ಸಂಚಿಕೆ 15
ದಿನಾಂಕ: 01–06–2025 ಪುಟಗಳು:16

# ಯಾರದ್ದೋ ತಪ್ಪಿಗೆ ಇನ್ಯಾರಿಗೋ ಶಿಕ್ಷೆ...?

## ಮುಂಡಗೋಡ ತಾಲೂಕಿನಲ್ಲಿ ಅವೈಜ್ಞಾನಿಕವಾಗಿ ನಡೆಯಿತಾ ಅಂಗನವಾಡಿ ಸಹಾಯಕಿಯರ ನೇಮಕಾತಿ



**ಮುಂಡಗೋಡ :** ಉತ್ತರ ಕನ್ನಡ ಜಿಲ್ಲೆಯ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯ ಮುಂಡಗೋಡ ತಾಲೂಕಿನಲ್ಲಿ ಉಪನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರವಾರ ಕಚೇರಿಯಿಂದ ,ಮುಂಡಗೋಡ ತಾಲೂಕಿನಲ್ಲಿ ವಿವಿಧ ಕಾರಣಾಂತರಗಳಿಂದ ತೆರವಾದ ಒಟ್ಟು 39 ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿತ್ತು. ಈ ಕುರಿತು ಅಂಗನವಾಡಿ ಸಹಾಯಕಿಯರ ಹುದ್ದೆಗೆ ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದರು. ಒಟ್ಟಾರೆ ಕರೆದಿರುವ 39 ಹುದ್ದೆಗಳಿಗೆ 278 ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದರು. ಇವುಗಳ ಪೈಕಿ 75 ಅರ್ಜಿಗಳು ವಿವಿಧ ಕಾರಣಗಳಿಂದ ತಿರಸ್ಕೃತಗೊಂಡು 39 ಹುದ್ದೆಗಳಿಗೆ 203 ಅರ್ಜಿಗಳು ಸ್ವೀಕೃತವಾಗಿದ್ದವು. ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅರ್ಹರನ್ನು ಆಯ್ಕೆ ಮಾಡುವಾಗ ಸೂಚಿಸಲಾದ ವಿವಿಧ ಮಾನದಂಡಗಳ ಪ್ರಕಾರವೇ ಆಯ್ಕೆ ಮಾಡಬೇಕಾಗುತ್ತದೆ ಹಾಗೂ ಆಕಾಂಕ್ಷಿಗಳು ಒಟ್ಟಾರೆಯಾಗಿ ನಾಲ್ಕು ಹಂತಗಳಲ್ಲಿ ಅರ್ಜಿ ಸಲ್ಲಿಕೆ ಮಾಡಬೇಕಾಗಿರುತ್ತದೆ ಎಂದು ಮುಂಡಗೋಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಯಾಗಿರುವ ರಾಮು ಬಯಲುಸೀಮೆ ಅವರು "ಕರುನಾಡ ಕಂದ" ಪತ್ರಿಕೆಗೆ ಮಾಹಿತಿ ನೀಡಿದ್ದಾರೆ.

**ಅರ್ಜಿದಾರರು ಹೇಳೋದೇನು...?**

ಅಂಗನವಾಡಿ ಸಹಾಯಕಿಯರ ಹುದ್ದೆಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ನ್ಯಾಸರ್ಗಿ ಗ್ರಾಮದ ಚೈತ್ರಾ ಎಂಬ ಮಹಿಳೆ " ಸದರಿ ಅನುಸರಿಸಿದ ನೇಮಕಾತಿ ವಿಧಾನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನನಗೆ ಅನ್ಯಾಯವಾಗಿದೆ, ನಾಲ್ಕು ಹಂತಗಳನ್ನು ಪೂರೈಸಿ ಅರ್ಜಿ ಸಲ್ಲಿಸಿದ್ದೇನೆ, ಆದರೆ ಆಯ್ಕೆ ಪಟ್ಟಿ ಬಿಡುಗಡೆಯಾದ ವೇಳೆ ಪಟ್ಟಿಯಲ್ಲಿ ನನ್ನ ಹೆಸರಿಲ್ಲ ತನ್ನದು ಶೇಕಡಾ 78% ಪ್ರತಿಶತ ಫಲಿತಾಂಶವಿದೆ ಆದರೆ ನ್ಯಾಸರ್ಗಿ ಗ್ರಾಮದಲ್ಲಿ ಶೇಕಡಾ 68% ಪ್ರತಿಶತ ಅಂಕ ಪಡೆದವರನ್ನು ಪರಿಗಣಿಸಲಾಗಿದೆ ನನ್ನ ಹೆಸರು ತಿರಸ್ಕಾರಕ್ಕೆ ನೀವು ಅರ್ಜಿ ಸಲ್ಲಿಕೆ ವೇಳೆ ಇ– ಸೈನ್ ತಾಂತ್ರಿಕ ವಿಧಾನ ಪೂರ್ಣ ಮಾಡಿಲ್ಲ ಎಂಬ ಕಾರಣ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

**ನಿಜವಾದ ತಾಂತ್ರಿಕ ಸಮಸ್ಯೆ ಏನು...?**

ಅರ್ಜಿ ಸಲ್ಲಿಸಿದ್ದ ಚೈತ್ರಾ ಅವರು ಮುಂಡಗೋಡ ನಗರದ ಸೈಬರ್ ಕೇಂದ್ರವೊಂದರಲ್ಲಿ ಅಂಗನವಾಡಿ ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಈ ವೇಳೆ ಸೈಬರ್ ಕೇಂದ್ರದವರು ಕೇಳಿರುವ ಎಲ್ಲಾ ರೀತಿಯ ಮಾಹಿತಿ ಹಾಗೂ ದಾಖಲೆಗಳನ್ನು ಅವರಿಗೆ ಅರ್ಜಿ ಸಲ್ಲಿಕೆ ವೇಳೆ ನೀಡಿದ್ದಾರೆ. ಸೈಬರ್ ಕೇಂದ್ರದವರು ಹೇಳುವ ಪ್ರಕಾರ ನಾನು ಅರ್ಜಿ ಸಲ್ಲಿಕೆ ಮಾಡುವ ವೇಳೆ ನಾಲ್ಕು ಹಂತಗಳನ್ನು ಪೂರ್ಣ ಮಾಡಿ ಅರ್ಜಿ ಸಲ್ಲಿಸಿದ್ದೇನೆ. ಅರ್ಜಿ ಸಲ್ಲಿಕೆ ಕೊನೆಯಲ್ಲಿ ಆಧಾರ್ ಒ ಟಿ ಪಿ ಪಡೆದು ಎಲ್ಲಾ ಹಂತಗಳನ್ನು ಪೂರ್ಣ ಮಾಡಿದ್ದೇನೆ, ಸದರಿ ಪ್ರಕ್ರಿಯೆ ವೇಳೆ ಅಂತಿಮ ಹಂತ ಪೂರ್ಣಗೊಂಡ ಬಳಿಕವಷ್ಟೇ ಸಂಪೂರ್ಣ ಅರ್ಜಿ ಪ್ರಿಂಟ್ ಮಾಡಲು ಬರುತ್ತದೆ. ಒಂದು ವೇಳೆ ಅಧಿಕಾರಿಗಳು ಹೇಳುವ ಪ್ರಕಾರ ಇ– ಸೈನ್ ಹಂತ ಆಗಿಲ್ಲವೆಂದರೆ ಸದರಿ ಅಭ್ಯರ್ಥಿಯ ಅರ್ಜಿಯನ್ನು ಪ್ರಿಂಟ್ ಮಾಡಲು ಬರುತ್ತಿರಲಿಲ್ಲ, ಒಂದು ವೇಳೆ ಕೆಲ ಅಭ್ಯರ್ಥಿಗಳ ಕಣ್ ತಪ್ಪಿನಿಂದ ಇ– ಸೈನ್ ಪ್ರಕ್ರಿಯೆ ಆಗಿಲ್ಲವೆಂದಾದರೆ ಇಲಾಖೆ ಈ ಬಗ್ಗೆ ಅರ್ಜಿದಾರರಿಗೆ ತಿಳಿಸುವ ಕುರಿತು ಕ್ರಮ ಕೈಗೊಳ್ಳಬೇಕಿತ್ತು. ಈಗಾಗಲೇ ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೆಸರಿರುವವರ ಹಾಗೂ ಅರ್ಜಿ ತಿರಸ್ಕೃತ ಆದವರ ಮೂಲ ಅರ್ಜಿಗಳು ಒಂದೇ ರೀತಿಯಲ್ಲಿದ್ದಾವೆ. ಅದರಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಾಣುತ್ತಿಲ್ಲ. ಸದರಿ ಅರ್ಜಿಗಳ ನಂಬರ್ ಅನ್ನು ಇಲಾಖೆಯ ವೆಬ್ ಸೈಟ್ ನಲ್ಲಿ ಪರಿಶೀಲಿಸಿದರೆ ಈ ಸೈನ್ ಪ್ರಕ್ರಿಯೆ ಆಗಿಲ್ಲವೆಂದು ಬರುತ್ತಿದೆ. ಆದರೆ ನಾನು ಎಲ್ಲಾ ರೀತಿಯ ಹಂತಗಳನ್ನು ಪೂರ್ಣ ಮಾಡಿದ್ದೇನೆ, ಒಂದು ವೇಳೆ ಅಪೂರ್ಣ ಅರ್ಜಿ ಸಲ್ಲಿಕೆ ಮಾಡಿದ್ದಾದರೆ ಅರ್ಜಿದಾರರಿಗೆ ಒಂದು ಸಂದೇಶವನ್ನಾದರೂ ತಲುಪುವ ಹಾಗೆ ವ್ಯವಸ್ಥೆ ಮಾಡಬೇಕಿತ್ತು, ಈ ರೀತಿಯ ಪ್ರಕ್ರಿಯೆಯಿಂದ ಅರ್ಹ ಅಭ್ಯರ್ಥಿಗಳಿಗೆ ಮೋಸವಾಗಿದೆ ಎಂದು ಸೈಬರ್ ಕೇಂದ್ರ ಮಾಲೀಕ ಮಾಹಿತಿ ನೀಡುತ್ತಿದ್ದಾರೆ.

**ತಕರಾರು ಅರ್ಜಿ ಸಲ್ಲಿಸಿದ್ದ ಅರ್ಜಿದಾರೆ...?**

ನೇಮಕಾತಿ ಪಟ್ಟಿ ಬಿಡುಗಡೆಯಾದ ಬಳಿಕ ಯಾವುದೇ ರೀತಿಯ ತಕರಾರು ಇದ್ದರೆ ಕಚೇರಿಗೆ ದಿ. 19/05/2025 ರೊಳಗೆ ತಕರಾರು ಅರ್ಜಿ ಸಲ್ಲಿಕೆ ಮಾಡಬಹುದು ಎಂದು ಮುಂಡಗೋಡ ತಾಲೂಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಪ್ರಕಟಣೆ ನೀಡಿತ್ತು. ಆದ ಕಾರಣ ಆರ್ಜಿದಾರೆ ಚೈತ್ರಾ ಅವರು ಮುಂಡಗೋಡ ಕಚೇರಿಗೆ ತೆರಳಿ ತಕರಾರು ಅರ್ಜಿ ಸಲ್ಲಿಸಿದ್ದರು. ಮುಂಡಗೋಡ ತಾಲೂಕ ಮಟ್ಟದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುವುದು, ಮುಂಡಗೋಡ ತಾಲೂಕ ಮಟ್ಟದ ಸಮಿತಿ ಆಗಿರುತ್ತದೆ ಎಂಬುದು ಗಮನಾರ್ಹ ಅಂಶವಾಗಿದೆ. ಅರ್ಜಿದಾರೆ ಚೈತ್ರಾ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ತಾಲೂಕ ಮಟ್ಟದ ಅಧಿಕಾರಿಗಳು ಜಿಲ್ಲಾ ಕಚೇರಿಗೆ ರವಾನೆ ಮಾಡದೆ ತಾವೇ ಅರ್ಜಿದಾರರಿಗೆ ಹಿಂಬರಹ ನೀಡಿ ಹಿರಿಯ ಅಧಿಕಾರಿಗಳ ಗಮನ ಸೆಳೆಯುವಲ್ಲಿ ವಿಫಲ ರಾಗಿದ್ದಾರೆ. ಇದರಿಂದ ಮುಂಡಗೋಡ ತಾಲೂಕಿನಲ್ಲಿ ಅರ್ಜಿ ಸಲ್ಲಿಕೆ ಮಾಡಿ, ಮೆರಿಟ್ ಕೋಟಾ ಇದ್ದರೂ ಕೇವಲ ತಾಂತ್ರಿಕ ಕಾರಣ ನೀಡಿ ಉದ್ಯೋಗಾವಕಾಶ ವಂಚಿತರನ್ನಾಗಿ ಮಾಡುವುದು ನಿಜಕ್ಕೂ ದುರ್ದೈವವೇ ಸರಿ.

**ಲೋಕಾಯುಕ್ತರಿಗೆ ದೂರು ನೀಡಿದ ಅರ್ಜಿದಾರೆ...!**

ಮುಂಡಗೋಡ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೋಡಿಕೊಂಡ ಅಂಗನವಾಡಿ ಸಹಾಯಕಿಂ–ಮರ ನೇಮಕಾತಿ ವಿಧಾನದಲ್ಲಿ ತನಗೆ ಅನ್ಯಾಯವಾಗಿದೆ ಎಂದು ಅರ್ಜಿದಾರೆ ಚೈತ್ರಾ ಅವರು ದಿ. 28/05/2025 ರ ಬುಧವಾರ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಲೋಕಾಯುಕ್ತ ಉತ್ತರ ಕನ್ನಡ ಜಿಲ್ಲೆಯ ಅಧಿಕಾರಿಗಳು ಆದ ಡಿ. ವೈ. ಎಸ್. ಪಿ ವಿನಾಯಕ ಬಿಲ್ಲವ ಅವರ ನೇತೃತ್ವದಲ್ಲಿ ನಡೆದ ಮಾಹಿತಿ ಮತ್ತು ಅಹವಾಲು ಸ್ವೀಕಾರ ಕಾರ್ಯಕ್ರಮ ವೇಳೆ ತೆರಳಿ ತನಗಾದ ಅನ್ಯಾಯದ ಕುರಿತು ದೂರು ನೀಡಿದ್ದು, ಸದರಿಯವರ ದೂರು ಅರ್ಜಿ ಪರಿಶೀಲಿಸಿದ ಲೋಕಾಯುಕ್ತ ಅಧಿಕಾರಿಗಳು , ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ರಾಮು ಬಯಲು ಸೀಮೆ ಅವರಿಗೆ ಸಮಸ್ಯೆ ಕುರಿತು ಅರ್ಜಿದಾರರಿಗೆ ಮೂರು ದಿನಗಳಲ್ಲಿ ಸಂಪೂರ್ಣ ಮಾಹಿತಿ ನೀಡಬೇಕು ಇಲ್ಲವಾದರೆ ಪ್ರಕರಣ ದಾಖಲು ಮಾಡುವ ಕುರಿತು ಎಚ್ಚರಿಕೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಅರ್ಜಿದಾರರನ್ನು ಕಚೇರಿಗೆ ಕರೆಯಿಸಿ ಪ್ರಾಥಮಿಕ ಮಾಹಿತಿಯನ್ನು ಅಧಿಕಾರಿ ರಾಮು ಬಯಲು ಸೀಮೆ ಅವರು ನೀಡಿದ್ದರು. ಅರ್ಜಿದಾರೆ ಹಾಗೂ ಸದರಿ ಸೈಬರ್ ಕೇಂದ್ರ ಮಾಲೀಕ ಹೇಳುವ ಪ್ರಕಾರ ನಾಲ್ಕೂ ಹಂತಗಳನ್ನು ಪೂರ್ಣ ಮಾಡಿದ್ದರು ಅಂತಿಮ ಆಯ್ಕೆ ಪಟ್ಟಿಯಲ್ಲಿ ಹೆಸರು ಇಲ್ಲದಿರುವುದು ,ಜಿಲ್ಲಾ ಮಟ್ಟದಲ್ಲಿ ಇಲಾಖೆಯ ವೆಬ್ಸೈಟ್ ದೋಷದಿಂದ ಆಗಿರಬಹುದಾಗಿದೆ? ಎಂದು ಅರ್ಜಿದಾರರು ವ್ಯವಸ್ಥೆ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ ಎಂಬ ಪರಿಸ್ಥಿತಿ ಅರ್ಜಿದಾರರದ್ದಾಗಿದೆ.

**ಜಿಲ್ಲಾಧಿಕಾರಿಗಳು ಮಧ್ಯಸ್ಥಿಕೆ ವಹಿಸಬೇಕಿದೆ : ಅರ್ಜಿದಾರರ ಅಳಲು...?**

ಸಂಪೂರ್ಣ ಅರ್ಹತೆ ಇದ್ದರೂ ಕೇವಲ ತಾಂತ್ರಿಕ ಕಾರಣ ನೀಡಿ ಉದ್ಯೋಗಾವಕಾಶ ವಂಚಿತರನ್ನಾಗಿ ಮಾಡುವುದು ಸಂವಿಧಾನ ವಿರೋಧಿಯಾಗಿದೆ, ಇದೇ ರೀತಿ ತಾಲೂಕಿನಲ್ಲಿ ಹಲವಾರು ಗ್ರಾಮಗಳ ಅಂಗನವಾಡಿ ಸಹಾಯಕಿಯರ ನೇಮಕಾತಿ ವಿಧಾನದಲ್ಲಿ ಕೂಡಾ ಆಗಿದೆ. ಅವರು ಕೂಡಾ ಈಗಾಗಲೇ ಎ ಸಿ, ಡಿಸಿ ಹಾಗೂ ಪ್ರಾದೇಶಿಕ ಆಯುಕ್ತರ ಹಂತದಲ್ಲಿ ದೂರು ನೀಡಿದ್ದಾರೆ ಎನ್ನಲಾಗಿದೆ.

**"ಒಟ್ಟಿನಲ್ಲಿ ಅರ್ಹ ಫಲಾನುಭವಿಗಳಿಗೆ ಮೋಸವಾಗಬಾರದು ಎನ್ನುವುದು ಪ್ರಜ್ಞಾವಂತರ ಕಳಕಳಿಯಾಗಿದೆ ".**

**– ಕರುನಾಡ ಕಂದ**




KARUNADA KANDA Fourthnightly, Printed by, Published by, owned by KARIBASAPPA BALIGAR and Printed at Nikhil offset Printers Ward No 23, Buddha Circle, Hosalli main Road, Gangavati 583227.Tq-Gangavati, Dist:Koppal, and Published at : # 94,at-Post-Gunnal, Tq-Yalaburga,Dst-Koppal,pin-583237,PH:9986366909, 9742776385 Editor-KARIBASAPPA BALIGAR